ಕರ್ನಾಟಕ ಸರ್ಕಾರ

# ಕರ್ನಾಟಕ ಕೃಷಿ ಬೆಲೆ ಆಯೋಗ


*(Karnataka Agriculture Price Commission)*

# ರೈತರ ಆತ್ಮಹತ್ಯೆ – ರೈತ ಮಹಿಳೆಯರ ಸಂತ್ರಸ್ತತೆ – ಬವಣೆಗಳು ಮತ್ತು ಪರಿಹಾರಗಳು

## ವರದಿ



"ನಾವು ಸದಾ ನಿಮ್ಮೊಂದಿಗೆ ಇದ್ದೇವೆ" ಎಂದು ಮಾನ್ಯ ಮುಖ್ಯಮಂತ್ರಿಗಳು ರೈತ ಮಹಿಳೆಯರಿಗೆ ಭರವಸೆ ನೀಡುತ್ತಿದ್ದಾರೆ ಮತ್ತು ಅವರ ಮಂತ್ರಿ ಮಂಡಳದ ಎಲ್ಲಾ ಸಚಿವರೂ ಸಹ ಅದಕ್ಕೆ ದ್ವನಿಗೂಡಿಸುತ್ತಿದ್ದಾರೆ.

| | | | | | | | | |
|---|---|---|---|---|---|---|---|---|
| <br>ಶ್ರೀ. ಗೋವಿಂದ ಕಾರಜೋಳ<br>ಉಪ ಮುಖ್ಯಮಂತ್ರಿಗಳು, ಲೋಕೊಪಯೋಗಿ ಹಾಗೂ ಸಮಾಜ್ಯ ಕಲ್ಯಾಣ ಸಚಿವರು, | <br>ಡಾ.ಅಶ್ವತ್‌ನಾರಾಯಣ್<br>ಉಪ ಮುಖ್ಯಮಂತ್ರಿಗಳು ಉನ್ನತ ಶಿಕ್ಷಣ, ಮಾಹಿತಿ, ಜೈವಿಕ ವಿಜ್ಞಾನ ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಸಚಿವರು | <br>ಶ್ರೀ.ಲಕ್ಷ್ಮಣ ಸವದಿ<br>ಉಪ ಮುಖ್ಯಮಂತ್ರಿಗಳು ಸಾರಿಗೆ ಸಚಿವರು | <br>ಶ್ರೀ.ಬಿ.ಸಿ.ಪಾಟೀಲ್<br>ಕೃಷಿ ಸಚಿವರು | <br>ಶ್ರೀ.ಕೆ.ಸಿ. ನಾರಾಯಣಗೌಡ<br>ತೋಟಗಾರಿಕೆ & ರೇಷ್ಮೆ, ಪೌರಡಳಿತ ಸಚಿವರು | <br>ಶ್ರೀ.ಕೋಟ ಶ್ರೀನಿವಾಸ ಪೂಜಾರಿ<br>ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು | <br>ಶ್ರೀ.ಪ್ರಭು ಚೌಹಾಣ್<br>ಪಶು ಸಂಗೋಪನೆ ಸಚಿವರು | <br>ಶ್ರೀ.ಎಸ್.ಟಿ. ಸೋಮಶೇಖರ್<br>ಸಹಕಾರ ಸಚಿವರು | <br>ಶ್ರೀ.ಕೆ.ಎಸ್. ಈಶ್ವರಪ್ಪ<br>ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಸಚಿವರು |
| <br>ಶ್ರೀ.ಜೆ.ಸಿ.ಮಾಧು ಸ್ವಾಮಿ<br>ಕಾನೂನು ಮತ್ತು ಸಣ್ಣ ನೀರಾವರಿ ಸಚಿವರು | <br>ಶ್ರೀ.ಬಿ.ಶ್ರೀರಾಮುಲು<br>ಆರೋಗ್ಯ ಸಚಿವರು | <br>ಶ್ರೀ.ಆರ್.ಅಶೋಕ್<br>ಕಂದಾಯ ಸಚಿವರು | <br>ಶ್ರೀ.ಎಸ್.ಸುರೇಶ್ ಕುಮಾರ್<br>ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಸಚಿವರು | <br>ಡಾ.ಕೆ.ಸುಧಾಕರ್<br>ವೈದ್ಯಕೀಯ ಶಿಕ್ಷಣ ಸಚಿವರು | <br>ಶ್ರೀಮತಿ.ಶಶಿಕಲಾ ಜೊಲ್ಲೆ<br>ಮಹಿಳೆಯರ & ಮಕ್ಕಳ ಅಭಿವೃದ್ಧಿ ವಿಕಲಚೇತನರ & ಹಿರಿಯ ನಾಗರೀಕರ ಸಬಲೀಕರಣ ಸಚಚಿವರು | <br>ಶ್ರೀ.ಜಗದೀಶ್ ಶೆಟ್ಟರ್<br>ಬೃಹತ್ & ಮದ್ಯಮ ಕೈಗಾರಿಕೆ, ಸಾರ್ವಜನಿಕ ಉದ್ಯಮ ಸಚಿವರು | <br>ಶ್ರೀ.ವಿ.ಸೋಮಣ್ಣ<br>ವಸತಿ ಸಚಿವರು | <br>ಶ್ರೀ. ಬಸವರಾಜ್ ಬೊಮ್ಮಯಿ<br>ಗೃಹ ಸಚಿವರು |
| <br>ಶ್ರೀ.ರಮೇಶ್ ಜಾರಕಿಹೊಳಿ<br>ನೀರಾವರಿ ಸಚಿವರು | <br>ಶ್ರೀ.ಬೈರತಿ ಬಸವರಾಜ್<br>ನಗರಾಭಿವೃದ್ಧಿ ಸಚಿವರು | <br>ಶ್ರೀ.ಸಿ.ಟಿ.ರವಿ<br>ಪ್ರವಾಸೋದ್ಯಮ, ಯುವ ಜನ ಮತ್ತು ಕ್ರೀಡಾ ಸಚಿವರು | <br>ಶ್ರೀ.ಕೆ.ಗೋಪಾಲಯ್ಯ<br>ಆಹಾರ, ನಾಹರೀಕರ ಸರಬರಾಜು & ಗ್ರಾಹಕರ ವ್ಯವಹಾರಗಳು ಸಚಿವರು | <br>ಶ್ರೀ.ಶ್ರೀಮಂತ ಪಾಟೀಲ್<br>ಜವಳಿ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು | <br>ಶ್ರೀ.ಸಿ.ಸಿ.ಪಾಟೀಲ್<br>ಗಣಿ & ಭೂ ವಿಜ್ಞಾನ ಸಚಿವರು | <br>ಶ್ರೀ.ಶಿವರಾಮ್ ಹೆಬ್ಬಾರ್<br>ಕಾರ್ಮಿಕ ಮತ್ತು ಸಕ್ಕರೆ ಸಚಿವರು | <br>ಶ್ರೀ.ಆನಂದ್ ಸಿಂಗ್<br>ಅರಣ್ಯ ಮತ್ತು ಪರಿಸರ ಸಚಿವರು | <br>ಶ್ರೀ.ಹೆಚ್.ನಾಗೇಶ್<br>ಅಬಕಾರಿ ಸಚಿವರು |

ಜೂನ್, 2020

**ಕರ್ನಾಟಕ ಕೃಷಿ ಬೆಲೆ ಆಯೋಗ**

ಕೃಷಿ ಆಯುಕ್ತಾಲಯದ ಆವರಣ, ಶೇಷಾದ್ರಿ ರಸ್ತೆ,
ಬೆಂಗಳೂರು-560001.

# ಕರ್ನಾಟಕ ಕೃಷಿ ಬೆಲೆ ಆಯೋಗದ ಸಾಂಸ್ಥಿಕ ಚೌಕಟ್ಟು

| | | |
|---|---|---|
| 1. | **ಶ್ರೀ ಹನುಮನಗೌಡ ಬೆಳಗುರ್ಕಿ** | **ಅಧ್ಯಕ್ಷರು** |
| 2. | ಶ್ರೀಮತಿ ಎನ್ ನಾಗಾಂಬಿಕ ದೇವಿ, ಭಾ.ಆ.ಸೇ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಹಕಾರ ಇಲಾಖೆ (ವರ್ಗಾವಣೆಗೊಂಡಿರುತ್ತಾರೆ).<br>ಶ್ರೀ.ತುಷಾರ್ ಗಿರಿನಾಥ್, ಭಾ.ಆ.ಸೇ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ | ಸದಸ್ಯರು |
| 3 | ಡಾ.ರಾಜ್ ಕುಮಾರ್ ಕತ್ರಿ, ಭಾ.ಆ.ಸೇ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ | ಸದಸ್ಯರು |
| 4. | ಶ್ರೀ. ಬಿ.ವೈ. ಶ್ರೀನಿವಾಸ್, ಕೃಷಿ ನಿರ್ದೇಶಕರು, ಕೃಷಿ ಇಲಾಖೆ. | ಸದಸ್ಯ ಕಾರ್ಯದರ್ಶಿಗಳು |
| 5. | ಶ್ರೀ.ರಾಜೇಂದರ್ ಕುಮಾರ್ ಕಟಾರಿಯಾ, ಭಾ.ಆ.ಸೇ, ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ | ವಿಶೇಷ ಆಹ್ವಾನಿತರು |
| 6. | ಶ್ರೀ.ಬ್ರಿಜೇಶ್ ಕುಮಾರ್ ದೀಕ್ಷಿತ್, ಭಾ.ಅ.ಸೇ, ಕೃಷಿ ಆಯುಕ್ತರು, ಕೃಷಿ ಇಲಾಖೆ. | ಖಾಯಂ ಆಹ್ವಾನಿತರು |
| 7. | ನಿರ್ದೇಶಕರು, ಕೃಷಿ ಮಾರುಕಟ್ಟೆ ಇಲಾಖೆ. | ಖಾಯಂ ಆಹ್ವಾನಿತರು |
| 8. | ನಿರ್ದೇಶಕರು, ತೋಟಗಾರಿಕೆ ಇಲಾಖೆ. | ಖಾಯಂ ಆಹ್ವಾನಿತರು |
| 9. | ಆಯುಕ್ತರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ. | ಖಾಯಂ ಆಹ್ವಾನಿತರು |
| 10. | ಡಾ. ಎನ್. ವಿ. ಕಮಲ, ಉಪ ಕೃಷಿ ನಿರ್ದೇಶಕರು, ಕೃಷಿ ಬೆಲೆ ಆಯೋಗ. | ತಾಂತ್ರಿಕ ಅಧಿಕಾರಿಗಳು |
| 11. | ಶ್ರೀಮತಿ. ಬಿ.ವಿ. ಸುಮ, ಕೃಷಿ ಅಧಿಕಾರಿ. ಕೃಷಿ ಬೆಲೆ ಆಯೋಗ. | ತಾಂತ್ರಿಕ ಅಧಿಕಾರಿಗಳು |

## ಕಾರ್ಯತಂಡ

**ಹೆಚ್ಚುವರಿ ತಾಂತ್ರಿಕ ಸಲಹೆಗಾರರು**

ಶ್ರೀ. ನಿರಂಜನ್ ಐತಾಳ್

**ತಾಂತ್ರಿಕ ಸಹಾಯಕರು**

ಡಾ. ಜನಾರ್ಧನ, ಕೆ.ಎಸ್
ಕುಮಾರಿ ನಿಶಿತಾ, ಕೆ.
ಶ್ರೀಮತಿ ಜಯಶ್ರೀ, ನಾರಾಯಣಪುರ

**ಸಿಬ್ಬಂದಿ ವರ್ಗ**

ಡಾ. ಶ್ರೀಧರ ಅಡಿಗ, ಆಪ್ತ ಕಾರ್ಯದರ್ಶಿ
ಶ್ರೀ ಎಂ.ಎನ್.ಆನಂದ ಕುಮಾರ್ (ಪ್ರ.ದ.ಸ)
ಶ್ರೀ. ಸಂದೀಪ, ಆರ್ (ಸಹಾಯಕರು)
ಕುಮಾರಿ ಎಂ.ಚಂಪಕಲಾ (ಬೆರಳಚ್ಚುಗಾರರು)
ಶ್ರೀ. ಅಬ್ದುಲ್ ಬಾಷಾ (ವಾಹನ ಚಾಲಕರು)
ಶ್ರೀ. ಡಿ.ಜಿ. ಶಂಕರ್ ('ಡಿ' ಗ್ರೂಪ್ ನೌಕರರು)

ಕರ್ನಾಟಕ ಸರ್ಕಾರ

ಕರ್ನಾಟಕ ಕೃಷಿ ಬೆಲೆ ಆಯೋಗ

*(Karnataka Agriculture Price Commission)*

# ರೈತರ ಆತ್ಮಹತ್ಯೆ – ರೈತ ಮಹಿಳೆಯರ ಸಂತ್ರಸ್ತತೆ – ಬವಣೆಗಳು ಮತ್ತು ಪರಿಹಾರಗಳು

ಒಂದು ವರದಿ

**ಕರ್ನಾಟಕ ಕೃಷಿ ಬೆಲೆ ಆಯೋಗವು ಕರ್ನಾಟಕ ರಾಜ್ಯ ಸರ್ಕಾರದ ಕೃಷಿ, ತೋಟಗಾರಿಕೆ, ಪಶು ಸಂಗೋಪನೆ, ಮೀನುಗಾರಿಕೆ, ರೇಷ್ಮೆ, ಸಹಕಾರ, ಮಾರುಕಟ್ಟೆ, ಸಮಾಜ ಕಲ್ಯಾಣ, ನೀರಾವರಿ, ಕಂದಾಯ, ಅರಣ್ಯ, ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಪೋಲಿಸ್ ಮುಂತಾದ ಇಲಾಖೆಗಳು, ರೈತ ಸಂಘಟನೆಗಳು, ಪ್ರಗತಿಪರ ರೈತರು, ಮಹಿಳಾ ಕಿಸಾನ್ ಅಧಿಕಾರ್ ಮಂಚ್ [ಮಾಕಂ] ಕರ್ನಾಟಕ ಇವುಗಳ ಸಹಯೋಗದೊಂದಿಗೆ ಸಿದ್ಧಪಡಿಸಿದ ಶಿಫಾರಸ್ಸುಗಳು.**


ಜೂನ್, 2020

ಕರ್ನಾಟಕ ಕೃಷಿ ಬೆಲೆ ಆಯೋಗ

ಕೃಷಿ ಆಯುಕ್ತಾಲಯದ ಆವರಣ, ಶೇಷಾದ್ರಿ ರಸ್ತೆ,
ಬೆಂಗಳೂರು-560001.

# ವಿಷಯ ಸೂಚಿ


| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| | ಮುನ್ನುಡಿ | i - ii |
| 1 | ಪೀಠಿಕೆ | 1 – 2 |
| 2 | ಮಹಿಳಾ ಕಿಸಾನ್ ಅಧಿಕಾರ್ ಮಂಚ್ (ಮಾಕಂ) ಸಂಸ್ಥೆಯ ಅಧ್ಯಯನ | 2 – 4 |
| 3 | **ಸರ್ಕಾರದ ಪರಿಹಾರೋಪಾಯಗಳು**<br>(ಅ) ನೇರವಾಗಿ ನೀಡುವ ಪರಿಹಾರ<br>(ಆ) ವಿವಿಧ ಇಲಾಖೆಗಳಿಂದ ದೊರಕುವ ಸೌಲಭ್ಯಗಳು | 5 – 9 |
| 4 | ಪ್ರಾತಿನಿಧಿಕ ರೈತರ ಅಭಿಪ್ರಾಯಗಳು | 9 – 10 |
| 5 | ಆಯೋಗದ ಅಧಿಕಾರಿಗಳು, ಸಲಹೆಗಾರರು ಹಾಗೂ ತಾಂತ್ರಿಕ ಸಹಾಯಕರ ಅಭಿಪ್ರಾಯಗಳು | 11 – 13 |
| 6 | **ಕೃಷಿ ಬೆಲೆ ಆಯೋಗದ ಶಿಫಾರಸ್ಸುಗಳು** | 13 – 15 |
| 7 | ಪರಿಸಮಾಪ್ತಿ | 15 – 16 |
| 8 | ಅನುಬಂಧಗಳು | |
| | 1. 2003-04ರಿಂದ 2019-20ನೇ ಸಾಲಿನ ವರೆಗಿನ ರೈತರ ಆತ್ಮಹತ್ಯೆ ವಿವರಗಳು. | 17 |
| | 2. 2015-16ರಿಂದ 2019-20ನೇ ಸಾಲಿನ ವರೆಗಿನ ಜಿಲ್ಲಾವಾರು ರೈತರ ಆತ್ಮಹತ್ಯೆ ವಿವರ. | 18 |
| | 3. 2018-19 ಮತ್ತು 2019-20ನೇ ಸಾಲಿನಲ್ಲಿ ರಾಜ್ಯದಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ವಿವಿಧ ಇಲಾಖೆಗಳಿಂದ ನೀಡಲಾಗುತ್ತಿರುವ ವಿಶೇಷ ಸೌಲಭ್ಯಗಳು. | 19 |
| | 4. ಸರ್ಕಾರದ ಆದೇಶ – ರೈತರ ಆತ್ಮಹತ್ಯೆ ಪ್ರಕರಣಗಳನ್ನು ವರದಿ ಮಾಡಲು ಕಾಲ ಮಿತಿ ನಿಗಧಿ ಮಾಡುವ ಕುರಿತು. | 20 – 23 |
| | 5. ಸರ್ಕಾರದ ಆದೇಶ – ಕೃಇ 75 ಕೃಉಇ 2016,<br>ಅ) ಆತ್ಮಹತ್ಯೆಗೆ ಶರಣಾದ ರೈತರ ಕುಟುಂಬಗಳಿಗೆ ವಿಶೇಷ ಸೌಲಭ್ಯಗಳನ್ನು ದೊರಕಿಸಲು ಉಸ್ತುವಾರಿ ಸಮಿತಿ ರಚಿಸುವ ಕುರಿತು ದಿನಾಂಕ: 25.02.2017<br>ಆ) ಆತ್ಮಹತ್ಯೆಗೆ ಶರಣಾದ ರೈತರ ಕುಟುಂಬಗಳಿಗೆ | 24 – 25 |

| | | |
|---|---|---|
| | ವಿಶೇಷ ಸೌಲಭ್ಯ ದೊರಕಿಸಲು ಉಸ್ತುವಾರಿ ಸಮಿತಿ ರಚಿಸುವ ಕುರಿತು ದಿನಾಂಕ: 14.07.2016 | 26 –27 |
| | 6. ಸರ್ಕಾರದ ಆದೇಶ – ರೈತರ ಆತ್ಮಹತ್ಯೆ ಪ್ರಕರಣಗಳನ್ನು ಇತ್ಯರ್ಥ ಪಡಿಸಲು ಹೆಚ್ಚಿನ ಮೇಲ್ಮನವಿ ಪ್ರಾಧಿಕಾರವನ್ನು ರಚಿಸುವ ಕುರಿತು. | 28 – 30 |
| | 7. ಸರ್ಕಾರದ ಆದೇಶ – ಸಾಲದ ಹೊರೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ಪರಿಹಾರ ಧನ ನೀಡಲು ಅನುಸರಿಸುತ್ತಿರುವ ಮಾನದಂಡಗಳನ್ನು ಪರಿಷ್ಕರಿಸುವ ಬಗ್ಗೆ. | 31 – 32 |
| | 8. ಕೃಷಿ ಬೆಲೆ ಆಯೋಗವು ದಿನಾಂಕ: 29.02.2020ರಂದು ಕೃಷಿ ಆಯುಕ್ತಾಲಯದ ಸಮೃದ್ಧಿ ಸಭಾಂಗಣದಲ್ಲಿ ಆಯೋಜಿಸಿದ್ದ "ಸಂತ್ರಸ್ತ ರೈತ ಮಹಿಳೆಯರ ಬವಣೆಗಳು ಮತ್ತು ಪರಿಹಾರಗಳ ಸಾಧ್ಯತೆ" ಎಂಬ ವಿಷಯದ ಬಗೆಗಿನ ಕಾರ್ಯಾಗಾರದ ನಡವಳಿಗಳು. | 33 – 38 |



.

# ಮುನ್ನುಡಿ

ಜನ ಜೀವನದ ಯಾವುದೇ ಕ್ಷೇತ್ರದಲ್ಲಾಗಲೀ ನಾಗರಿಕರು ಸಂತ್ರಸ್ತರಾದ ಪಕ್ಷದಲ್ಲಿ ಅವರುಗಳಿಗೆ ಸಾಂತ್ವನ ನೀಡುವುದು ಹಾಗೂ ಪರಿಹಾರವನ್ನು ಒದಗಿಸುವುದು ಕಲ್ಯಾಣ ರಾಷ್ಟ್ರವಾದ ಭಾರತದ ಸಿದ್ಧಾಂತವಾಗಿದೆ. ಕರ್ನಾಟಕದಲ್ಲಿ ಕೃಷಿಯು ಒಂದು ಮುಖ್ಯ ಕಸುಬಾಗಿದ್ದು, ರಾಜ್ಯದ ರೈತರು ಉತ್ತಮ ಕೃಷಿಯನ್ನು ಮಾಡುತ್ತಿದ್ದಾರೆ. ಕೃಷಿ ಉತ್ಪಾದನೆ ಮತ್ತು ಉತ್ಪಾದಕತೆಗಳಿಗೆ ಸಂಬಂಧಿಸಿದಂತೆ ರಾಷ್ಟ್ರದ ಇತರ ಕೆಲವು ರಾಜ್ಯಗಳೊಂದಿಗೆ ಕರ್ನಾಟಕವು ರಾಷ್ಟ್ರದ ಮುಂಚೂಣಿಯಲ್ಲಿದೆ. ರಾಜ್ಯದಲ್ಲಿ ಹತ್ತು ಕೃಷಿ ಹವಾಮಾನ ವಲಯಗಳು ಇದ್ದು, ಸುಮಾರು 27 ಪ್ರಮುಖ ಹಾಗೂ ಇನ್ನಿತರ ಕೃಷಿ ಮತ್ತು ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿದೆ. ರಾಜ್ಯ ಸರ್ಕಾರ ಹಾಗೂ ಕೃಷಿ ವಿಶ್ವವಿದ್ಯಾಲಯಗಳ ನೆರವಿನೊಂದಿಗೆ ಆಧುನಿಕ ಕೃಷಿ ತಂತ್ರಜ್ಞಾನಗಳನ್ನು ಬಳಸಿ ಕೃಷಿಯನ್ನು ಮಾಡುತ್ತಿದ್ದರೂ ಕೇವಲ ಬೆರಳೆಣಿಕೆಯಷ್ಟು ರೈತರು ಮಾತ್ರ ಹೆಚ್ಚಿನ ಲಾಭ ಪಡೆಯುತ್ತಿದ್ದಾರೆ. ಜೊತೆಗೆ ಕೆಲವು ಪ್ರಗತಿಪರ ರೈತರು ತಮ್ಮ ಉತ್ಪನ್ನಗಳನ್ನು ರಫ್ತು ಸಹ ಮಾಡಿ ಹೆಚ್ಚಿನ ಹಣವನ್ನು ಗಳಿಸುತ್ತಿದ್ದಾರೆ.

ಹೀಗಿದ್ದಾಗ್ಯೂ ಬೆಳೆ ಅನಿಶ್ಚಿತತೆಯಿಂದಾಗಿ ಮತ್ತು ಮಾರುಕಟ್ಟೆಯಲ್ಲಿನ ಬೆಲೆ ಏರಿಳಿತಗಳಿಂದಾಗಿ ಬೆಳೆಗಾಗಿ ಮಾಡಿದ ಖರ್ಚಿನಷ್ಟೂ ಆದಾಯ ಬಾರದೆ, ಬೆಳೆ ಬೆಳೆಯಲು ತೆಗೆದುಕೊಂಡಿದ್ದ ಸಾಲವನ್ನು ತೀರಿಸಲು ರೈತರು ಪರಿತಪಿಸುತ್ತಿದ್ದಾರೆ. ಇಂತಹ ರೈತರಲ್ಲಿ ಕೆಲವರು ಗೌರವ ಘನತೆಗೆ ಹೆದರಿ, ಮನಸ್ಸು ದುರ್ಬಲವಾಗಿ, ಭಾವಾವೇಶಕ್ಕೆ ಒಳಗಾಗಿ ಆತ್ಮಹತ್ಯೆಗೆ ಶರಣಾಗುತ್ತಿರುವುದು ವಿಷಾದನೀಯವಾಗಿದೆ.

ರೈತರು ಆತ್ಮಹತ್ಯೆ ಮಾಡಿಕೊಂಡ ನಂತರ, ಅವರ ಕುಟುಂಬಗಳು ಕೇವಲ ದುಃಖಕ್ಕೆ ಮಾತ್ರವಲ್ಲದೆ, ಅನೇಕ ರೀತಿಯ ಕಷ್ಟನಷ್ಟಗಳಿಗೆ ಗುರಿಯಾಗುತ್ತವೆ. ರೈತರು ಮಾಡಿಕೊಂಡಿದ್ದ ಸಾಲವನ್ನು ತೀರಿಸುವಿಕೆ, ಮಕ್ಕಳ ವಿದ್ಯಾಭ್ಯಾಸ, ಮುಂದಿನ ಜೀವನೋಪಾಯ ಇಂತಹ ಹಲವಾರು ಸಮಸ್ಯೆಗಳು ಏಳುತ್ತವೆ. ಮನೆಯಲ್ಲಿ ಹಿರಿಯರು ಇದ್ದರೆ ಮತ್ತು ಅವರುಗಳು ರೈತನ ಪತ್ನಿ ಮತ್ತು ಮಕ್ಕಳ ಬಗ್ಗೆ ಅನುಕಂಪ ಉಳ್ಳವರಾಗಿದ್ದರೆ ಈ ಪ್ರಶ್ನೆಗಳು ತನ್ನಿಂತಾನೇ ಪರಿಹಾರವಾಗಿ ಬಿಡುತ್ತವೆ. ಇಲ್ಲದಿದ್ದ ಪಕ್ಷದಲ್ಲಿ ಇವೆಲ್ಲಾ ಸಮಸ್ಯೆಗಳೂ ಒಟ್ಟಾಗಿ ಕಾಡಿ ರೈತನ ಪತ್ನಿ ಮತ್ತು ಮಕ್ಕಳು ದಿಕ್ಕೆಡುತ್ತಾರೆ.

ಸರ್ಕಾರವು ರೈತನ ಆತ್ಮಹತ್ಯೆಗೆ ಪರಿಹಾರವಾಗಿ 5 ಲಕ್ಷ ರೂಪಾಯಿಗಳ ಮೊತ್ತವನ್ನು ಸಂತ್ರಸ್ತ ಕುಟುಂಬಕ್ಕೆ ನೀಡುತ್ತದೆ. ಜೊತೆಗೆ ರೈತನ ಪತ್ನಿಗೆ ವಿಧವಾ ವೇತನವಾಗಿ ತಿಂಗಳಿಗೆ 2 ಸಾವಿರ ರೂ.ಗಳನ್ನು ನೀಡುತ್ತದೆ. ಇದೂ ಅಲ್ಲದೆ ಸರ್ಕಾರದ ವಿವಿಧ ಇಲಾಖೆಗಳು ಸಂತ್ರಸ್ತ ಕುಟುಂಬಕ್ಕೆ ಚಾಲ್ತಿ ಯೋಜನೆಗಳ ಮೂಲಕ ನೆರವನ್ನು ನೀಡುತ್ತಿವೆ. ಆದರೆ ಅನೇಕ ನಿಬಂಧನೆಗಳಿಂದಾಗಿ ವಾಸ್ತವದಲ್ಲಿ ಆತ್ಮಹತ್ಯೆಯಿಂದ ಸಂತ್ರಸ್ತವಾದ ಕುಟುಂಬಗಳ ಇನ್ನೂ ಹಲವಾರು ಮಹಿಳೆಯರಿಗೆ ಸರ್ಕಾರದ ಸೌಲಭ್ಯಗಳು ದೊರಕಿರುವುದಿಲ್ಲ. ಹಣಕಾಸು ಸಂಸ್ಥೆಗಳ ಸಾಲ ವಸೂಲಾತಿ ಕ್ರಮಗಳು, ಸಾಮಾಜಿಕ ಪದ್ಧತಿಗಳು ಇತ್ಯಾದಿಗಳಿಂದಾಗಿ ಪರಿಹಾರದ ಹಣ ಸಂತ್ರಸ್ತ ಕುಟುಂಬದ ಉಪಯೋಗಕ್ಕಾಗಿ ಉಳಿಯುತ್ತಿದೆಯೇ ಎಂಬುದು ಇಲ್ಲಿ ಮುಖ್ಯವಾಗುತ್ತದೆ.

ಮಹಿಳಾ ಕಿಸಾನ್ ಅಧಿಕಾರ್ ಮಂಚ್ (ಮಾಕಂ) ಸಂಸ್ಥೆಯು ಈ ಸಮಸ್ಯೆಯ ಬಗ್ಗೆ ಒಂದು ಸಮೀಕ್ಷಾ ಅಧ್ಯಯನವನ್ನು ಮಾಡಿದೆ. ಈ ಅಧ್ಯಯನವನ್ನು ಆಧಾರವಾಗಿಟ್ಟುಕೊಂಡು ಕರ್ನಾಟಕ ಕೃಷಿ ಬೆಲೆ ಆಯೋಗವು ಸರ್ಕಾರದ ಸಂಬಂಧಪಟ್ಟ ಇಲಾಖೆಗಳ ಪ್ರತಿನಿಧಿಗಳು, ರೈತ ಪ್ರತಿನಿಧಿಗಳು ಮುಂತಾದವರನ್ನೊಳಗೊಂಡ ಕಾರ್ಯಾಗಾರವೊಂದನ್ನು ನಡೆಸಿತು. ಕಾರ್ಯಾಗಾರದ ನಡವಳಿಗಳ ಆಧಾರದ ಮೇಲೆ ಪ್ರಸ್ತುತ ವರದಿಯನ್ನು

ತಯಾರಿಸಲಾಗಿದೆ. ಈ ವರದಿಯು ಸರ್ಕಾರದ ಮಟ್ಟದಲ್ಲಿ ಕಾರ್ಯನೀತಿ ರೂಪಿಸುವವರಿಗೆ ಹಾಗೂ ಆಡಳಿತಗಾರರಿಗೆ ವಿಶೇಷವಾಗಿ ಉಪಯುಕ್ತವಾಗಲಿದೆ.

ಮಹಿಳಾ ಕಿಸಾನ್ ಅಧಿಕಾರ್ ಮಂಚ್ (ಮಾಕಂ) ಸಂಸ್ಥೆಯ ಕಾರ್ಯಕರ್ತೆಯರಾದ ಶ್ರೀಮತಿ ಕವಿತಾ ಕುರಗಂಟಿ, ಶ್ರೀಮತಿ. ಕವಿತಾ ಶ್ರೀನಿವಾಸನ್ ಇವರುಗಳಿಗೆ ಕಾರ್ಯಾಗಾರದಲ್ಲಿ ಭಾಗವಹಿಸಿ ಅವರ ಅಧ್ಯಯನವನ್ನು ಪ್ರಸ್ತುತ ಪಡಿಸಿದ್ದಕ್ಕೆ ವಿಶೇಷವಾಗಿ ಅಭಿನಂದಿಸುತ್ತೇನೆ. ಇದೇ ರೀತಿ ರೈತರ ಹಿತಕ್ಕಾಗಿ ಇರುವ ಕೆಲವು ರೈತ ಸಂಸ್ಥೆಗಳ ಪ್ರತಿನಿಧಿಗಳು ಆಸಕ್ತಿ ವಹಿಸಿ ಬಂದು ತಮ್ಮ ಅಮೂಲ್ಯ ಅಭಿಪ್ರಾಯಗಳನ್ನು ನೀಡಿದ್ದಕ್ಕಾಗಿ ಅವರಿಗೂ ನನ್ನ ಕೃತಜ್ಞತೆಗಳನ್ನು ತಿಳಿಸುತ್ತೇನೆ. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಸಂತ್ರಸ್ತ ಮಹಿಳೆಯರ ಬಗ್ಗೆ ತೀವ್ರವಾಗಿ ಸ್ಪಂದಿಸಿ ತಮ್ಮ ಅಭಿಪ್ರಾಯಗಳನ್ನು ನೀಡಿದ್ದಕ್ಕಾಗಿ ಅವರುಗಳಿಗೆ ನಾನು ಆಭಾರಿಯಾಗಿರುತ್ತೇನೆ.

ವರದಿಯನ್ನು ತಯಾರಿಸುವಲ್ಲಿ ವಿಶೇಷ ಆಸಕ್ತಿ ವಹಿಸಿ ಕರ್ತವ್ಯ ನಿರ್ವಹಿಸಿರುವ ಆಯೋಗದ ಎಲ್ಲಾ ಸಿಬ್ಬಂದಿ ವರ್ಗಕ್ಕೂ, ಕೃಷಿ ಆಯುಕ್ತರಿಗೂ, ತೋಟಗಾರಿಕೆ ಇಲಾಖೆ ನಿರ್ದೇಶಕರಿಗೂ, ಕೃಷಿ ಮಾರಾಟ ಇಲಾಖೆಯ ನಿರ್ದೇಶಕರಿಗೂ ಹಾಗೂ ಕೃಷಿ ನಿರ್ದೇಶಕರು ಮತ್ತು ಸದಸ್ಯ ಕಾರ್ಯದರ್ಶಿಗಳು, ಕೃಷಿ ಬೆಲೆ ಆಯೋಗ ಇವರೆಲ್ಲರಿಗೂ ಈ ಸಂದರ್ಭದಲ್ಲಿ ಅಭಿನಂದನೆ ಸಲ್ಲಿಸುತ್ತೇನೆ.

ದಿನಾಂಕ: 19.06.2020
ಸ್ಥಳ: ಬೆಂಗಳೂರು

**ಹನುಮನಗೌಡ ಬೆಳಗುರ್ಕಿ**
ಅಧ್ಯಕ್ಷರು
ಕರ್ನಾಟಕ ಕೃಷಿ ಬೆಲೆ ಆಯೋಗ

## 1. ಪೀಠಿಕೆ

ಭಾರತವು ಒಂದು ಪುರಾತನ ರಾಷ್ಟ್ರ. ಉತ್ತಮ ಜೀವನದ ಸಂಸ್ಕೃತಿಯು ಇಲ್ಲಿ ಶತಶತಮಾನಗಳಿಂದ ಪಸರಿಸಿದ್ದು, ಇದರ ಆಳವಾದ ಬೇರುಗಳು ರಾಷ್ಟ್ರಾದ್ಯಂತ ಹರಡಿಕೊಂಡಿವೆ. ಈ ಸನಾತನ ಸಂಸ್ಕೃತಿಯು ಭಾರತೀಯರಿಗೆ ಜೀವನವನ್ನು ಸಮಗ್ರ ದೃಷ್ಟಿಯಿಂದ ನೋಡಲು ಕಲಿಸಿದೆ. ಇಲ್ಲಿಯ ಜನರು ತಲೆ ತಲಾಂತರಗಳಿಂದ ಬಂದ ರೂಢಿ ಮತ್ತು ಸಂಪ್ರದಾಯಗಳನ್ನು ತಮ್ಮ ಹಿರೀಕರು ಮತ್ತು ಸಮಾಜದ ಇತರರು ಪಾಲಿಸಿಕೊಂಡು ಬಂದ ರೀತಿಯಲ್ಲಿಯೇ ತಾವೂ ಪಾಲಿಸುವವರಾಗಿದ್ದಾರೆ. ಸಮಾಜ ಹಾಗೂ ಕುಟುಂಬಗಳಲ್ಲಿ ತಾವೂ ಒಂದು ಭಾಗ ಎಂದು ತಿಳಿದು ಅವುಗಳ ಏಳಿಗೆಯೇ ತಮ್ಮ ಏಳಿಗೆ ಎಂದು ಜೀವನ ಸಾಗಿಸುತ್ತಾರೆ. ಹೀಗಾಗಿ ಅವರಿಗೆ ವೈಯುಕ್ತಿಕ ಲಾಭ ಅಥವಾ ನಷ್ಟ ಗೌಣವಾಗಿರುತ್ತದೆ. ಗ್ರಾಮಗಳು ಭಾರತೀಯ ಸಂಸ್ಕೃತಿಯ ಪ್ರತಿಬಿಂಬವಾಗಿದ್ದು, ಬಹುತೇಕ ಗ್ರಾಮಸ್ಥರಲ್ಲಿ ಈ ರೀತಿಯ ಸಂಸ್ಕೃತಿಯು ಅವರ ಇಡೀ ಜೀವನದಲ್ಲಿ ಅವಿಭಾಜ್ಯವಾಗಿರುತ್ತದೆ.

ಗ್ರಾಮೀಣ ಭಾರತವು ದೇಶಕ್ಕೆ ಅನ್ನ ಒದಗಿಸುತ್ತಿದೆ. ಇಲ್ಲಿಯ ಹೆಚ್ಚಿನ ಜನರು ಕೃಷಿ ಭೂಮಿಯನ್ನು ಹೊಂದಿದ್ದಾರೆ. ಮಳೆ ನೀರು ಕೃಷಿಗೆ ಮೂಲಭೂತವಾಗಿದ್ದು, ಪ್ರಕೃತಿಯ ಕೃಪೆಯಿಂದ ಪ್ರತಿ ವರ್ಷವೂ ಆಯಾ ಹಂಗಾಮುಗಳಲ್ಲಿ ಮಳೆ ಬೀಳುತ್ತಿದ್ದು, ಕೃಷಿಕರು ಅದನ್ನನುಸರಿಸಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಕೃಷಿಕನ ಕುಟುಂಬವು ವರ್ಷಪೂರ್ತಿ ವಿವಿಧ ರೀತಿಯ ಕಾರ್ಯಚಟುವಟಿಕೆಗಳಲ್ಲಿ ತೊಡಗಿದರೆ ಮಾತ್ರ ಇಡೀ ವರ್ಷಕ್ಕೆ ಸಾಕಾಗುವಷ್ಟು ಆದಾಯವು ದೊರಕುತ್ತದೆ. ಭೂಮಿ ಹಾಗೂ ಸೂರ್ಯನ ಬೆಳಕು ಅವರ ಬಾಳಿಗೆ ಅನಿವಾರ್ಯವಾಗಿರುತ್ತದೆ. ಪ್ರತಿಯೊಬ್ಬ ಕೃಷಿಕರೂ ಬೆಳಗ್ಗೆ ಎದ್ದಕೂಡಲೇ ಎಳ್ಳು, ಜೀರಿಗೆ ಮುಂತಾದ ಜೀವನಾವಶ್ಯಕ ಬೆಳೆಗಳನ್ನು ನೀಡುವ ಭೂಮಿ ತಾಯಿಯನ್ನು ಮತ್ತು ಬೆಳಕನ್ನು ನೀಡುವ ಸೂರ್ಯ ದೇವರನ್ನು ನೆನೆಯುತ್ತಾರೆ. ಅವರ ಕುಟುಂಬವು ಸಮಗ್ರವಾಗಿದ್ದು, ಅದರಲ್ಲಿ ಕುಟುಂಬದ ಸದಸ್ಯರೊಡನೆ ಪಶು ಸಂಪತ್ತೂ ಇರುತ್ತದೆ. ಈ ಪಶು ಸಂಪತ್ತೂ ಸಹ ಕುಟುಂಬಕ್ಕೆ ಎಲ್ಲ ಕಾರ್ಯಗಳಲ್ಲಿ ನೆರವಾಗುವುದಲ್ಲದೆ, ಆದಾಯವನ್ನೂ ಗಳಿಸಿಕೊಡುತ್ತದೆ.

ಕೃಷಿಕರು ಅನಾದಿ ಕಾಲದಿಂದಲೂ ದೇಶದ ಬೆನ್ನೆಲುಬಾಗಿದ್ದಾರೆ. ದೇಶ ಯಾರಿಂದ ಆಳಲ್ಪಟ್ಟರೂ ಅದರ ಗೊಡವೆಗೆ ಹೋಗದೆ ಆಯಾ ಋತುಮಾನಕ್ಕೆ ತಕ್ಕಂತೆ ಋಷ್ಟಿಯಲ್ಲಾಗಲಿ ಅಥವಾ ನೀರಾವರಿಯಲ್ಲಾಗಲಿ ತಮ್ಮ ಸಾಂಪ್ರದಾಯಿಕ ಅನುಭವ ಹಾಗೂ ಆಧುನಿಕ ತಾಂತ್ರಿಕತೆ ಇವುಗಳನ್ನು ಬಳಸಿಕೊಂಡು ಬೆಳೆಗಳನ್ನು ಬೆಳೆಯುತ್ತಿದ್ದಾರೆ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತರ ಈ "ಕಾಯಕವೇ ಕೈಲಾಸ" ಎಂಬ ಕರ್ಮಯೋಗಕ್ಕೆ ಪ್ರತಿಫಲವಾಗಿ ಗ್ರಾಮ ಜೀವನವನ್ನು ಸಹ್ಯವಾಗಿಸಲು ಅನೇಕ ಯೋಜನೆಗಳು, ಕಾರ್ಯಕ್ರಮಗಳು ಇತ್ಯಾದಿಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸುತ್ತಿವೆ. ಇದರಿಂದಾಗಿ ರೈತರು ಹಾಗೂ ಅವರ ಕುಟುಂಬಗಳು ಆಧುನಿಕ ಕಾಲಕ್ಕೆ ತಮ್ಮನ್ನು ಹೊಂದಿಸಿಕೊಳ್ಳುತ್ತಿದ್ದಾರೆ ಮತ್ತು ಸರ್ಕಾರದ ಪರಿಶ್ರಮಕ್ಕೆ ಸ್ಪಂದಿಸುತ್ತಿದ್ದಾರೆ. ರಾಷ್ಟ್ರದ ಹಾಗೂ ರಾಜ್ಯದ ಆಹಾರ ಉತ್ಪಾದನೆ ಹೆಚ್ಚಾಗಿದೆ ಹಾಗೂ ಉತ್ಪಾದಕತೆಯೂ ಅಧಿಕವಾಗಿದೆ. ರೈತರು ದೇಶದ ಅಗತ್ಯತೆಯನ್ನು ಅನುಸರಿಸಿ ಕೇವಲ ಆಹಾರ ಬೆಳೆಗಳನ್ನು ಬೆಳೆಯುವುದರ ಬದಲಾಗಿ ವಾಣಿಜ್ಯ ಬೆಳೆಗಳಾದ ಕಬ್ಬು, ಹತ್ತಿ, ತಂಬಾಕು ಇವುಗಳನ್ನೂ ಬೆಳೆಯುತ್ತಿದ್ದಾರೆ. ಜೊತೆಗೆ ತೋಟಗಾರಿಕೆ ಬೆಳೆಗಳು, ಪ್ಲಾಂಟೇಶನ್ ಬೆಳೆಗಳಾದ ರಬ್ಬರ್, ತೇಗ ಇತ್ಯಾದಿಗಳ ವ್ಯವಸಾಯವನ್ನೂ ಮಾಡುತ್ತಿದ್ದಾರೆ.

ಕೃಷಿಕನ ಬಾಳು ಈಗ "ಹಾಸಿಗೆಯಿದ್ದಷ್ಟು ಕಾಲು ಚಾಚು" ಎಂಬ ನಾಣ್ನುಡಿಯಿಂದ ದೂರ ಸರಿದಿದೆ. ಆಧುನಿಕತೆಗೆ ಹೊಂದಿಕೊಳ್ಳಲು ಅವನು ಹೆಣಗಾಡುತ್ತಿದ್ದಾನೆ. ಅವಿಭಕ್ತ ಕುಟುಂಬಗಳು ಈಗ ಅತಿ ವಿರಳವಾಗಿವೆ. ಮಕ್ಕಳು ಹೆಚ್ಚಿನ ವಿದ್ಯಾಭ್ಯಾಸ ಹೊಂದಿ ಗ್ರಾಮಗಳಿಂದ ದೂರ ಹೋಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಆಧುನಿಕ ಕೃಷಿ

ತಂತ್ರಜ್ಞಾನವನ್ನು ಬಳಸಿ ಹೆಚ್ಚಿನ ಉತ್ಪಾದನೆಯನ್ನು ಮಾಡುವ ಹೊರೆ ಅವನ ಮೇಲೆ ಬಿದ್ದಿದೆ. ಅರ್ಥಶಾಸ್ತ್ರದ ಒಂದು ನಿಯಮದ ಅನುಸಾರ ಯಾವುದೇ ಒಂದು ಉದ್ದಿಮೆಗೆ ಬಂಡವಾಳ ಹೂಡುವಾಗ ವ್ಯಕ್ತಿಯು ತನ್ನ ಕೈಯಲ್ಲಿರುವಷ್ಟು ಹಣದಲ್ಲಿ ಅರ್ಧದಷ್ಟನ್ನು ಮಾತ್ರ ಹೂಡಬೇಕು. ಅಕಸ್ಮಾತ್ ಉದ್ದಿಮೆಯಲ್ಲಿ ನಷ್ಟವಾದರೆ ಉಳಿದ ಹಣದಿಂದ ಅವನು ಚೇತರಿಸಿಕೊಳ್ಳಬಹುದಾಗಿದೆ. ಈ ನಿಯಮದ ಅರಿವಿಲ್ಲದೆ ಕೃಷಿಕನು ಕೃಷಿಗಾಗಿ ತನ್ನ ಕೈಯಲ್ಲಿರುಷ್ಟು ಹಣ ಮತ್ತು ದೊರೆತ ಸಾಲದ ಹಣ ಇವೆಲ್ಲವನ್ನೂ ಒಟ್ಟಿಗೆ ಹೂಡಿಬಿಡುತ್ತಾನೆ. ಮೊದಲೇ ಕೃಷಿಯು ಅನಿಶ್ಚಿತವಾಗಿರುವುದರಿಂದ, ಈ ಜೂಜಿನಲ್ಲಿ ಅವನು ನಷ್ಟ ಅನುಭವಿಸುವ ಸಾಧ್ಯತೆಗಳು ಬಹಳಷ್ಟಿರುತ್ತವೆ. ಆರ್ಥಿಕ ನಿಯಮಗಳು ಬಲು ಕಠೋರ ಎಂಬುದನ್ನು ಎಲ್ಲರೂ ಅರಿತುಕೊಳ್ಳಬೇಕು. ಗಟ್ಟಿ ಮನಸ್ಸಿಲ್ಲದ ರೈತರು ಮಾನ ಮಾರ್ಯದೆಗೆ ಹೆದರಿ ಆತ್ಮಹತ್ಯೆಗೆ ಶರಣಾಗುತ್ತಾರೆ. ಇಲ್ಲಿ ನಾವು ಅರ್ಥ ಮಾಡಿಕೊಳ್ಳಬೇಕಾದುದು ಏನೆಂದರೆ, ಇಂತಹ ರೈತರು ತಮ್ಮ ಮರ್ಯಾದೆಗೆ ಮಾತ್ರ ಪ್ರಾಶಸ್ತ್ಯಕೊಟ್ಟು ಕುಟುಂಬದ ಉಳಿದವರನ್ನು ಬೀದಿಪಾಲು ಮಾಡುತ್ತಾರೆ.

ರೈತನು ದೇಶದ ಬೆನ್ನೆಲುಬೆಂದು ಎಲ್ಲರೂ ಒಪ್ಪುತ್ತಾರೆ. ಆದರೆ ರೈತನು ದೇಶಕ್ಕೆ ಅನ್ನ ಕೊಡುವ ಶಕ್ತಿ ಪಡೆಯುವುದು ರೈತ ಮಹಿಳೆಯ ಪ್ರೇರಣೆಯಿಂದ ಎನ್ನುವುದು ಸತ್ಯವಾದುದ್ದು. ಕೃಷಿ ಸಂಬಂಧಿತ ಎಲ್ಲಾ ಕೆಲಸಗಳಲ್ಲಿ ಶೇ.60 ರಿಂದ 75 ರಷ್ಟು ಮಹಿಳೆಯರು ಭಾಗಿಯಾಗಿರುತ್ತಾರೆ. ಆದರೆ ಅವರು ರೈತರಾಗಿ ಗುರುತಿಸಲ್ಪಡುವುದಿಲ್ಲ ಮತ್ತು ಸಿಗಬೇಕಾದಷ್ಟು ಬೆಂಬಲವೂ ಅವರಿಗೆ ಸಿಗುವುದಿಲ್ಲ. ಹೀಗಾಗಿ ಕೃಷಿಗೆ ಸಂಬಂಧಿಸಿದ ನಿರ್ಧಾರ ತೆಗೆದುಕೊಳ್ಳುವುದರಿಂದ ಹೊರಗುಳಿಯುತ್ತಾರೆ. ಇತಂಹ ಪರಿಸ್ಥಿತಿಯಲ್ಲಿ ರೈತನು ಆತ್ಮಹತ್ಯೆಗೆ ಶರಣಾದರೆ ಈ ಮಹಿಳೆಯರು ಮೃತ ರೈತ ಬಿಟ್ಟುಹೋದ ಸ್ಥಾಂಸಿಕ ಮತ್ತು ಸ್ಥಾಂಸಿಕವಲ್ಲದ ಸಾಲಗಳನ್ನು ತೀರಿಸಲು ಉಳಿದುಕೊಂಡಂತಾಗುತ್ತದೆ. ಭೂ ದಾಖಲೆಗಳು ಬ್ಯಾಂಕಿನಲ್ಲಿ ಸಿಲುಕಿಕೊಂಡಿರುವಾಗ ಹೊಸದಾಗಿ ಅವರು ಬೆಳೆ ಸಾಲ ಪಡೆಯಲು ಆಗುವುದಿಲ್ಲ ಮತ್ತು ಭೂಮಿಯನ್ನು ಕೃಷಿಗಾಗಿ ಗುತ್ತಿಗೆ ಪಡೆಯಲು ಸಾಧ್ಯವಿರುವುದಿಲ್ಲ. ಸಾಲದಾತರಿಂದ ಎಚ್ಚರಿಕೆ ಪತ್ರಗಳನ್ನು ಪಡೆದೂ ಪಡೆದೂ ಅವರು ಕುಗ್ಗಿ ಹೋಗುತ್ತಾರೆ. ಸಾಲದಾತರು ಇವರನ್ನು ಅವಮಾನಿಸುತ್ತಾರೆ ಮತ್ತು ದಬ್ಬಾಳಿಕೆ ನಡೆಸುತ್ತಾರೆ. ಜೊತೆಗೆ ಭಾರೀ ಒತ್ತಡವನ್ನು ಹೇರುತ್ತಾರೆ. ರೈತ ಮಹಿಳೆಯರು ಇದನ್ನೆಲ್ಲಾ ಅನುಭವಿಸುವುದನ್ನು ಸರ್ಕಾರವು ತಪ್ಪಿಸಬೇಕಾಗಿದೆ ಮತ್ತು ರೈತ ಮಹಿಳೆಯರು ತಾವು ಮಾಡಿಲ್ಲದ ತಪ್ಪಿಗೆ ಶಿಕ್ಷೆ ಅನುಭವಿಸುವುದನ್ನು ಹೋಗಲಾಡಿಸಬೇಕಾಗಿದೆ.

ಸಂಕಷ್ಟಕ್ಕೆ ಗುರಿಯಾಗಿ ಮನಸ್ಸನ್ನು ದುರ್ಬಲಗೊಳಿಸಿಕೊಳ್ಳುವ ರೈತರನ್ನು ಸದೃಢಗೊಳಿಸುವುದು ಮತ್ತು ಆತ್ಮಹತ್ಯೆಯಿಂದ ಸಂತ್ರಸ್ತರಾದ ಕುಟುಂಬ ವರ್ಗದ ಬವಣೆಗಳನ್ನು ಪರಿಹರಿಸುವುದು ಮುಖ್ಯವಾಗಿದ್ದು, ಈ ವರದಿಯು ಎರಡೂ ವಿಷಯಗಳ ಬಗ್ಗೆ ಬೆಳಕು ಚಲ್ಲಿದೆ ಮತ್ತು ಸರ್ಕಾರಕ್ಕೆ ಕೆಲವು ಶಿಫಾರಸ್ಸುಗಳನ್ನು ಮಾಡಿದೆ.

# 2.ಮಹಿಳಾ ಕಿಸಾನ್ ಅಧಿಕಾರ್ ಮಂಚ್ (ಮಾಕಂ) ಸಂಸ್ಥೆಯ ಒಂದು ಅಧ್ಯಯನ

ಮಹಿಳಾ ಕಿಸಾನ್ ಅಧಿಕಾರ್ ಮಂಚ್ ಸಂಸ್ಥೆಯು ಮಹಿಳಾ ರೈತರ ಹಕ್ಕುಗಳಿಗಾಗಿ ಹೋರಾಡುವ ರಾಷ್ಟ್ರಮಟ್ಟದ ಒಂದು ಅನೌಪಚಾರಿಕ ವೇದಿಕೆಯಾಗಿದೆ. ಈ ವೇದಿಕೆಯಲ್ಲಿ ರಾಷ್ಟ್ರದ 24 ರಾಜ್ಯಗಳಲ್ಲಿ ಮಹಿಳಾ ರೈತರಿಗೆ ಸಿಗಬೇಕಾದ ಸೂಕ್ತ ಮನ್ನಣೆ ಮತ್ತು ಹಕ್ಕುಗಳನ್ನು ದೊರಕಿಸಿಕೊಡಲು 120ಕ್ಕೂ ಹೆಚ್ಚು ಮಹಿಳಾ ರೈತರ ಸಂಘಟನೆಗಳು, ಮಹಿಳಾ ರೈತರ ಒಕ್ಕೂಟಗಳು, ನಾಗರಿಕ ಸಮುದಾಯದ ಸಂಸ್ಥೆಗಳು, ಸಂಶೋಧಕರು ಹಾಗೂ ಸಕ್ರಿಯ ಕಾರ್ಯಕರ್ತರು ಒಗ್ಗೂಡಿದ್ದಾರೆ. ಈ ವೇದಿಕೆಯ ಕರ್ನಾಟಕ ಶಾಖೆಯು ರೈತರ ಆತ್ಮಹತ್ಯೆಯಿಂದ ನೊಂದ ಮಹಿಳೆಯರ ಬವಣೆಗಳನ್ನು ಅರಿಯಲು 2019ರಲ್ಲಿ ರಾಜ್ಯದ ಕೋಲಾರ, ತುಮಕೂರು, ಮೈಸೂರು, ಮಂಡ್ಯ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಒಟ್ಟು 13 ತಾಲ್ಲೂಕುಗಳ 42 ಗ್ರಾಮಗಳಲ್ಲಿ 50 ಸಂತ್ರಸ್ತರ ಸಂದರ್ಶನವನ್ನು ನಡೆಸಿತು.




**ಅಧ್ಯಯನದ ಉದ್ದೇಶವು ಈ ರೀತಿ ಇತ್ತು:** (1) ಯಾವ ಕುಟುಂಬಗಳಲ್ಲಿ ರೈತರ ಆತ್ಮಹತ್ಯೆ ನಡೆದಿರುತ್ತದೆಯೋ, ಅಂತಹ ಕುಟುಂಬಗಳ ಮಹಿಳೆಯರ ಸ್ಥಿತಿಗತಿಗಳನ್ನು ಅರಿತುಕೊಳ್ಳುವಿಕೆ, (2) ಇದರ ಆಧಾರದ ಮೇರೆಗೆ ಸಂತ್ರಸ್ತ ಮಹಿಳೆಯರಿಗೆ ಸಮಗ್ರ ಬೆಂಬಲ ಯೋಜನೆಯನ್ನು ರೂಪಿಸುವ ಸಲುವಾಗಿ ಶಿಫಾರಸ್ಸುಗಳನ್ನು ಮಾಡುವುದು.



ಸಂಸ್ಥೆಯು ನಡೆಸಿದ ಸಂದರ್ಶನಗಳಿಂದ ರೈತರ ಆತ್ಮಹತ್ಯೆಗೆ ಸಂಬಂಧಿಸಿದಂತೆ ಮತ್ತು ಸಂತ್ರಸ್ತ ರೈತ ಮಹಿಳೆಯರಿಗೆ ಸಂಬಂಧಿಸಿದಂತೆ ಅನೇಕ ಅಂಶಗಳು ಬೆಳಕಿಗೆ ಬಂದಿವೆ. ಆತ್ಮಹತ್ಯೆ ಮಾಡಿಕೊಂಡ ಹೆಚ್ಚಿನ ರೈತರು ಮತ್ತು ಅವರ ಪತ್ನಿಯರು 31 ರಿಂದ 55 ವರ್ಷದೊಳಗಿನ ವಯೋಮಾನದವರಾಗಿದ್ದರು. ಅನಕ್ಷರಸ್ತ ಮಹಿಳೆಯರ ಸಂಖ್ಯೆ ಅಧಿಕವಾಗಿತ್ತು. ಹೆಚ್ಚಿನವರಿಗೆ ಒಂದು ಅಥವಾ ಎರಡು ಮಕ್ಕಳಿದ್ದವು. ಆತ್ಮಹತ್ಯೆ ಪ್ರಕರಣದ ನಂತರವೂ ಸಂತ್ರಸ್ತ ಮಹಿಳೆಯರು ಬಹಳಷ್ಟು ಪ್ರಕರಣಗಳಲ್ಲಿ ಕೃಷಿಯನ್ನೇ ಮುಂದುವರೆಸಿಕೊಂಡು ಹೋಗುತ್ತಿದ್ದರು. ಉಳಿದಂತೆ ಕೆಲವರು ಕೃಷಿ ಕಾರ್ಮಿಕರಾಗಿ ಹಾಗೂ ಮನೆ ಕೆಲಸಗಳಲ್ಲಿ ತೊಡಗಿಕೊಂಡಿದ್ದರು. ಹೆಚ್ಚಿನ ಕುಟುಂಬಗಳಲ್ಲಿ ಸಂತ್ರಸ್ತೆಯರು ತಾವೇ ಸ್ವಂತವಾಗಿ ಮನೆಯನ್ನು ನಡೆಸಿಕೊಂಡು ಹೋಗುತ್ತಿದ್ದರು ಮತ್ತು ಕೆಲವರು ಮಾತ್ರ ಒಟ್ಟು ಕುಟುಂಬಗಳಲ್ಲಿ ಉಳಿದಿದ್ದರು. ಆದರೂ ಸಹ, ಆತ್ಮಹತ್ಯೆಯ ನಂತರ ಸಂತ್ರಸ್ತೆಯರ ಜೀವನ ಶೈಲಿ ಬದಲಾಗಿತ್ತಲ್ಲದೆ, ಅವರ ಜಮೀನು ಮತ್ತು ಪಶು ಸಂಪತ್ತೂ ಸಹ ಕಡಿಮೆಯಾಗಿದ್ದವು. ಸಾಮಾಜಿಕವಾಗಿ ಇವರುಗಳ ಅಂತಸ್ತು ಕೆಳಗಿಳಿದಿತ್ತು. ಹೆಚ್ಚಿನ ಮಹಿಳೆಯರು ತಮ್ಮ ಈಗಿನ ಪರಿಸ್ಥಿತಿಯಿಂದ ಆತಂಕಕ್ಕೆ ಒಳಗಾಗಿದ್ದರಲ್ಲದೆ, ಮಾನಸಿಕವಾಗಿ ಕುಗ್ಗಿದ್ದರು. ಈಗಿನ ಸಂಕಷ್ಟ ಮತ್ತು ತೀರಿಸಬೇಕಾದ ಸಾಲದ ಬಗ್ಗೆ ಯೋಚಿಸಿ ಕಂಗಾಲಾಗಿದ್ದರು.

## ಅಧ್ಯಯನದಿಂದ ಕಂಡುಬಂದ ಇತರ ಕೆಲವು ಸಾಮಾನ್ಯ ಅಂಶಗಳು ಈ ರೀತಿ ಇವೆ:

1. ಪರಿಹಾರಕ್ಕಾಗಿ ಇರುವ ಅರ್ಹತಾ ಅಂಶಗಳು ಮತ್ತು ಪ್ರಕರಣವು ತಿರಸ್ಕೃತವಾಗುವುದಕ್ಕೆ ಇರುವ ಕಾರಣಗಳು ಸಮರ್ಪಕವಾಗಿಲ್ಲದಿರುವುದು.
2. ಸಂತ್ರಸ್ತ ಕುಟುಂಬಗಳಿಗೆ ವಿಸ್ತರಿಸಬೇಕಾದ ಬೆಂಬಲವು ನಿಧಾನಗತಿಯಲ್ಲಿ ಸಾಗುತ್ತಿರುವುದು.
3. ಪರಿಹಾರ ಯೋಜನೆಯ ಅನುಷ್ಠಾನದಲ್ಲಿ ದಕ್ಷತೆಯ ಕೊರತೆ ಮತ್ತು ಸಂಪೂರ್ಣತೆ ಇಲ್ಲದಿರುವುದು.
4. ಸಂತ್ರಸ್ತೆಯರಿಗೆ ದಾಖಲೆಗಳನ್ನು ಒದಗಿಸಲು ನಾಗರಿಕ ಸಮುದಾಯವು ಮುಂದೆ ಬರಬೇಕಾಗಿದ್ದು, ಸದ್ಯದಲ್ಲಿ ತಾವಾಗಿ ಮುಂದೆ ಬಂದು ಸಹಾಯ ಮಾಡುವುದು ವಿರಳವಾಗಿದೆ. ಜೊತೆಗೆ ಇದಕ್ಕಾಗಿ ಯಾವ ನಿಯಮಿತ ಪದ್ಧತಿಯೂ ಸಹ ಇಲ್ಲ.
5. ಪ್ರಸ್ತುತದಲ್ಲಿ ಗ್ರಾಮ ಪಂಚಾಯಿತಿಗಳು ಈ ಬಗ್ಗೆ ಸಕ್ರಿಯವಾಗಿ ಒಳಗೊಳ್ಳದೆ ಇರುವುದು.
6. ಸಂತ್ರಸ್ತೆಯರಿಗೆ ಪರಿಹಾರ ಕೊಡಿಸುವಲ್ಲಿ ಮತ್ತು ಅವರಿಗೆ ಪುನರ್ ವಸತಿ ಕಲ್ಪಿಸುವಲ್ಲಿ ವಿವಿಧ ಸಂಸ್ಥೆಗಳ ನಡುವೆ ಸಂಯೋಜನೆ ಇಲ್ಲದಿರುವುದು.
7. ಆತ್ಮಹತ್ಯೆಗೆ ಒಳಗಾದ ರೈತನು ಅವಿವಾಹಿತನಾಗಿದ್ದ ಪಕ್ಷದಲ್ಲಿ ಆತನ ತಾಯಿಗೆ ಪರಿಹಾರ ನೀಡುವ ವ್ಯವಸ್ಥೆಯನ್ನು ಕಲ್ಪಿಸದೆ ಇರುವುದು.

## ಸಂತ್ರಸ್ತರ ಬವಣೆಯನ್ನು ನೀಗಿಸಲು ಮಾಕಂ ಸಂಸ್ಥೆಯು ಮಾಡುತ್ತಿರುವ ಶಿಫಾರಸ್ಸುಗಳು:

1. ಸಂತ್ರಸ್ತ ಮಹಿಳೆಯರಿಗೆ ಆತ್ಮಹತ್ಯೆ ಮಾಡಿಕೊಂಡ ರೈತನು ಮಾಡಿಕೊಂಡಿದ್ದ ಸಾಲದ (ಬ್ಯಾಂಕುಗಳಿಂದ ಹಾಗೂ ಖಾಸಗಿಯವರಿಂದ) ಹೊಣೆಗಾರಿಕೆಯನ್ನು ತಪ್ಪಿಸಬೇಕು.
2. ಆತ್ಮಹತ್ಯೆ ಮಾಡಿಕೊಂಡ ರೈತನು ಹೊಂದಿದ್ದ ಜಮೀನಿನ ಹಕ್ಕುದಾರಿಕೆಯನ್ನು ಸಂತ್ರಸ್ತ ಮಹಿಳೆಯರಿಗೆ ಕೊಡಿಸಬೇಕು.
3. ಖಿನ್ನತೆಗೆ ಒಳಗಾದ ಮಹಿಳೆಯರಿಗೆ ಮಾನಸಿಕ ಹಾಗೂ ಸಾಮಾಜಿಕ ಬೆಂಬಲ ನೀಡುವ ವ್ಯವಸ್ಥೆಯಾಗಬೇಕು.

4. ಸಂತ್ರಸ್ತ ಮಹಿಳೆಯು ಆತ್ಮಹತ್ಯೆಗೆ ಒಳಗಾದ ರೈತನು ಮಾಡುತ್ತಿದ್ದ ಕೃಷಿ ಕಾರ್ಯವನ್ನು ಮುಂದುವರಿಸಲು ಸಾಧ್ಯವಾಗದಿದ್ದ ಪಕ್ಷದಲ್ಲಿ, ಆ ಮಹಿಳೆಗೆ ಬೇರೆ ರೀತಿಯ ಪುನರ್ ವಸತಿಯನ್ನು ಕಲ್ಪಿಸುವ ವ್ಯವಸ್ಥೆ ಮಾಡಬೇಕು.
5. ಸಂತ್ರಸ್ತ ಮಹಿಳೆಯರಿಗೆ ಸುಸ್ಥಿರ ಜೀವನೋಪಾಯದ ಬಗ್ಗೆ ತಿಳಿಸಿಕೊಡುವ ಕಾರ್ಯಕ್ರಮ ಪ್ರಾರಂಭವಾಗಬೇಕು.
6. ಕರ್ನಾಟಕದಲ್ಲಿ ನಾಗರಿಕ ಸಮುದಾಯಗಳು ಸಂತ್ರಸ್ತ ಮಹಿಳೆಯರಿಗೆ ಸಕ್ರಿಯವಾಗಿ ನೆರವು ನೀಡುವಂತೆ ಮಾಡಬೇಕು.
7. ಎಲ್ಲಾ ಗ್ರಾಮೀಣ ಕುಟುಂಬಗಳಿಗೂ ಸಹ ಆರ್ಥಿಕ ಸಾಕ್ಷರತೆಯನ್ನು ಕಲಿಸುವ ಪ್ರಯತ್ನ ಮಾಡಬೇಕು.
8. ಸಂತ್ರಸ್ತ ಮಹಿಳೆಯರಿಗೆ ತೃಪ್ತಿದಾಯಕ ಮಟ್ಟದಲ್ಲಿ ವಸತಿ ವ್ಯವಸ್ಥೆ ಮತ್ತು ಆರೋಗ್ಯ ವ್ಯವಸ್ಥೆಯನ್ನು ಕಲ್ಪಿಸಬೇಕು.
9. ಸಂತ್ರಸ್ತ ಮಹಿಳೆಯರನ್ನು ಸ್ವಾಭಾವಿಕ ವಿಪತ್ತುಗಳಿಂದ ಮತ್ತು ಬೆಳೆ ನಷ್ಟದಿಂದ ಪಾರುಮಾಡುವ ಸಂರಕ್ಷಣಾ ವ್ಯವಸ್ಥೆಯನ್ನು ಪ್ರಾರಂಭಿಸಬೇಕು.
10. ಸಂತ್ರಸ್ತ ಮಹಿಳೆಯರು ಬೆಳೆದ ಉತ್ಪನ್ನಗಳ ಸಂಗ್ರಹಣೆಗೆ ಅವಕಾಶ ಕಲ್ಪಿಸಬೇಕು ಮತ್ತು ಲಾಭದಾಯಕ ಬೆಲೆಗೆ ಮಾರಾಟ ಮಾಡುವ ಸೌಲಭ್ಯ ಕಲ್ಪಿಸಬೇಕು.
11. **ಸಂತ್ರಸ್ತೆಯರಿಗೆ ಗುರುತಿನ ಚೀಟಿ ನೀಡಬೇಕು ಮತ್ತು ಸರ್ಕಾರದ ವಿವಿಧ ಇಲಾಖೆಗಳಿಂದ ದೊರೆಯಬೇಕಾದ ಎಲ್ಲಾ ಸೌಲಭ್ಯಗಳೂ ಇದರ ಮೂಲಕ ದೊರೆಯುವಂತೆ ಮಾಡಬೇಕು.**
12. ಪರಿಹಾರ ಇತ್ಯರ್ಥಕ್ಕಾಗಿ ಇರುವ ಉಪ ವಿಭಾಗೀಯ ಅಧಿಕಾರಿಗಳ ನೇತೃತ್ವದ ಸಮಿತಿಯಲ್ಲಿ ಹಾಗೂ ಹೆಚ್ಚುವರಿ ಜಿಲ್ಲಾಧಿಕಾರಿಗಳ ನೇತೃತ್ವದ ಮೇಲ್ಮನವಿ ಇತ್ಯರ್ಥ ಸಮಿತಿಯಲ್ಲಿ ರೈತ ಪ್ರತಿನಿಧಿಗಳನ್ನು ಸೇರ್ಪಡೆಗೊಳಿಸಿಕೊಳ್ಳಬೇಕು.

## 3.ಸರ್ಕಾರದ ಪರಿಹಾರೋಪಾಯಗಳು

### (ಅ) ನೇರವಾಗಿ ನೀಡುವ ಪರಿಹಾರ:

ರಾಜ್ಯದಲ್ಲಿ ಪ್ರಕೃತಿ ವಿಕೋಪ, ಕೀಟ / ರೋಗ ಬಾಧೆಯಿಂದ ಬೆಳೆ ಹಾನಿ, ಸಾಲಬಾಧೆ, ಬೆಲೆ ಕುಸಿತ ಇತ್ಯಾದಿ ಕಾರಣಗಳಿಂದ ಸಂಕಷ್ಟಕ್ಕೊಳಗಾದ ಹಲವಾರು ರೈತರು ಆತ್ಮಹತ್ಯೆಗೆ ಶರಣಾಗುತ್ತಿರುವುದನ್ನು ಸರ್ಕಾರವು ಗಮನಿಸಿದೆ. ಈ ಆತ್ಮಹತ್ಯೆಗೆ ವೈಜ್ಞಾನಿಕ ಕಾರಣಗಳನ್ನು ವಿಶ್ಲೇಷಿಸುವ ಸಲುವಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಮಾಜಿ ಉಪ ಕುಲಪತಿಗಳಾದ ಡಾ ಜಿ ಕೆ ವೀರೇಶ್‌ರವರ ಅಧ್ಯಕ್ಷತೆಯಲ್ಲಿ ಇತರೆ ಐದು ಸದಸ್ಯರನ್ನೊಳಗೊಂಡ ಸಮಿತಿಯೊಂದನ್ನು 2003 ರಲ್ಲಿಯೇ ಸರ್ಕಾರವು ರಚಿಸಿತ್ತು. ಇಂತಹ ಆತ್ಮಹತ್ಯೆಗಳಿಗೆ ಸಾಲ ನೀಡುವ ಸಂಸ್ಥೆಗಳಿಂದ ಪಡೆದ ಸಾಲದ ಹೊರೆಯೇ ಒಂದು ಮುಖ್ಯ ಕಾರಣ ಎಂದು ಈ ಸಮಿತಿಯು ಶಿಫಾರಸ್ಸು ಮಾಡಿತ್ತು. ಸಮಿತಿಯ ಶಿಫಾರಸ್ಸಿನ ಮೇರೆಗೆ ಪ್ರಾರಂಭದಲ್ಲಿ 1 ಲಕ್ಷ ರೂ.ಗಳ ಪರಿಹಾರವನ್ನು ನೀಡಲಾಗುತ್ತಿತ್ತು. ತದನಂತರ ಈ ಮೊತ್ತವನ್ನು 2 ಲಕ್ಷಕ್ಕೆ ಏರಿಸಲಾಗಿತ್ತು. ಈಗ ಇದನ್ನು 5 ಲಕ್ಷ ರೂಗಳಿಗೆ ಏರಿಸಲಾಗಿದೆ.



ರೈತರ ಆತ್ಮಹತ್ಯೆ ಪ್ರಕರಣಗಳನ್ನು ನಿರ್ಣಯಗೊಳಿಸಲು ಉಪ ವಿಭಾಗ ಮಟ್ಟದಲ್ಲಿ ರಚಿಸಲಾಗಿರುವ ಸಮಿತಿಗಳಲ್ಲಿ ಕಂದಾಯ ಇಲಾಖೆಯ ಉಪ ವಿಭಾಗಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ಉಳಿದಂತೆ ಡೆಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಪೋಲಿಸ್,

ಸರ್ಕಲ್ ಇನ್ಸ್‌ಪೆಕ್ಟರ್ ಆಫ್ ಪೋಲಿಸ್, ಆಯಾ ಸಹಕಾರಿ ಸಂಘಗಳ ಅಭಿವೃದ್ಧಿ ಅಧಿಕಾರಿ, ಲೀಡ್ ಬ್ಯಾಂಕ್ ಮ್ಯಾನೇಜರ್ ಇವರಗಳು ಸದಸ್ಯರಾಗಿರುತ್ತಾರೆ. ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.



ಈ ಸಮಿತಿಯ ನಿರ್ಣಯಗಳು ಸಂತ್ರಸ್ತ ಕುಟುಂಬದವರಿಗೆ ಸೂಕ್ತವೆನಿಸದ ಪಕ್ಷದಲ್ಲಿ ಜಿಲ್ಲಾ ಮಟ್ಟದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಮೇಲುಸ್ತುವಾರಿ ಸಮಿತಿಗೆ ಮನವಿ ಸಲ್ಲಿಸಬಹುದಾಗಿದೆ.

ಉಪ ವಿಭಾಗ ಮಟ್ಟದ ಸಮಿತಿಯು ಸಾಲದ ಹೊರೆಯು ಆತ್ಮಹತ್ಯೆಗೆ ಕಾರಣವೆಂಬ ವಿಷಯವನ್ನು ದೃಢೀಕರಿಸುವಾಗ ಇತರೆ ಅಂಶಗಳಾದ ಕುಟುಂಬದ ಯಾವುದೇ ಸದಸ್ಯರ ಹೆಸರಿನಲ್ಲಿ ಇರುವ ಜಮೀನು, ಸರ್ಕಾರದ ಅಧಿಕೃತ ಪರವಾನಗಿ ಹೊಂದಿ ಹಣಕಾಸು ವ್ಯವಹಾರ ನಡೆಸುತ್ತಿರುವ ಚಿಟ್‌ಫಂಡ್‌ಗಳು, ಪಾನ್ ಬ್ರೋಕರ್ ಅಂಗಡಿಗಳು, ಖಾಸಗಿ ಲೇವಾದೇವಿದಾರರು ಮತ್ತು ಖಾಸಗಿ ಹಣಕಾಸು ಸಂಸ್ಥೆಗಳಿಂದ ಪಡೆದಿರುವ ಸಾಲ ಹಾಗೂ ಒಪ್ಪಂದದ ಮೇಲೆ ಜಮೀನು ಪಡೆದು ಕೃಷಿ ಉತ್ಪಾದನೆಯಲ್ಲಿ ತೊಡಗಿ ರೈತ ಆತ್ಮಹತ್ಯೆ ಮಾಡಿಕೊಂಡಿರುವಿಕೆ ಇತ್ಯಾದಿಗಳನ್ನು ದಿನಾಂಕ:01.04.2015 ರಿಂದಲೇ ಪೂರ್ವಾನ್ವಯವಾಗುವಂತೆ ಪರಿಗಣಿಸುತ್ತವೆ. ಆದರೆ ರೈತರ ಆತ್ಮಹತ್ಯೆ ಪ್ರಕರಣ ನಡೆದು ಆರು ತಿಂಗಳಾಗಿ ಹೋದ ನಂತರ ಸಲ್ಲಿಸುವ ಅರ್ಜಿಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

**ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು (1) ಆತ್ಮಹತ್ಯೆ ಮಾಡಿಕೊಂಡ ರೈತನ ಅರ್ಹ ವಾರಸುದಾರರಿಗೆ 5 ಲಕ್ಷ ರೂ.ಗಳ ಪರಿಹಾರ ಧನವನ್ನು, (2) ಆತ್ಮಹತ್ಯೆ ಮಾಡಿಕೊಂಡ ರೈತನ ಅಂತಿಮ ಕ್ರಿಯೆಗಳನ್ನು ನೆರವೇರಿಸಲು 5 ಸಾವಿರ ರೂ.ಗಳ ತಕ್ಷಣದ ಪರಿಹಾರವನ್ನು ಮತ್ತು (3) ಆತ್ಮಹತ್ಯೆ ಮಾಡಿಕೊಂಡ ರೈತನ ಪತ್ನಿಗೆ 2 ಸಾವಿರ ರೂ.ಗಳ ಮಾಸಿಕ ವಿಧವಾ ವೇತನವನ್ನು ನೀಡುತ್ತಿದೆ.**

## (ಆ) ವಿವಿಧ ಇಲಾಖೆಗಳಿಂದ ದೊರಕುವ ಪರಿಹಾರ

ಈ ಹಿಂದೆ ಹೇಳಿದಂತೆ ಸರ್ಕಾರವು ಸಂತ್ರಸ್ತ ಕುಟುಂಬಗಳು ರೈತನ ಆತ್ಮಹತ್ಯೆಯಿಂದ ಚೇತರಿಸಿಕೊಳ್ಳುವ ಸಲುವಾಗಿ 5 ಲಕ್ಷ ರೂ.ಗಳ ಪರಿಹಾರ, ಅಂತ್ಯಕ್ರಿಯೆಗಾಗಿ 5 ಸಾವಿರ ರೂ.ಗಳ ಪರಿಹಾರ ಮತ್ತು 2 ಸಾವಿರ ರೂ.ಗಳ ಮಾಸಿಕ ವಿಧವಾ ವೇತನ ನೀಡುತ್ತಿದೆ. ಆದರೆ ದೀರ್ಘಾವಧಿಯಲ್ಲಿ ಸಂತ್ರಸ್ತ ಮಹಿಳೆಯು ತನ್ನದೇ ಆದ ಜೀವನೋಪಾಯ ರೂಪಿಸಿಕೊಳ್ಳಲು ಇಷ್ಟು ಪರಿಹಾರ ಸಾಕಾಗುವುದಿಲ್ಲ. ಪರಿಹಾರ ಕ್ರಿಯೆಯು ನಿರಂತರವಾಗಿರಬೇಕು. ಸರ್ಕಾರದ ಅಭಿವೃದ್ಧಿ ಇಲಾಖೆಗಳು ಈ ನಿಟ್ಟಿನಲ್ಲಿ ಸಂತ್ರಸ್ತೆಯರಿಗೆ ನೆರವಾಗುತ್ತವೆ. ಸಂತ್ರಸ್ತೆಯು ತನ್ನ ಜೀವಮಾನವನ್ನು ಕೃಷಿಕಳಾಗಿಯೇ ಕಳೆಯುವುದರಿಂದ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಲ್ಲಿಯೇ ಆಕೆಯು ತೊಡಗುತ್ತಾಳೆ. ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಪಶು ಸಂಗೋಪನಾ ಇಲಾಖೆ, ಜಲಾನಯನ ಅಭಿವೃದ್ಧಿ

ಇಲಾಖೆ, ರೇಷ್ಮೆ ಇಲಾಖೆ, ಮೀನುಗಾರಿಕೆ ಇಲಾಖೆ, ಕೃಷಿ ಮಾರುಕಟ್ಟೆ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ನೀರಾವರಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ ಇತ್ಯಾದಿ ಹಲವಾರು ಅಭಿವೃದ್ಧಿ ಇಲಾಖೆಗಳು ಆಯಾ ಇಲಾಖೆಗಳ ಮೂಲಕ ರೈತರಿಗೆ ನೆರವಾಗುವಂತಹ ಅನೇಕ ಕಾರ್ಯಕ್ರಮಗಳನ್ನು ಪ್ರತಿ ವರ್ಷವೂ ರಾಜ್ಯಾದ್ಯಂತ ಸಾಕಷ್ಟು ಅನುದಾನದೊಂದಿಗೆ ಕಾರ್ಯಗತಗೊಳಿಸುತ್ತಿವೆ ಮತ್ತು ಸಂಬಂಧಿತ ಕಾರ್ಯಕ್ರಮಗಳು ಈ ರೀತಿ ಇವೆ.

**ಕೃಷಿ ಇಲಾಖೆ:** ಮಣ್ಣು ಆರೋಗ್ಯ, ಕೃಷಿ ಯಾಂತ್ರೀಕರಣ, ಸೂಕ್ಷ್ಮ ನೀರಾವರಿ, ರಸಗೊಬ್ಬರ ಮತ್ತು ಪೀಡೆನಾಶಕಗಳು, ಕೊಯ್ಲಿನ ನಂತರದ ಕಾರ್ಯಗಳು, ಕೃಷಿ ಹೊಂಡಗಳು ಇತ್ಯಾದಿ. (ಭಾಗವಹಿಸಿದ ಪ್ರತಿನಿಧಿ: ಶ್ರೀ ಬಿ ವೈ ಶ್ರೀನಿವಾಸ್, ನಿರ್ದೇಶಕರು, ಕೃಷಿ ಇಲಾಖೆ).



1. **ತೋಟಗಾರಿಕೆ ಇಲಾಖೆ:** ರಾಷ್ಟ್ರೀಯ ತೋಟಗಾರಿಕೆ ಅಭಿಯಾನ, ಹೂವು, ಹಣ್ಣು, ತರಕಾರಿ, ತೋಟಗಾರಿಕೆ ಉತ್ಪನ್ನಗಳ ಮೌಲ್ಯವರ್ಧನೆ ಇತ್ಯಾದಿ.



ಈ ಎರಡೂ ಇಲಾಖೆಗಳ ಪ್ರತಿಯೊಂದು ರೈತಾಭಿಮುಖಿ ಕಾರ್ಯಕ್ರಮಗಳಲ್ಲೂ ಸಹ ಸಹಾಯಧನ ಕಾರ್ಯಕ್ರಮಗಳಿವೆ. ಸಂತ್ರಸ್ತ ರೈತ ಮಹಿಳೆಯರಿಗೆ ಈ ಕಾರ್ಯಕ್ರಮಗಳಲ್ಲಿ ಆದ್ಯತೆ ನೀಡಲಾಗುತ್ತದೆ.

2. **ಪಶು ಸಂಗೋಪನೆ ಇಲಾಖೆ:** "ಪಶು ಭಾಗ್ಯ" ಯೋಜನೆಯ ಮೂಲಕ ಕುರಿ, ಕೋಳಿ, ಮೇಕೆ ಇತ್ಯಾದಿ ಅನೇಕ ಸಾಕು ಪ್ರಾಣಿಗಳನ್ನೂ ಸಹ ಸಂತ್ರಸ್ತ ಕುಟುಂಬಗಳಿಗೆ ಆದ್ಯತೆಯ ಮೇರೆಗೆ ನೀಡಲಾಗುತ್ತಿದೆ (ಭಾಗವಹಿಸಿದ ಪ್ರತಿನಿಧಿ: ಡಾ.ಬಿ ಎನ್ ಶಿವರಾಂ, ಅಪರ ನಿರ್ದೇಶಕರು, ಪಶುಸಂಗೋಪನೆ ಇಲಾಖೆ).



3. **ಸಾರ್ವಜನಿಕ ಶಿಕ್ಷಣ ಇಲಾಖೆ:** ಸರ್ಕಾರಿ ಶಾಲೆಗಳಲ್ಲಿ ಒಂದನೆಯ ತರಗತಿಯಿಂದ ಪಿಯುಸಿ ಯವರೆಗೆ ಶಿಕ್ಷಣವು ಎಲ್ಲರಿಗೂ ಉಚಿತವಾಗಿದೆ. ಈ ಉಚಿತ ಶಿಕ್ಷಣವನ್ನು ಸ್ನಾತಕೋತ್ತರ ಮಟ್ಟದವರೆಗೆ ಸಂತ್ರಸ್ತ ಕುಟುಂಬಗಳ ಮಕ್ಕಳಿಗೆ ವಿಸ್ತರಿಸಲಾಗಿದೆ. ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಸ್ನಾತಕೋತ್ತರ ಪದವಿಯ ಹಂತದವರೆಗೆ ಶಿಕ್ಷಣವನ್ನು ಮುಂದುವರೆಸಲು ಅನುವಾಗುವಂತೆ ಉಚಿತ ಶಿಕ್ಷಣ, ವಸತಿನಿಲಯದ ಸೌಲಭ್ಯ ಅಥವಾ ತತ್ಸಮಾನ ಶಿಕ್ಷಣ ಶುಲ್ಕ



ಮತ್ತು ವಸತಿ ವೆಚ್ಚದ ಮರು ಪಾವತಿ ಮಾಡಲಾಗುವುದು. ಖಾಸಗಿ ಶಾಲೆಗಳಲ್ಲಿ ಈ ಮಕ್ಕಳು ಓದುತ್ತಿದ್ದಲ್ಲಿ ಗರಿಷ್ಠ 24 ಸಾವಿರ ರೂ.ಗಳ ಶುಲ್ಕ ವಿನಾಯಿತಿಯನ್ನು ಇಲಾಖೆಯು ನೀಡುತ್ತದೆ – (ಭಾಗವಹಿಸಿದ ಪ್ರತಿನಿಧಿ: ಶ್ರೀ ವೈ ಸಿ ರವಿಕುಮಾರ್, ಹಿರಿಯ ಸಹಾಯಕ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ).

4. **ಸಮಾಜ ಕಲ್ಯಾಣ ಇಲಾಖೆ:** ಸಮಾಜ ಕಲ್ಯಾಣ ಇಲಾಖೆಯು ಸಂತ್ರಸ್ತೆಯರ ಮಕ್ಕಳಿಗೆ ಉಚಿತ ವಸತಿ ನಿಲಯದ ಸೌಕರ್ಯ ಮತ್ತು ಊಟದ ವ್ಯವಸ್ಥೆಯ ಯೋಜನೆಯನ್ನು ಮಾಡುತ್ತಿದೆ. ಈ ಮಕ್ಕಳು ಸ್ನಾತಕೋತ್ತರ ಪದವಿಯನ್ನು ಪಡೆಯುವವರೆಗೂ ಸಹ ಸದರಿ ಸೌಲಭ್ಯವು ಲಭ್ಯವಾಗಲಿದೆ.





5. **ರೇಷ್ಮೆ ಇಲಾಖೆ:** ಇಲಾಖೆಯ ಎಲ್ಲಾ ಚಾಲ್ತಿ ಕಾರ್ಯಕ್ರಮಗಳಲ್ಲೂ ಸಂತ್ರಸ್ತ ಮಹಿಳೆಯರು ಫಲಾನುಭವಿಗಳಾಗಲು ಅವಕಾಶ ಮಾಡಿಕೊಡಲಾಗುವುದು – (ಭಾಗವಹಿಸಿದ ಪ್ರತಿನಿಧಿಗಳು: ಶ್ರೀಮತಿ ಜಿ ಸುಕುಮಾರಿ, ಜಂಟಿ ನಿರ್ದೇಶಕರು ಮತ್ತು ಶ್ರೀಮತಿ ಜಿ ಇಂದ್ರಾಣಿ, ಉಪನಿರ್ದೇಶಕರು, ರೇಷ್ಮೆ ಇಲಾಖೆ).





6. **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ:** ಆರೋಗ್ಯ ಇಲಾಖೆಯ "ಮನೋ ಚೈತನ್ಯ" ಕಾರ್ಯಕ್ರಮವು ಗ್ರಾಮೀಣ ಜನತೆಯ ಮನೋಸ್ಥೈರ್ಯವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದೆ. ಈ ಕಾರ್ಯಕ್ರಮದ ಮೂಲಕ ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಹಾಗೂ ಹೋಬಳಿ ಮಟ್ಟದಲ್ಲಿ ತಿಳುವಳಿಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮವು ರೈತರಲ್ಲಿನ ಖಿನ್ನತೆಯನ್ನು ಹೋಗಲಾಡಿಸಲು ಪ್ರಯತ್ನಿಸುತ್ತಿದೆ ಮತ್ತು ಆತ್ಮಹತ್ಯೆಯ ಬಗ್ಗೆ ರೈತರು ಯೋಚಿಸದಂತೆ ಮಾಡಲು ತಿಳುವಳಿಕೆ ನೀಡುತ್ತಿದೆ–(ಭಾಗವಹಿಸಿದ ಪ್ರತಿನಿದಿಗಳು: ಡಾ.ರಜನಿ, ಮನಃಶಾಸ್ತ್ರಜ್ಞರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ).






ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆಯು (ಆಯುಷ್ಮಾನ್ ಭಾರತ–ಕರ್ನಾಟಕ) ರಾಜ್ಯದಲ್ಲಿ ಜಾರಿಯಲ್ಲಿದೆ. ಸಂತ್ರಸ್ತ ಕುಟುಂಬಗಳು ಈ ಯೋಜನೆಯ ಮೂಲಕ ವರ್ಷಕ್ಕೆ 5 ಲಕ್ಷ ರೂಪಾಯಿಗಳವರೆಗಿನ ಚಿಕಿತ್ಸೆಯನ್ನು ಉಚಿತವಾಗಿ ಪಡೆಯಬಹುದು. ಈ ಯೋಜನೆಯಡಿ ಫಲಾನುಭವಿಗಳಾಗಲು ಸಂತ್ರಸ್ತರು ಗುರುತಿನ ಚೀಟಿಯನ್ನು ಪಡೆದುಕೊಳ್ಳಬಹುದಾಗಿದೆ. – (ಭಾಗವಹಿಸಿದ ಪ್ರತಿನಿದಿಗಳು: ಡಾ. ಎ. ವಿ. ಶ್ರೀನಿವಾಸ್ ಮತ್ತು ಡಾ.ರೆಜಿನಾ ಜೋಸೆಫ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ).



7. **ಪೋಲಿಸ್ ಇಲಾಖೆ:** ಆತ್ಮಹತ್ಯೆಯು ಕಾನೂನಿನ ವ್ಯಾಪ್ತಿಗೆ ಬರುವುದರಿಂದ ಪರಿಹಾರ ನೀಡುವಿಕೆಯಲ್ಲಿ ಪೋಲಿಸ್ ಇಲಾಖೆಯ ಪಾತ್ರವೂ ಸಹ ಮಹತ್ವದ್ದಾಗಿದೆ. ಪೋಲಿಸ್ ಇಲಾಖೆಯ ದತ್ತಾಂಶಕ್ಕೂ ಮತ್ತು ಕೃಷಿ ಇಲಾಖೆಯ ದತ್ತಾಂಶಕ್ಕೂ ವ್ಯತ್ಯಾಸಗಳು ಮೇಲ್ನೋಟಕ್ಕೆ ಕಂಡುಬಂದಿವೆ. ರಾಷ್ಟ್ರಮಟ್ಟದ ಹಾಗೂ ರಾಜ್ಯಮಟ್ಟದ ಅಪರಾಧ ದಾಖಲೆಗಳ ಪ್ರಕಾರ ರೈತರ ಆತ್ಮಹತ್ಯೆಗಳು ವೃತ್ತಿನಿರತರ ಆತ್ಮಹತ್ಯೆಗಳೆಂದು ಪರಿಗಣಿಸಲ್ಪಡುತ್ತದೆ. ಕೃಷಿ ಇಲಾಖೆಯು ರೈತ ಎಂಬ ಪದಕ್ಕೆ ಸರಿಯಾದ ವ್ಯಾಖ್ಯಾನ ಇನ್ನೂ ಮಾಡಿಲ್ಲದ ಕಾರಣ ಕೃಷಿ ಕಾರ್ಮಿಕರು ಹಾಗೂ ಈ ಮೊದಲೇ ಹೇಳಿದಂತೆ ಈ ಉದ್ಯಮಕ್ಕೆ ಸೇರಿದ ಇತರರು ಯೋಜನೆಯ ವ್ಯಾಪ್ತಿಯಿಂದ ದೂರ ಉಳಿಯುತ್ತಾರೆ. ಪರಿಹಾರ ಯೋಜನೆಯು ಈ ಎಲ್ಲರಿಗೂ ಅನುಕೂಲ ಒದಗಿಸಬೇಕೆಂಬ ದೃಷ್ಟಿಯಿಂದ ಒಂದು ಏಕ ಸೂತ್ರದ ಕಾರ್ಯ ವಿಧಾನವನ್ನು ಅನುಸರಿಸಬೇಕು. ಸದ್ಯದಲ್ಲಿ ಸರ್ಕಾರಿ ಆದೇಶದ ಪ್ರಕಾರ ಭೂಮಿ ಹೊಂದಿರುವ ರೈತನಿಂದ ಒಪ್ಪಂದದ ಮೂಲಕ ಜಮೀನು ಪಡೆದು ಕೃಷಿ ಮಾಡುತ್ತಿದ್ದ ಕೃಷಿ ಕಾರ್ಮಿಕರು ಆತ್ಮಹತ್ಯೆ ಮಾಡಿಕೊಂಡಲ್ಲಿ ಅವರ ಕುಟುಂಬಕ್ಕೂ ಪರಿಹಾರ ನೀಡಬಹುದು (ಭಾಗವಹಿಸಿದ ಪ್ರತಿನಿಧಿ: ಡಾ.ಜಗದೀಶ್, ಹೆಚ್ಚುವರಿ ಮಹಾನಿರೀಕ್ಷಕರು, ಪೋಲಿಸ್ ಇಲಾಖೆ).

**ಈ ಎಲ್ಲಾ ಇಲಾಖೆಗಳ ಅಭಿವೃದ್ಧಿ ಫಲಾನುಭವದಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಸಂತ್ರಸ್ಥ ಮಹಿಳೆಯರಿಗೆ ಆದ್ಯತೆ ಮೇಲೆ ಫಲಾನುಭವಿಗಳಾಗಿಸುವುದು ಅತ್ಯಂತ ಸೂಕ್ತ.**

## 4.ಪ್ರಾತಿನಿಧಿಕ ಸಂಸ್ಥೆಗಳ ಮತ್ತು ರೈತರ ಅಭಿಪ್ರಾಯಗಳು

ರೈತರ ಆತ್ಮಹತ್ಯೆಗಳನ್ನು ತಡೆಗಟ್ಟಲು ಬೇಕಾದ ಕಾರ್ಯಕ್ರಮಗಳು ಮತ್ತು ಆತ್ಮಹತ್ಯೆ ನಡೆದೇ ಹೋದ ನಂತರ ಸಂತ್ರಸ್ಥರಿಗೆ ನೀಡಬೇಕಾದ ಪರಿಹಾರ ಕ್ರಮಗಳು ಇತ್ಯಾದಿಗಳ ಬಗ್ಗೆ ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ವಿವಿಧ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ರೈತರು ತಮ್ಮ ತಮ್ಮ ಅಭಿಪ್ರಾಯಗಳನ್ನು ನೀಡಿದ್ದಾರೆ. ಅವುಗಳ ಮುಖ್ಯಾಂಶಗಳನ್ನು ಕೆಳಗೆ ನಿರೂಪಿಸಲಾಗಿದೆ:

(1) ರೈತರ ಆತ್ಮಹತ್ಯೆಯು ಒಂದು ಕ್ಲಿಷ್ಟ ಸಮಸ್ಯೆಯಾಗಿದೆ. ಪರಿಹಾರ ದೊರಕಿದ ನಂತರವೂ ಸಹ ಮನೆಯವರೇ ಕಿತ್ತಾಡಿಕೊಂಡು ಮನೆಯ ನೆಮ್ಮದಿಯನ್ನು ಹಾಳು ಮಾಡಿಕೊಂಡ ಜೀವಂತ ನಿದರ್ಶನಗಳೂ ಸಹ ಇವೆ. ಆದ್ದರಿಂದ ಈ ಪರಿಸ್ಥಿತಿಯನ್ನು ನಾಜೂಕಾಗಿ ಬಗೆಹರಿಸಬೇಕು. ಮನೋವೈದ್ಯರುಗಳು ಕುಟುಂಬಗಳಲ್ಲಿ ಈ ಬಗ್ಗೆ ತಿಳುವಳಿಕೆಯನ್ನು ಹೆಚ್ಚಿಸಲು ಕ್ರಮ ತೆಗೆದುಕೊಳ್ಳಬೇಕು. ಧೈರ್ಯ ಕಳೆದುಕೊಳ್ಳದೆ, ಹವಾಮಾನಕ್ಕೆ ಅನುಗುಣವಾಗಿ ತಕ್ಕ ಬೆಳೆಯನ್ನು ಬೆಳೆದು ಲಕ್ಷಾಧೀಶ್ವರರು ಹಾಗೂ ಕೋಟ್ಯಾಧೀಶ್ವರರಾಗಿರುವ ಸ್ಥಳೀಯ

ಉದಾಹರಣೆಗಳೇ ನಮ್ಮ ಮುಂದಿವೆ. ಆದ್ದರಿಂದ ಆತ್ಮಹತ್ಯೆಯಂತಹ ದುರ್ಬಲ ಕೃತ್ಯಕ್ಕೆ ರೈತರು ಮನಗೊಡಬಾರದು – ಶ್ರೀ ಜಿ ಸಿ ಬೈಯಾರೆಡ್ಡಿ, ರಾಜ್ಯಾಧ್ಯಕ್ಷರು, ಕರ್ನಾಟಕ ಪ್ರಾಂತ ರೈತ ಸಂಘ.



(2) ಪ್ರಸ್ತುತ ವಿಷಯದ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಸಂಬಂಧಿತ ಸರ್ಕಾರಿ ಇಲಾಖೆಗಳು ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ಮತ್ತು ಪುನರ್ ವಸತಿ ಕಲ್ಪಿಸಲು ಆದ್ಯತೆಯ ಮೇರೆಗೆ ಕಾರ್ಯಪ್ರವೃತ್ತವಾಗಬೇಕೆಂದು ಒಂದು ಕಟ್ಟುನಿಟ್ಟಿನ ಆದೇಶವನ್ನು ಸರ್ಕಾರದ ಮುಖ್ಯಕಾರ್ಯದರ್ಶಿಗಳು ಹೊರಡಿಸಿದರೆ ಬಹಳ ಉಪಯುಕ್ತವಾಗುತ್ತದೆ. ಈ ಆದೇಶದಲ್ಲಿ ಗುತ್ತಿಗೆ ಆಧಾರದಲ್ಲಿ ಕೃಷಿ ಕಾರ್ಯವನ್ನು ಮಾಡುತ್ತಿರುವ ಕುಟುಂಬಗಳನ್ನೂ ಸಹ ಗಣನೆಗೆ ತೆಗೆದುಕೊಳ್ಳಬೇಕು. ತೆಲಂಗಾಣ ರಾಜ್ಯದಲ್ಲಿನ 3 ಜಿಲ್ಲೆಗಳಲ್ಲಿ "ಕಿಸಾನ್ ಮಿತ್ರ" ಸಹಾಯವಾಣಿಯು ಕಾರ್ಯನಿರತವಾಗಿದ್ದು, ರೈತರು ತಮ್ಮ ಸಾಲವನ್ನು ಹೇಗೆ ತೀರಿಸಿಕೊಳ್ಳಬಹುದೆಂಬ ಬಗ್ಗೆ ತಿಳುವಳಿಕೆಯನ್ನು ನೀಡಲಾಗುತ್ತಿದೆ. ಕೇರಳದಲ್ಲಿ ಈ ಬಗ್ಗೆ ಆಯೋಗವೊಂದನ್ನು ರಚಿಸಲಾಗಿದೆ. ಕರ್ನಾಟಕದಲ್ಲೂ ಸಹ ಈ ರೀತಿ ಮಾಡಬಹುದು – ಶ್ರೀಮತಿ ಕವಿತಾ ಕುರಗಂಟಿ, ಮಹಿಳಾ ಕಿಸಾನ್ ಅಧಿಕಾರ್ ಮಂಚ್.




(3) ಸಂತ್ರಸ್ತ ಕುಟುಂಬಗಳಿಗೆ ಸರ್ವ ರೀತಿಯಲ್ಲೂ ಸೌಲಭ್ಯಗಳನ್ನು ಒದಗಿಸಲು ಸರ್ಕಾರವು ಪ್ರಯತ್ನಿಸಬೇಕು. ಸಾಧ್ಯವಾದರೆ ಸಂತ್ರಸ್ತ ಕುಟುಂಬದ ಒಬ್ಬ ಸದಸ್ಯರಿಗೆ ಸರ್ಕಾರಿ ನೌಕರಿಯನ್ನೂ ಸಹ ನೀಡಬೇಕು – ಶ್ರೀ ಸೋಮಗುದ್ದು ರಂಗಸ್ವಾಮಿ, ಅಖಂಡ ಕರ್ನಾಟಕ ರೈತ ಸಂಘದ ಅಧ್ಯಕ್ಷರು.

(4) ಆತ್ಮಹತ್ಯೆ ಮಾಡಿಕೊಳ್ಳದೆ ಇರುವ ರೈತರ ಬಗ್ಗೆಯೂ ಸರ್ಕಾರವು ಯೋಚಿಸಬೇಕು. ನಿರ್ದಿಷ್ಟ ಬೆಳೆ ಯೋಜನೆಯ ಬಗ್ಗೆ ರೈತರನ್ನು ಒತ್ತಾಯಿಸಬಾರದು. ಆ ಬಗ್ಗೆ ಕೇವಲ ತಿಳುವಳಿಕೆಯನ್ನು ಮಾತ್ರ ನೀಡಬೇಕು – ಶ್ರೀ ಪಿ ಗೋಪಾಲ್, ಕರ್ನಾಟಕ ರಾಜ್ಯ ರೈತ ಸಂಘದ ಕಛೇರಿ ಕಾರ್ಯದರ್ಶಿಗಳು.

(5) ಸಂತ್ರಸ್ತೆಯರಿಗೆ ಬರಗಾಲ ಹಾಗೂ ಪ್ರವಾಹದ ಸಮಯಗಳಲ್ಲಿ ಆತ್ಮಸ್ಥೈರ್ಯ ನೀಡಬೇಕು. ಅವರುಗಳಿಗೆ ವಸತಿ ಇಲ್ಲದೆ ಇದ್ದರೆ ವಸತಿ ಸೌಲಭ್ಯ ಕಲ್ಪಿಸಬೇಕು. ಸಹಾಯವಾಣಿ ಸೌಲಭ್ಯ ಮತ್ತು ಗುರುತಿನ ಚೀಟಿ ಸೌಲಭ್ಯಗಳನ್ನೂ ಸಹ ಒದಗಿಸಬೇಕು – ಶ್ರೀಮತಿ ಮಮತಾ ಯಜಮಾನ್, ಸಿಐಇಡಿಎಸ್ ಸಂಸ್ಥೆಯ ಮಹಿಳಾ ಹೋರಾಟಗಾರ್ತಿ.

(6) ಗ್ರಾಮ ಸಭೆಗಳಲ್ಲಿ ಆತ್ಮಹತ್ಯೆ ವಿಷಯದ ಚರ್ಚೆಗಳಿಗೆ ಮಹತ್ವ ನೀಡಬೇಕು. ಮಹಿಳಾ ಕಿಸಾನ್ ಅಧಿಕಾರ್ ಮಂಚ್ ಸಂಸ್ಥೆಯು ಕೈಗೊಂಡ ಅಧ್ಯಯನದ ಉಪಯುಕ್ತ ಅಂಶಗಳನ್ನು ಅನುಷ್ಠಾನಗೊಳಿಸಬೇಕು – ಶ್ರೀಮತಿ ಬಿ ಅನಸೂಯಮ್ಮ, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ.

(7) ರೈತರು ಅಪಘಾತಗಳಿಗೆ ತುತ್ತಾದಾಗಲೂ ಸಹ ಆತ್ಮಹತ್ಯೆಗೆ ನೀಡುವ ರೀತಿಯಲ್ಲಿಯೇ ಪರಿಹಾರವನ್ನು ಒದಗಿಸಬೇಕು. ಸಾಲ ನೀತಿಯಲ್ಲಿ ಸರಳೀಕರಣ ಆಗಬೇಕು. ಪರಿಹಾರವು ಹೆಚ್ಚು ಪರಿಶ್ರಮವಿಲ್ಲದೆ ಸಿಗಬೇಕು – ಶ್ರೀ ಸುರೇಶ್ ಎಂ ಪಾಟೀಲ್, ರಾಜ್ಯ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘ.

(8) ದಾಖಲೆಗಳನ್ನು ಒದಗಿಸಿದ್ದರೂ ನನಗೆ ಪರಿಹಾರ ಸಿಕ್ಕಿಲ್ಲ – ಶ್ರೀಮತಿ ಚೌಡಮ್ಮ, ಸಂತ್ರಸ್ತ ಮಹಿಳೆ, ಕೋಲಾರದ ತಿಪ್ಪಸಂದ್ರ ಗ್ರಾಮ.

## 5. ಆಯೋಗದ ಅಧಿಕಾರಿಗಳು, ಸಲಹೆಗಾರರು ಹಾಗೂ ತಾಂತ್ರಿಕ ಸಹಾಯಕರ ಅಭಿಪ್ರಾಯಗಳು

ಸಂತ್ರಸ್ತ ರೈತ ಮಹಿಳೆಯರ ಬವಣೆಗಳು ಮತ್ತು ಪರಿಹಾರಗಳ ಸಾಧ್ಯತೆಯ ಬಗ್ಗೆ ಕೃಷಿ ಇಲಾಖೆಯ ನಿರ್ದೇಶಕರನ್ನೂ ಒಳಗೊಂಡಂತೆ ಅಧಿಕಾರಿಗಳು ಮತ್ತು ತಾಂತ್ರಿಕ ಸಿಬ್ಬಂದಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದ್ದಾರೆ. ವಿವರಗಳು ಈ ರೀತಿ ಇವೆ:

1. ರಾಜ್ಯ ಕೃಷಿ ಇಲಾಖೆಯು ರೈತರ ಬಗ್ಗೆ ಮೊದಲಿನಿಂದಲೂ ವಿಶೇಷ ಕಾಳಜಿಯನ್ನು ವಹಿಸುತ್ತಾ ಬಂದಿದೆ. ರೈತರು ಕೃಷಿಗಾಗಿ ಸಾಲ ಮಾಡಿಕೊಂಡು, ಅದನ್ನು ತೀರಿಸಲು ಸಾಧ್ಯವಾಗದಿದ್ದಾಗ ದುರ್ಬಲ ಮನಸ್ಸಿನಿಂದಾಗಿ ಆತ್ಮಹತ್ಯೆಗೆ ಶರಣಾಗುವುದು ಇಲಾಖೆಯನ್ನು ಕಳವಳಕ್ಕೀಡು ಮಾಡಿದೆ. ಘಟನೆಯು ನಡೆದೇ ಬಿಟ್ಟಾಗ ಅದನ್ನು ಹಿಂದಿರುಗಿಸಲು ಯಾರಿಗೂ ಸಾಧ್ಯವಾಗುವುದಿಲ್ಲ. ಆದ್ದರಿಂದ ಕನಿಷ್ಠ ಪಕ್ಷ ರೈತನ ಆತ್ಮಹತ್ಯೆಯಿಂದ ನೊಂದ ರೈತ ಕುಟುಂಬಕ್ಕೆ ಆರ್ಥಿಕವಾಗಿಯಾದರೂ ಸ್ವಲ್ಪ ಮಟ್ಟಿಗೆ ಸಹಾಯ ಮಾಡಿ ಅವರ ಸಂಕಷ್ಟವನ್ನು ಕಡಿಮೆ ಮಾಡಲು ಇಲಾಖೆಯು ಕಾಲಾನುಕಾಲಕ್ಕೆ ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಕಳುಹಿಸಿ ಪರಿಹಾರವನ್ನು ಹೆಚ್ಚಿಸಲು ನೆರವಾಗುತ್ತಿದೆ – ಶ್ರೀ ಬಿ ವೈ ಶ್ರೀನಿವಾಸ್, ಕೃಷಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಕೃಷಿ ಬೆಲೆ ಆಯೋಗ.

2. ರೈತರು ಆರೋಗ್ಯ ಮತ್ತಿತರ ಕಾರಣಗಳಿಂದ ಆಕಸ್ಮಿಕ ಸಾವಿಗೀಡಾದಾಗ ರೈತ ಮಹಿಳೆಯರು ಹೇಗೆ ಅದನ್ನು ಧೈರ್ಯವಾಗಿ ಎದುರಿಸುತ್ತಾರೋ, ಹಾಗೆಯೇ ಆತ್ಮಹತ್ಯೆಯಿಂದ ಸಾವು ಉಂಟಾದಾಗಲೂ ಅದನ್ನು ಧೈರ್ಯವಾಗಿ ಎದುರಿಸಬೇಕು. ಸರ್ಕಾರವು ನೀಡುವ ಪರಿಹಾರಕ್ಕೆ ಅಗತ್ಯವಾದ ದಾಖಲೆಗಳು ಇದ್ದ ಪಕ್ಷದಲ್ಲಿ, ಪರಿಹಾರವನ್ನು ಪಡೆಯಲು ಅವುಗಳನ್ನು ಒದಗಿಸಬೇಕು. ಸರ್ಕಾರದ ಪರಿಹಾರ ಪಡೆಯಲು ಮಾಡುವ ಪ್ರಯತ್ನ ಮಾಡಿ, ನಂತರ ತಮ್ಮ ಕಾಲ ಮೇಲೆ ತಾವೇ ನಿಂತುಕೊಳ್ಳಲು ದೃಢ ಮನಸ್ಸು ಮಾಡಿ ಮುಂದುವರೆಯಬೇಕು – ಡಾ. ಎನ್ ವಿ ಕಮಲ, ಉಪ ಕೃಷಿ ನಿರ್ದೇಶಕರು, ಕೃಷಿ ಬೆಲೆ ಆಯೋಗ.



3. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ "ಮಹಿಳಾ ಸಬಲೀಕರಣ" ಕಾರ್ಯಕ್ರಮದಲ್ಲಿ ಸಂತ್ರಸ್ತ ಮಹಿಳೆಯರಿಗೆ ಮೊದಲ ಆದ್ಯತೆ ನೀಡಬೇಕು. ದೂರದರ್ಶನದ "ಚಂದನ" ವಾಹಿನಿಯಲ್ಲಿ ನಿಯಮಿತವಾಗಿ ಪ್ರಸಾರವಾಗುವ "ಕೃಷಿ ದರ್ಶನ" ಕಾರ್ಯಕ್ರಮವನ್ನು ಅರ್ಧಗಂಟೆಯ ಬದಲಾಗಿ ಒಂದು ಘಂಟೆಗೆ ವಿಸ್ತರಿಸಿ ಸಂತ್ರಸ್ತರ ಮನೋ ಚೈತನ್ಯವನ್ನು ಹೆಚ್ಚಿಸುವ ಸಲಹೆಗಳು, ಉಪನ್ಯಾಸಗಳನ್ನು ಪ್ರಸರಿಸಬೇಕು. ಜೊತೆಗೆ, ಸಂಕಷ್ಟದಿಂದ ಕುಗ್ಗಿ ಹೋಗದೆ ಆತ್ಮಸ್ಥೈರ್ಯ ದಿಂದ ಯಶಸ್ಸನ್ನು ಕಂಡ ರೈತ ಮಹಿಳೆಯರ ಅನುಭವಗಳನ್ನು ಪ್ರಸಾರ ಮಾಡಬೇಕು. ಕೃಷಿಗಾಗಿಯೇ ಸ್ಥಳೀಯ ಭಾಷೆಯಲ್ಲಿ ಒಂದು ಪ್ರಾದೇಶಿಕ ವಾಹಿನಿಯನ್ನು ಪ್ರಾರಂಭಿಸಬೇಕು – ಶ್ರೀಮತಿ ಬಿ ವಿ ಸುಮಾ, ಕೃಷಿ ಅಧಿಕಾರಿ, ಕೃಷಿ ಬೆಲೆ ಆಯೋಗ.



4. ಕೃಷಿ ಮಾರುಕಟ್ಟೆ ಇಲಾಖೆಯು ಪ್ರತಿ ವರ್ಷವೂ ನವೆಂಬರ್ ತಿಂಗಳಿನಲ್ಲಿ ಏರ್ಪಡಿಸುವ "ಮಾರಾಟ ಸಪ್ತಾಹ"ದಲ್ಲಿ ಒಂದು ದಿನ "ರೈತರ ಆತ್ಮಹತ್ಯೆ"ಗೆ ಸಂಬಂಧಪಟ್ಟಂತೆಯೇ ಪ್ರತ್ಯೇಕವಾಗಿ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು. ಈ ಕಾರ್ಯಕ್ರಮಗಳು ರೈತರ ಮನೋಸ್ಥೈರ್ಯ ಹೆಚ್ಚಿಸುವಂತೆ ಇರಬೇಕು. ಜೊತೆಗೆ ರೈತರ ಆತ್ಮಹತ್ಯೆಯಿಂದ ನೊಂದ ಸಂತ್ರಸ್ಥೆಯರ ಬವಣೆಗಳನ್ನು ನೀಗಿಸಲು ಉಪಯುಕ್ತವಾಗುವಂತಹ ಸಂವಾದಗಳನ್ನು, ಪ್ರವಚನಗಳನ್ನು ಏರ್ಪಡಿಸಬೇಕು. ಸಂತ್ರಸ್ತ ಕುಟುಂಬಕ್ಕೆ ಸಿಗುವ ಪರಿಹಾರದ ಹಣವು ಕೇವಲ ರೈತನ ಪತ್ನಿಗಲ್ಲದೆ ಆತನ ತಂದೆ, ತಾಯಿಗೂ ದೊರಕುವಂತೆ ಕಾನೂನು ರೂಪಿಸಬೇಕು – ಶ್ರೀ ನಿರಂಜನ್ ಐತಾಳ್, ಹೆಚ್ಚುವರಿ ತಾಂತ್ರಿಕ ಸಲಹೆಗಾರರು, ಕೃಷಿ ಬೆಲೆ ಆಯೋಗ.

5. ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ಸಿಗುವ ಪರಿಹಾರದ ಹಣ ಶೀಘ್ರವಾಗಿ ಸಂತ್ರಸ್ತೆಯರಿಗೆ ದೊರಕಬೇಕು. ಪರಿಹಾರ ಪ್ರಕ್ರಿಯೆಯು ದಕ್ಷತೆಯಿಂದ ಕೂಡಿರಬೇಕು. ದೊರಕುವ ಪರಿಹಾರದಲ್ಲಿ ಅರ್ಧದಷ್ಟು ನಿಶ್ಚಿತ ಠೇವಣಿಯಲ್ಲಿರಬೇಕು ಮತ್ತು ಉಳಿದ ಅರ್ಧದಷ್ಟು ಅವರ ಖರ್ಚಿಗೆ ದೊರಕಬೇಕು – ಕುಮಾರಿ ನಿಶಿತ, ತಾಂತ್ರಿಕ ಸಹಾಯಕರು, ಕೃಷಿ ಬೆಲೆ ಆಯೋಗ.

6. ಸಂತ್ರಸ್ತ ಮಹಿಳೆಯರು ಮತ್ತೆ ಜೀವನ ಕಟ್ಟಿಕೊಳ್ಳುವ ಸಲುವಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ "ಮನೋ ಚೈತನ್ಯ" ಕಾರ್ಯಕ್ರಮವು ಪರಿಣಾಮಕಾರಿಯಾಗಿ ಕಾರ್ಯಗತವಾಗಬೇಕು. ಮನೋವಿಜ್ಞಾನಿಗಳು, ಅರ್ಥಶಾಸ್ತ್ರಜ್ಞರು, ಕೃಷಿ ಮತ್ತು ತೋಟಗಾರಿಕೆ ತಂತ್ರಜ್ಞರು ಇವರನ್ನೊಳಗೊಂಡ

ತಂಡವು ಸಂತ್ರಸ್ತೆಯರಿಗೆ ಉದ್ಯಮಶೀಲತೆ, ಕೌಶಲ್ಯಾಭಿವೃದ್ಧಿ, ಕೃಷಿ ಮತ್ತು ಸಂಬಂಧಿತ ಕಸುಬುಗಳ ತಾಂತ್ರಿಕತೆ ಇತ್ಯಾದಿಗಳನ್ನು ಕಲಿಸಿಕೊಡಬೇಕು – ಶ್ರೀಮತಿ ಜಯಶ್ರೀ ನಾರಾಯಣಪುರ, ತಾಂತ್ರಿಕ ಸಹಾಯಕರು, ಕೃಷಿ ಬೆಲೆ ಆಯೋಗ.

7. ರೈತನ ಆತ್ಮಹತ್ಯೆಯು ಯಾರೂ ನಿರೀಕ್ಷಿಸದೆ ಇದ್ದಾಗ ನಡೆದಿರುತ್ತದೆ. ಆ ಕ್ಷಣದಲ್ಲಿ ಯಾಕೆ ಆತ್ಮಹತ್ಯೆ ಮಾಡಿಕೊಂಡಿರಬಹುದು ಎನ್ನುವ ಕಾರಣವೂ ಗೊತ್ತಿರದೆ ಕುಟುಂಬದ ಎಲ್ಲರೂ ದಿಗ್ಭ್ರಮೆಗೊಳಗಾಗಿರುತ್ತಾರೆ. ಆಂತಹ ಸಂದರ್ಭದಲ್ಲಿ ರೈತನ ಪತ್ನಿಯು ಪರಿಹಾರಕ್ಕಾಗಿ ಬೇಕಾದ ದಾಖಲೆಗಳನ್ನು ಹುಡುಕುತ್ತಾ ಕೂರುವುದು ಅಸಾಧ್ಯವಾಗಿರುತ್ತದೆ ಮತ್ತು ಅಪನಿಂದೆ ಹಾಗೂ ಅಪಹಾಸ್ಯಕ್ಕೆ ಆಕೆ ಗುರಿಯಾಗಬೇಕಾಗುತ್ತದೆ. ಆದ್ದರಿಂದ ಕುಟುಂಬದ ಯಾರಾದರೂ ವಯಸ್ಕ ಗಂಡಸರು ಅಥವಾ ತೀರಾ ಹತ್ತಿರದ ನೆಂಟರಿಷ್ಟರು ನಿಸ್ವಾರ್ಥತೆಯಿಂದ ಮರಣ ಪತ್ರ ದೊರಕಿಸಿಕೊಡಬೇಕು ಹಾಗೂ ಭೂ ಒಡೆತನದ ದಾಖಲೆಗಳು, ಸಾಂಸ್ಥಿಕ ಮತ್ತು ಸಾಂಸ್ಥಿಕೇತರ ಸಾಲಗಳ ದಾಖಲೆಗಳು ಇತ್ಯಾದಿಗಳ ಪ್ರತಿಗಳನ್ನು ತೆಗೆಸಿ ಸಂಬಂಧಪಟ್ಟ ಕಛೇರಿಗಳಿಗೆ ಸಲ್ಲಿಸಬೇಕು. ನಂತರವೂ ಪರಿಹಾರ ಸಿಗುವ ತನಕ ಓಡಾಡಬೇಕು. ಈ ಸೇವೆಗೆ ಅವರು ಯಾವ ಪ್ರತಿಫಲವನ್ನೂ ಅಪೇಕ್ಷಿಸಬಾರದು ಮತ್ತು ಮುಂದೆಯೂ ತಾನು ಮಾಡಿದ ಕಾರ್ಯದ ಬಗ್ಗೆಯೇ ಹೇಳಿಕೊಳ್ಳುತ್ತಾ ರೈತನ ಪತ್ನಿಯ ಮನಸ್ಸನ್ನು ಕುಗ್ಗಿಸಬಾರದು. ರೈತರು ಕಂಡುಕೊಂಡಿದ್ದ ಜೀವನೋಪಾಯವನ್ನೇ ರೈತ ಪತ್ನಿಯೂ ಸಹ ಮುಂದುವರೆಸಿಕೊಂಡು ಹೋಗಲು ಸಹಕರಿಸಬೇಕು. ಕುಟುಂಬದಲ್ಲಿನ ಇತರ ಸದಸ್ಯರು (ರೈತನ ತಂದೆ ತಾಯಿಗಳು, ಇತರ ಅವಲಂಬಿತರು) ರೈತನ ಪತ್ನಿಯೊಂದಿಗೆ ಸಾಮರಸ್ಯದಿಂದ ನಡೆದುಕೊಂಡು, ಪರಿಹಾರಧನದ ನೆರವಿನಿಂದ ಕುಟುಂಬವು ಗೌರವಯುತವಾಗಿ ಜೀವನವನ್ನು ಸಾಗಿಸಿಕೊಂಡು ಹೋಗುವಂತೆ ಮಾಡಬೇಕು –ಡಾ ಕೆ ಎಸ್‌ಜನಾರ್ಧನ, ತಾಂತ್ರಿಕ ಸಹಾಯಕರು, ಕೃಷಿ ಬೆಲೆ ಆಯೋಗ.

8. ಸರ್ಕಾರವು ಈವರೆಗೆ ರೈತರ ಆತ್ಮಹತ್ಯೆಗೆ ಪರಿಹಾರ ದೊರಕಿಸಲು ಅನೇಕ ಆದೇಶಗಳನ್ನು ಹೊರಡಿಸಿದೆ ಮತ್ತು ಇದರಿಂದಾಗಿ ಸಂತ್ರಸ್ತ ಕುಟುಂಬಗಳು ಬಹಳಷ್ಟು ಪ್ರಯೋಜನವನ್ನು ಪಡೆದಿವೆ. ಕಾರ್ಯಾಗಾರದಿಂದ ಹೊರಹೊಮ್ಮಿದ ಫಲಿತಾಂಶಗಳನ್ನು ಉಪಯೋಗಿಸಿಕೊಂಡು ಮತ್ತಷ್ಟು ಪರಿಣಾಮಕಾರಿ ಆದೇಶಗಳನ್ನು ಹೊರಡಿಸಿದಲ್ಲಿ ಸಂತ್ರಸ್ತ ಕುಟುಂಬಗಳಿಗೆ ಹೆಚ್ಚಿನ ಪ್ರಯೋಜನವಾಗುತ್ತದೆ –ಡಾ.ಶ್ರೀಧರ ಅಡಿಗ, ಅಧ್ಯಕ್ಷರ ಆಪ್ತ ಕಾರ್ಯದರ್ಶಿಗಳು, ಕೃಷಿ ಬೆಲೆ ಆಯೋಗ.

9. ರೈತರು ಸದೃಢ ಮನಸ್ಕರಾದರೆ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ. ಇಂದು ಎಷ್ಟೇ ಸಮಸ್ಯೆಗಳಿದ್ದರೂ, ನಾಳೆ ಅದು ಇನ್ನಷ್ಟು ಕಡಿಮೆಯಾಗಬಹುದು ಎಂಬ ಮನೋಭಾವದಿಂದ ಜೀವನವನ್ನು ಸಾಗಿಸಿಕೊಂಡು ಹೋಗಬೇಕು. ಆತ್ಮಹತ್ಯೆಗಳು ಆಗದಂತೆ ಸರ್ಕಾರವು ಒಂದು ಕ್ರಿಯಾಯೋಜನೆ ರೂಪಿಸುವುದು ಸೂಕ್ತ – ಶ್ರೀ ಎ ಕೆ ಅಭಿಷೇಕ್, ಮಾಜಿ ತಾಂತ್ರಿಕ ಸಹಾಯಕರು, ಕೃಷಿ ಬೆಲೆ ಆಯೋಗ.

# 6. ಕೃಷಿ ಬೆಲೆ ಆಯೋಗದ ಶಿಫಾರಸ್ಸುಗಳು

## (ಅ) ರೈತರ ಆತ್ಮಹತ್ಯೆಯನ್ನು ತಡೆಗಟ್ಟುವುದಕ್ಕಾಗಿ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳು

- **ವೈಜ್ಞಾನಿಕ ಕೃಷಿ ವಿಸ್ತರಣಾ ಸೇವೆಗಳು:** ರೈತರ ಆತ್ಮಹತ್ಯೆಯನ್ನು ತಡೆಗಟ್ಟುವಲ್ಲಿ ಈ ಸೇವೆಗಳು ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಆಯಾ ಜಮೀನುಗಳ ಫಲವತ್ತತೆ, ಹವಾಗುಣ, ಇಳುವರಿ, ಬೆಳೆಯ ಲಾಭ ನಷ್ಟ ಇತ್ಯಾದಿಗಳ ಬಗ್ಗೆ ವಿಸ್ತರಣಾ ಅಧಿಕಾರಿಗಳು ಹಾಗೂ ಕಾರ್ಯಕರ್ತರು ಸಂಪೂರ್ಣ ಮಾಹಿತಿಯನ್ನು

ಒದಗಿಸುತ್ತಿರಬೇಕು. ಬೆಳೆ ರಕ್ಷಣೆಗಾಗಿ ಉತ್ತಮ ನೀರಾವರಿ, ಗುಣಮಟ್ಟದ ವಿದ್ಯುತ್ತು, ಬೆಳೆ ವಿಮೆ ಮುಂತಾದವುಗಳ ಬಗ್ಗೆಯೂ ಸಹ ಜಾಗೃತಿಯನ್ನು ಮೂಡಿಸಬೇಕು.

- **ಕಡಿಮೆ ವೆಚ್ಚದ ತಂತ್ರಜ್ಞಾನಗಳು:** ಕೃಷಿ ಜೀವಿಪರಿಸರ ಪದ್ಧತಿಗಳನ್ನು ಅನುಸರಿಸಿ ರೈತರು ಕೃಷಿಯನ್ನು ಮಾಡಬೇಕು. ಇದರಿಂದ ಕೃಷಿಯಲ್ಲಿನ ವೆಚ್ಚ ಕಡಿಮೆಯಾಗುವುದಲ್ಲದೆ ಜೀವಿಪರಿಸರವೂ ಸಹ ಉತ್ತಮಗೊಳ್ಳುತ್ತದೆ. ರೈತರು ಮತ್ತೆ ಮತ್ತೆ ಬೆಳೆ ವೈಫಲ್ಯಗಳು ಹಾಗೂ ನೈಸರ್ಗಿಕ ವಿಪತ್ತುಗಳಿಗೆ (ಬರಗಾಲದಂತಹ) ಈಡಾಗುವುದನ್ನು ತಪ್ಪಿಸಲು ನೀರಿನ ಮೂಲಗಳನ್ನು ಸಂರಕ್ಷಿಸುವುದು ಅತಿ ಮುಖ್ಯವಾಗಿರುತ್ತದೆ. ಬೆಳೆಗಳಿಗೆ ರಕ್ಷಣಾತ್ಮಕ ನೀರಾವರಿಯನ್ನು ನೀಡುವುದು, ಬೆಳೆ ವಿಮೆ ಮಾಡಿಸುವುದು ಇತ್ಯಾದಿಗಳೂ ಕೆಲವು ಉಪಾಯಗಳಾಗಿವೆ. ವಿಪತ್ತುಗಳಿಗೆ ನೀಡುವ ಪರಿಹಾರವು ಕನಿಷ್ಠ ಪಕ್ಷ ಬೆಳೆಗಾಗಿ ಮಾಡಿದ ಖರ್ಚಿನಷ್ಟಾದರೂ ಇರಬೇಕು.

- **ಮಾರುಕಟ್ಟೆ ಕಾರ್ಯಕ್ರಮಗಳು:** ಯಾವ ಕೃಷಿ ಉತ್ಪನ್ನಗಳೂ ಸಹ ಘೋಷಿತ ಬೆಂಬಲ ಬೆಲೆಗಿಂತಲೂ ಕಡಿಮೆ ಬೆಲೆಗೆ ಮಾರಾಟವಾಗದಂತೆ ಕ್ರಮ ವಹಿಸಬೇಕು. ಇದಕ್ಕಾಗಿ ಕನಿಷ್ಠ ಬೆಲೆ ಖಾತರಿ ಕಾಯ್ದೆಯು ಅತ್ಯುತ್ತಮ ಮಾರ್ಗವಾಗಿದೆ. ಮಾರುಕಟ್ಟೆ ದರವು ಬೆಂಬಲ ಬೆಲೆಗಿಂತಲೂ ಕಡಿಮೆಯಾದಾಗ ಸರ್ಕಾರಿ ಖರೀದಿ ಕೇಂದ್ರಗಳಿಗೆ ರೈತರೇ ಹೋಗುವ ಬದಲಾಗಿ ಖರೀದಿ ಕೇಂದ್ರಗಳೇ **(ಸಂಚಾರಿ ಖರೀದಿ ಕೇಂದ್ರಗಳು)** ರೈತನ ಮನೆ ಬಾಗಿಲಿಗೆ ಹೋಗುವುದು ಸೂಕ್ತ. **ಹೀಗಾದಾಗ ಮಾತ್ರ ಸಂಚಾರಿ ಖರೀದಿ ಕೇಂದ್ರಗಳ ವ್ಯವಸ್ಥೆಯು ಅತ್ಯಂತ ಮಾದರಿ ವ್ಯವಸ್ಥೆಯಾಗುತ್ತದೆ.**

- **ಮನೋ ವಿಕಾಸ ಸೇವೆ:** ಆರೋಗ್ಯ ಇಲಾಖೆಯ **"ಮನೋ ಚೈತನ್ಯ"** ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಲುವಾಗಿ ಗ್ರಾಮೀಣ ಯುವಕ ಯುವತಿಯರನ್ನು ವ್ಯಾಪಕ ಪ್ರಮಾಣದಲ್ಲಿ ಒಗ್ಗೂಡಿಸಿಕೊಳ್ಳಬೇಕು ಮತ್ತು ಅವರನ್ನು ಈ ಕಾರ್ಯಕ್ರಮದ ಕಾರ್ಯಕರ್ತರಾಗಿ ಉಪಯೋಗಿಸಿಕೊಳ್ಳಬೇಕು.

## (ಆ) ಪರಿಹಾರೋಪಾಯಗಳು

- "ರೈತ" ಎನ್ನುವ ಪದದ ವ್ಯಾಪ್ತಿ ವಿಸ್ತೃತಗೊಳ್ಳುವುದು ಸೂಕ್ತ. ಕೃಷಿ ಭೂಮಿಯನ್ನು ಹೊಂದಿರುವವರು / ಕೃಷಿ ಭೂಮಿಯನ್ನು ಲಾವಣಿ ಪಡೆದಿರುವವರು ಮಾತ್ರ ರೈತನೆಂದು ಈಗ ಪರಿಗಣಿಸಲಾಗುತ್ತಿದೆ. ವಾಸ್ತವವಾಗಿ ಕೃಷಿಗೆ ಪೂರಕವಾದ ಸಂಬಂಧಿತ ಚಟುವಟಿಕೆಗಳಾದ ಪಶು ಸಂಗೋಪನೆ, ಮೀನುಗಾರಿಕೆ, ರೇಷ್ಮೆ ಕೃಷಿ, ಕುರಿ, ಮೇಕೆ, ಕೋಳಿ, ಹಂದಿ, ಮೊಲ ಇವುಗಳ ಸಾಕಾಣಿಕೆ ಮುಂತಾದ ಚಟುವಟಿಕೆಗಳನ್ನು ಮಾಡುವವರೂ ಸಹ ರೈತರೇ ಆಗಿರುತ್ತಾರೆ. ಜೊತೆಗೆ ಕೃಷಿಗೆ ಬೇಕಾದ ಸಾಧನಗಳನ್ನು ಅಂದರೆ ನೇಗಿಲುಗಳು, ಕುಂಟೆಗಳು, ಹಗ್ಗ, ಕಣ್ಣಿ, ಪಶು ಸಂಗೋಪನೆಗೆ ಬೇಕಾಗುವ ಇನ್ನಿತರ ಗುಡಿ ಕೈಗಾರಿಕೆ ವಸ್ತುಗಳನ್ನು ತಯಾರಿಸುವವರೂ ಸಹ ರೈತರೇ ಆಗಿರುತ್ತಾರೆ. ಸರ್ಕಾರವು **ಸಮಗ್ರ ಕೃಷಿ ಪದ್ಧತಿ** ಮಾದರಿಯನ್ನು ಅಳವಡಿಸಿಕೊಳ್ಳಲು ರೈತರಿಗೆ ಪ್ರೋತ್ಸಾಹಿಸುತ್ತಿದೆ. ಈ ಹಿನ್ನೆಲೆಯಲ್ಲಿ ಮೇಲೆ ಹೇಳಿದ ಎಲ್ಲಾ ಉದ್ಯೋಗಿಗಳೂ ಸಹ ಸಮಗ್ರ ಕೃಷಿ ಪದ್ಧತಿಯ ಅವಿಭಾಜ್ಯ ಅಂಗವಾಗಿರುತ್ತಾರೆ. **ಆದ್ದರಿಂದ ಇವರೆಲ್ಲರನ್ನೂ ರೈತರೆಂದೇ ಪರಿಗಣಿಸಿ ಈ ಸಮುದಾಯದಲ್ಲಿ ಆತ್ಮಹತ್ಯೆ ಸಂಭವಿಸಿದಲ್ಲಿ ಸರ್ಕಾರವು ರೈತರ ಆತ್ಮಹತ್ಯೆಗೆ ನೀಡುವ ಎಲ್ಲಾ ಪರಿಹಾರ ಸೌಲಭ್ಯಗಳನ್ನೂ ಸಹ ಇವರುಗಳ ಸಂತ್ರಸ್ತ ಕುಟುಂಬಗಳಿಗೂ ನೀಡುವುದು ಸೂಕ್ತ.**

- ರೈತರ ಆತ್ಮಹತ್ಯೆಗಳು ಸರ್ವೇಸಾಮಾನ್ಯವಾಗಿ ಆರ್ಥಿಕ ಮುಗ್ಗಟ್ಟಿಗೆ ಸಂಬಂಧಿಸಿರುತ್ತವೆ. ಆದ್ದರಿಂದ ಆತ್ಮಹತ್ಯೆಗೊಳಗಾದ ರೈತನ ಕುಟುಂಬದ ಬವಣೆಗಳೂ ಅಸದಳವಾಗಿರುತ್ತದೆ. ಹೀಗಾಗಿ ಕುಟುಂಬದ ಆರ್ಥಿಕ ಮುಗ್ಗಟ್ಟನ್ನು ಹೋಗಲಾಡಿಸಲು ಪರಿಹಾರವು ಶೀಘ್ರವಾಗಿ ಸಿಗಬೇಕಾಗಿರುತ್ತದೆ. ಸರ್ಕಾರದ ಉಪ ವಿಭಾಗೀಯ ಅಧಿಕಾರಿಗಳ ನೇತೃತ್ವದ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುವ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರು **ಈ ಬಗ್ಗೆ ಜವಾಬ್ದಾರಿ ವಹಿಸಿಕೊಂಡು ಅಗತ್ಯವಾದ ಎಲ್ಲಾ ದಾಖಲೆಗಳನ್ನೂ ಸಹ ಸಂಕಷ್ಟಕ್ಕೊಳ್ಳಗಾದ ಕುಟುಂಬಗಳಿಂದ ಪಡೆದು ಅರ್ಜಿಯ ಜೊತೆಗೆ ಸಮಿತಿಗೆ ಸಲ್ಲಿಸಬೇಕು ಮತ್ತು ಯಾವುದೇ ಕಾರಣಕ್ಕಾಗಿಯೂ ಅರ್ಜಿಗಳು ದಾಖಲೆಗಳ ಕೊರತೆಯಿಂದ ತಿರಸ್ಕೃತವಾಗದಂತೆ ನೋಡಿಕೊಳ್ಳಬೇಕು**. ಜೊತೆಗೆ ಈ ಸಮಿತಿಯಲ್ಲಿ ಮತ್ತು ಮೇಲ್ಮನವಿ ಸಮಿತಿಯಲ್ಲಿ ರೈತ ಪ್ರತಿನಿಧಿಯೊಬ್ಬರನ್ನು ಸದಸ್ಯರನ್ನಾಗಿ ನೇಮಿಸಿಕೊಳ್ಳಬೇಕು.
- ಸಂತ್ರಸ್ತ ಕುಟುಂಬಗಳಿಗೆ ನಿರ್ದಿಷ್ಟ ಕಾಲಮಿತಿಯೊಳಗೆ ಪರಿಹಾರ ದೊರಕುವುದು ಅವಶ್ಯಕವಾಗಿದೆ. ಇದಕ್ಕಾಗಿ "ಸಕಾಲ" ಯೋಜನೆಯ ನಿಯಮಾವಳಿಗಳನ್ನು ಇಲ್ಲಿಯೂ ಅಳವಡಿಸಿಕೊಳ್ಳಬೇಕು.
- ಪರಿಹಾರದ ಮೊತ್ತದಲ್ಲಿ ಶೇ.50 ರಷ್ಟು ಹಣವನ್ನು ಸಂತ್ರಸ್ತ ವಿಧವೆಯ ಹೆಸರಿನಲ್ಲಿ ನಿಶ್ಚಿತ ಠೇವಣಿಯಾಗಿ ಬ್ಯಾಂಕಿನಲ್ಲಿ ಇಡಬೇಕು. ಈ ಠೇವಣಿಯು ಸಾಕಷ್ಟು ದೀರ್ಘಕಾಲದ್ದಾಗಿರಬೇಕು. ಇದರಿಂದ ಬರುವ ಬಡ್ಡಿಯ ಮೊತ್ತವು (ವಾರ್ಷಿಕ / ಮಾಸಿಕ) ವಿಧವೆಗೆ / ಅವಲಂಬಿತರಿಗೆ ನಿಯಮಿತವಾಗಿ ಸಿಗುತ್ತಿರಬೇಕು. ಉಳಿದ ಶೇ.50 ರಷ್ಟು ಹಣವನ್ನು ಅಗತ್ಯ ಖರ್ಚುಗಳಿಗಾಗಿ ಉಳಿತಾಯ ಖಾತೆಗೆ ಹಾಕಬಹುದಾಗಿದೆ.
- ಸಂತ್ರಸ್ಥ ವಿಧವೆಯ / ಅವಲಂಬಿತರ ಉಳಿತಾಯ ಖಾತೆಗೆ ಜಮೆಯಾಗುವ ಶೇ.50 ರಷ್ಟು ಹಣದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳು / ಸಹಕಾರಿ ಬ್ಯಾಂಕುಗಳು / ಖಾಸಗಿ ಬ್ಯಾಂಕುಗಳು ಮುಂತಾದ ಸಂಸ್ಥೆಗಳಿಂದ ಹಾಗೂ ಖಾಸಗಿ ಲೇವಾ ದೇವಿಗಾರರಿಂದ ಸಾಲ ವಸೂಲಾತಿಗಾಗಿ ಉಂಟಾಗುವ ಕಿರುಕುಳ ತಪ್ಪಿಸಲು ಆತ್ಮಹತ್ಯೆಗೊಳಗಾದ ರೈತನು ಮಾಡಿದ್ದ ಸಾಲದ ಪೈಕಿ ನಿಶ್ಚಿತ ಠೇವಣಿಯ ನಂತರ ಉಳಿದಿರುವ ಶೇ.50 ರಷ್ಟು ಹಣದಲ್ಲಿ ಗರಿಷ್ಠ ಶೇ.50 ರಷ್ಟು ಹಣವನ್ನು ಮಾತ್ರ ಕಾನೂನಿನ ಚೌಕಟ್ಟಿನಲ್ಲಿ ತೀರಿಸಲು ಸಮಿತಿಯು ಸಾಲಗಾರರೊಡನೆ ಚರ್ಚಿಸಬೇಕು ಮತ್ತು ಇತ್ಯರ್ಥ ಪಡಿಸಬೇಕು. ಜೊತೆಗೆ ಸಾಂಸ್ಥಿಕ ಸಾಲವು ವಾಣಿಜ್ಯ ಬ್ಯಾಂಕುಗಳಿಂದ ಹಾಗೂ ಸಹಕಾರಿ ಬ್ಯಾಂಕುಗಳಿಂದ ಮತ್ತೆ ಸಿಗುವಂತಾಗಬೇಕು.
- ಸಾರ್ವಜನಿಕ ಶಿಕ್ಷಣ ಇಲಾಖೆಯು ಮೊರಾರ್ಜಿ ಶಾಲೆಗಳಲ್ಲಿ ಮತ್ತು ಕೇಂದ್ರೀಯ ವಿದ್ಯಾಲಯಗಳಲ್ಲಿ ಸಂತ್ರಸ್ಥರ ಮಕ್ಕಳು ವಿದ್ಯಾಭ್ಯಾಸ ಪಡೆಯುವಂತಾಗಲು ಪ್ರವೇಶಾತಿಯಲ್ಲಿ ಆದ್ಯತೆ ನೀಡಬೇಕು. ಉಳಿದ ಎಲ್ಲಾ ಅಭಿವೃದ್ಧಿ ಇಲಾಖೆಗಳೂ ಸಹ ಗರಿಷ್ಠ ಮಟ್ಟದಲ್ಲಿ ಸಂತ್ರಸ್ತೆಯರಿಗೆ ಫಲಾನುಭವ ಸಿಗುವಂತೆ ಅವರಿಗೆ ಆದ್ಯತೆ ನೀಡಬೇಕು. ಈ ವಿಷಯದಲ್ಲಿ ಪರಾಮರ್ಶೆ ಮಾಡಿ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ತಾಲ್ಲೂಕು ಮತ್ತು ಜಿಲ್ಲಾ ಮಟ್ಟಗಳಲ್ಲಿ ಮಾಸಿಕ ಹಾಗೂ ತ್ರೈಮಾಸಿಕ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ (KDP) ಪರಾಮರ್ಶೆ ಸಭೆಗಳಲ್ಲಿ ಇದನ್ನು ಆದ್ಯತೆಯ ವಿಷಯವಾಗಿಟ್ಟುಕೊಂಡು ಚರ್ಚಿಸಬೇಕು
- ಆತ್ಮಹತ್ಯೆಗೊಳಗಾದ ರೈತನ ಹೆಂಡತಿ / ಮಗ / ಮಗಳಿಗೆ ಅನುಕಂಪದ ಆಧಾರದ ಮೇಲೆ ಸರ್ಕಾರಿ/ ಸಾರ್ವಜನಿಕ ಉದ್ದಿಮೆಗಳಲ್ಲಿ ಸಂತ್ರಸ್ಥರ ಸಾಮರ್ಥ್ಯಕ್ಕನುಸಾರವಾಗಿ ನೌಕರಿಯನ್ನು ಒದಗಿಸುವಂತಾಗಬೇಕು.
- ಈಗ ನೀಡುತ್ತಿರುವ 5 ಲಕ್ಷ ರೂಗಳ ಪರಿಹಾರ ಹಣವನ್ನು ಹಣದುಬ್ಬರದ ಹಿನ್ನೆಲೆಯಲ್ಲಿ 8 ಲಕ್ಷ ರೂಗಳಿಗೆ ಏರಿಸುವುದು ಸೂಕ್ತ.

**ರಾಜ್ಯ ಸರ್ಕಾರವು ರೈತರ ಆತ್ಮಹತ್ಯೆ ವಿಚಾರದಲ್ಲಿ ಸಂತ್ರಸ್ಥ ಕುಟುಂಬಗಳಿಗೆ ಪರಿಹಾರ, ಸರ್ಕಾರಿ ಸೌಲಭ್ಯ ಮುಂತಾದವುಗಳನ್ನು ಒದಗಿಸುವಲ್ಲಿ ದೇಶದಲ್ಲಿಯೇ ಮಾದರಿ ರಾಜ್ಯವಾಗಿದೆ. ಹೀಗಾಗಿ ಇದರಲ್ಲಿ ಇನ್ನಷ್ಟು ಸುಧಾರಣಾ ಕ್ರಮಗಳನ್ನು ಕೈಗೊಳ್ಳಲು ಮೇಲಿನ ಶಿಫಾರಸ್ಸುಗಳನ್ನು ಅಳವಡಿಸಿಕೊಳ್ಳಬಹುದಾಗಿದೆ.**

## 7.ಪರಿಸಮಾಪ್ತಿ

ಭಾರತೀಯ ಸಂಸ್ಕೃತಿಯು ಜನ ಜೀವನದ ಮೇಲೆ ಗಾಢವಾದ ಪರಿಣಾಮವನ್ನು ಬೀರುತ್ತಾ ಬಂದಿದೆ. ಈ ಸಂಸ್ಕೃತಿಯ ಪ್ರಕಾರ ದೇವರು ಕೊಟ್ಟ ಜೀವನವನ್ನು ಕೊನೆಯ ಉಸಿರು ಸ್ವಾಭಾವಿಕವಾಗಿ ನಿಲ್ಲುವವರೆಗೆ ಮುಂದುವರೆಸಿಕೊಂಡು ಹೋಗಬೇಕೇ ಹೊರತು, ನಾವಾಗಿಯೇ ಅದನ್ನು ಬಲವಂತವಾಗಿ ನಿಲ್ಲಿಸಬಾರದು. ಈ ತತ್ವವನ್ನು ಸಮುದಾಯದ ಎಲ್ಲರೂ ಒಪ್ಪಿಕೊಂಡಿದ್ದರೂ ಸಹ, ಆಗಾಗ ಆತ್ಮಹತ್ಯೆಗಳಾಗುವುದನ್ನು ನಾವು ಕಾಣುತ್ತೇವೆ. ಗ್ರಾಮ ಜೀವನದಂತಹ ಗಟ್ಟಿ ವಾತಾವರಣದಲ್ಲಿರುವ ಕೃಷಿಕರೂ ಸಹ ಈ ರೀತಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಆತಂಕದ ವಿಷಯವಾಗಿದೆ.

ಕರ್ನಾಟಕ ರಾಜ್ಯ ಸರ್ಕಾರವು ದುರ್ಭರ ಸನ್ನಿವೇಶದಲ್ಲಿ ರೈತರು ಆತ್ಮಹತ್ಯೆಗೀಡಾದಾಗ ಅವರ ಹೆಂಡತಿ ಮಕ್ಕಳು ಬೀದಿಪಾಲಾಗಬಾರದೆಂದು 2003ರಲ್ಲಿ ಕೃಷಿ ತಜ್ಞ ಡಾ. ವೀರೇಶ್‌ರವರ ನೇತೃತ್ವದ ಸಮಿತಿಯಿಂದ ವರದಿ ಪಡೆಯಿತು ಮತ್ತು ಅದರ ಪ್ರಕಾರ ಸಾಲದ ಹೊರೆಯೇ ಆತ್ಮಹತ್ಯೆಗೆ ಒಂದು ಮೂಲ ಕಾರಣ ಎಂಬ ಅಭಿಪ್ರಾಯಕ್ಕೆ ಬಂದಿತು. ಇದಕ್ಕಾಗಿ 2003ರಲ್ಲಿ 1ಲಕ್ಷ ರೂಗಳ ಪರಿಹಾರ ಮತ್ತು 500 ರೂ.ಗಳ ವಿಧವಾ ವೇತನ ನೀಡಿತು. ಇದು ಕಾಲಾನುಕಾಲದಲ್ಲಿ ಪರಿಷ್ಕೃತಗೊಳ್ಳುತ್ತಾ ಬಂದಿದ್ದು, ಸದ್ಯದಲ್ಲಿ 5 ಲಕ್ಷ ರೂ.ಗಳ ಪರಿಹಾರ ವೇತನ ಮತ್ತು 2 ಸಾವಿರ ರೂ.ಗಳ ವಿಧವಾ ವೇತನ ನೀಡುತ್ತಿದೆ. ಈ ಪರಿಷ್ಕೃತ ಆದೇಶದಲ್ಲಿ ಕಂಡು ಬಂದ ಒಂದು ವಿಶೇಷವೇನೆಂದರೆ, ಅಲ್ಪಾವಧಿ ಒಪ್ಪಂದ ಮಾಡಿಕೊಂಡು ಬೇರೆಯವರ ಜಮೀನಿನಲ್ಲಿ ಕೃಷಿ ಮಾಡುವ ರೈತರು ಆತ್ಮಹತ್ಯೆ ಮಾಡಿಕೊಂಡಾಗ ಅವರ ಕುಟುಂಬದವರಿಗೂ ಪರಿಹಾರ ನೀಡುವ ಅವಕಾಶ ಕಲ್ಪಿಸಲಾಗಿದೆ. ಅದೇ ರೀತಿಯಲ್ಲಿ ಸಮಗ್ರ ಕೃಷಿ ಪದ್ಧತಿ ಅನುಸಾರ ಎಲ್ಲಾ ಕೃಷಿ ಸಂಬಂಧಿತ ಉದ್ಯೋಗ ಮಾಡುವವರಿಗೂ ಈ ಸೌಲಭ್ಯ ವಿಸ್ತರಿಸಬಹುದಾಗಿದೆ.

ಸರ್ಕಾರದ ವಿವಿಧ ಇಲಾಖೆಗಳೂ ಸಹ ತಮ್ಮ ಚಾಲ್ತಿ ಯೋಜನೆಗಳ ಮೂಲಕ ಸಂತ್ರಸ್ತೆಯರಿಗೆ ಸೌಲಭ್ಯ ನೀಡುವ ಉದ್ದೇಶ ಹೊಂದಿವೆ ಮತ್ತು ಆ ಉದ್ದೇಶಗಳನ್ನು ಕಾರ್ಯಾಚರಣೆಗೂ ತಂದಿವೆ. ಮಹಿಳಾ ಕಿಸಾನ್ ಅಧಿಕಾರ್ ಮಂಚ್ ನಂತಹ ಮಹಿಳಾ ಪರ ವೇದಿಕೆಗಳು ಈ ದಿಸೆಯಲ್ಲಿ ಮಹಿಳೆಯರ ಪರವಾಗಿ ನಿಂತು ಅವರಿಗೆ ಸಿಗಬೇಕಾದ ಸೌಲಭ್ಯಗಳು ಸಿಗುವಂತೆ ಮಾಡುತ್ತಿರುವುದು ಬಹಳ ಸ್ತುತ್ಯರ್ಹವಾಗಿದೆ. ಈ ರೀತಿಯ ಪ್ರಯತ್ನಗಳು ದೊಡ್ಡ ಪ್ರಮಾಣದಲ್ಲಿ ಹಾಗೂ ಇನ್ನೂ ಹೆಚ್ಚಿನ ವ್ಯಾಪ್ತಿಯಲ್ಲಿ ನಡೆಯಬೇಕಿದೆ.

**ಕರ್ನಾಟಕ ಕೃಷಿ ಬೆಲೆ ಆಯೋಗದ ಅಭಿಮತದ ಪ್ರಕಾರ ಈ ವಿಷಯದಲ್ಲಿ ತುರ್ತಾಗಿ ಎರಡು ಕೆಲಸಗಳು ಆಗ ಬೇಕಿವೆ. ಅವೆಂದರೆ: (1) ರೈತರು ಆತ್ಮಹತ್ಯೆ ಮಾಡಿಕೊಳ್ಳದಂತೆ ಅವರ ಮನಸ್ಸನ್ನು ದೃಢಪಡಿಸುವ ಕಾರ್ಯಕ್ರಮಗಳು ತಜ್ಞರಿಂದ ವ್ಯಾಪಕ ಪ್ರಮಾಣದಲ್ಲಿ ಆಗಬೇಕು (2) ಆತ್ಮಹತ್ಯೆಯಿಂದ ನೊಂದ ರೈತ ಮಹಿಳೆಯರ ಬವಣೆಗಳನ್ನು ನೀಗಿಸುವ ಪರಿಹಾರಗಳನ್ನು ಸರ್ಕಾರಿ ಇಲಾಖೆಗಳು ಅತಿ ಶೀಘ್ರವಾಗಿ ಇತ್ಯರ್ಥಪಡಿಸಬೇಕು. ಹೀಗಾದಾಗ ಮಾತ್ರ ಕರ್ನಾಟಕ ರಾಜ್ಯವು ಈ ವಿಷಯದಲ್ಲಿ ರಾಷ್ಟ್ರದಲ್ಲಿಯೇ ಮಾದರಿ ರಾಜ್ಯವಾಗಬಹುದಾಗಿದೆ.**



# ಅನುಬಂಧಗಳು

ಅನುಬಂಧ-1



## 2003-04 ರಿಂದ 2019-20 ನೇ ಸಾಲಿನವರೆಗಿನ ರೈತರ ಆತ್ಮಹತ್ಯೆ ವಿವರ

| ಕ್ರ. ಸಂ | ವರ್ಷ | ವರದಿಯಾದ ಪ್ರಕರಣಗಳು | ತಿರಸ್ಕೃತ ಪ್ರಕರಣಗಳು | ಅರ್ಹ ಪ್ರಕರಣಗಳು | ಪರಿಹಾರ ವಿತರಿಸಿರುವ ಪ್ರಕರಣಗಳು | ಒಟ್ಟು ಬಾಕಿ ಇರುವ ಪ್ರಕರಣಗಳು | ಎಫ್.ಎಸ್.ಎಲ್. ಗಾಗಿ ಬಾಕಿ ಇರುವ ಪ್ರಕರಣಗಳು | ಇತರೆ ದಾಖಲಾತಿಗಳಿಗಾಗಿ ಬಾಕಿ ಇರುವ ಪ್ರಕರಣಗಳು |
|---|---|---|---|---|---|---|---|---|
| 1 | 2003-04 | 556 | 373 | 183 | 183 | 0 | 0 | 0 |
| 2 | 2004-05 | 240 | 138 | 102 | 102 | 0 | 0 | 0 |
| 3 | 2005-06 | 132 | 59 | 73 | 73 | 0 | 0 | 0 |
| 4 | 2006-07 | 263 | 139 | 124 | 124 | 0 | 0 | 0 |
| 5 | 2007-08 | 308 | 133 | 175 | 175 | 0 | 0 | 0 |
| 6 | 2008-09 | 299 | 150 | 149 | 149 | 0 | 0 | 0 |
| 7 | 2009-10 | 287 | 145 | 142 | 142 | 0 | 0 | 0 |
| 8 | 2010-11 | 231 | 105 | 126 | 126 | 0 | 0 | 0 |
| 9 | 2011-12 | 162 | 63 | 99 | 99 | 0 | 0 | 0 |
| 10 | 2012-13 | 146 | 59 | 87 | 87 | 0 | 0 | 0 |
| 11 | 2013-14 | 89 | 25 | 64 | 64 | 0 | 0 | 0 |
| 12 | 2014-15 | 116 | 23 | 93 | 93 | 0 | 0 | 0 |
| 13 | 2015-16 | 1525 | 463 | 1062 | 1062 | 0 | 0 | 0 |
| 14 | 2016-17 | 1203 | 271 | 932 | 932 | 0 | 0 | 0 |
| 15 | 2017-18 | 1320 | 272 | 1048 | 1046 | 0 | 0 | 0 |
| 16 | 2018-19 | 1067 | 215 | 850 | 845 | 2 | 1 | 1 |
| 17 | 2019-20 | 662 | 94 | 458 | 421 | 110 | 30 | 80 |

## 2015-16 ರಿಂದ 2019-20 ನೇ ಸಾಲಿನವರೆಗಿನ ರೈತರ ಆತ್ಮಹತ್ಯೆ ವಿವರ

| ಕ್ರ.ಸಂ. | ಜಿಲ್ಲೆ | 2015-16 | | | | 2016-17 | | | | 2017-18 | | | | 2018-19 | | | | | | | 2019-20 | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | 1 | 2 | 3 | 4 | 1 | 2 | 3 | 4 | 1 | 2 | 3 | 4 | 1 | 2 | 3 | 4 | 5 | 6 | 7 | 1 | 2 | 3 | 4 | 5 | 6 | 7 |
| 1 | ಬಾಗಲಕೋಟೆ | 20 | 4 | 16 | 16 | 24 | 0 | 24 | 24 | 36 | 3 | 33 | 33 | 22 | 4 | 18 | 18 | 0 | 0 | 0 | 21 | 0 | 17 | 17 | 4 | 0 | 4 |
| 2 | ಬಳ್ಳಾರಿ | 28 | 8 | 20 | 20 | 26 | 4 | 22 | 22 | 18 | 2 | 16 | 15 | 24 | 5 | 19 | 19 | 0 | 0 | 0 | 35 | 1 | 30 | 28 | 4 | 3 | 1 |
| 3 | ಬೆಂ. ಗ್ರಾಮಾಂತರ | 9 | 4 | 5 | 5 | 2 | 0 | 2 | 2 | 5 | 3 | 2 | 2 | 4 | 1 | 3 | 3 | 0 | 0 | 0 | 0 | 0 | 0 | 0 | 0 | 0 | 0 |
| 4 | ಬೆಂ. ನಗರ | 1 | 0 | 1 | 1 | 0 | 0 | 0 | 0 | 2 | 0 | 2 | 2 | 0 | 0 | 0 | 0 | 0 | 0 | 0 | 1 | 0 | 1 | 1 | 0 | 0 | 0 |
| 5 | ಬೆಳಗಾವಿ | 106 | 21 | 85 | 85 | 60 | 5 | 55 | 55 | 96 | 16 | 80 | 80 | 105 | 13 | 91 | 91 | 1 | 1 | 0 | 68 | 11 | 47 | 47 | 10 | 4 | 6 |
| 6 | ಬೀದರ್ | 65 | 8 | 57 | 57 | 64 | 11 | 53 | 53 | 82 | 14 | 68 | 68 | 59 | 14 | 45 | 44 | 0 | 0 | 0 | 34 | 2 | 31 | 21 | 1 | 0 | 1 |
| 7 | ಚಾಮರಾಜನಗರ | 8 | 1 | 7 | 7 | 6 | 2 | 4 | 4 | 6 | 1 | 5 | 5 | 4 | 0 | 4 | 4 | 0 | 0 | 0 | 1 | 0 | 1 | 1 | 0 | 0 | 0 |
| 8 | ಚಿಕ್ಕಬಳ್ಳಾಪುರ | 21 | 12 | 9 | 9 | 10 | 4 | 6 | 6 | 6 | 0 | 6 | 6 | 5 | 0 | 5 | 5 | 0 | 0 | 0 | 1 | 0 | 1 | 1 | 0 | 0 | 0 |
| 9 | ಚಿಕ್ಕಮಗಳೂರು | 79 | 20 | 59 | 59 | 91 | 30 | 61 | 61 | 92 | 30 | 62 | 61 | 43 | 8 | 35 | 35 | 0 | 0 | 0 | 39 | 4 | 30 | 29 | 5 | 0 | 5 |
| 10 | ಚಿತ್ರದುರ್ಗ | 73 | 53 | 20 | 20 | 50 | 32 | 18 | 18 | 42 | 7 | 35 | 35 | 33 | 9 | 24 | 24 | 0 | 0 | 0 | 31 | 7 | 23 | 22 | 1 | 0 | 1 |
| 11 | ದಕ್ಷಿಣ ಕನ್ನಡ | 10 | 10 | 0 | 0 | 3 | 2 | 1 | 1 | 1 | 0 | 1 | 1 | 5 | 2 | 3 | 3 | 0 | 0 | 0 | 2 | 0 | 1 | 1 | 1 | 0 | 1 |
| 12 | ದಾವಣಗೆರೆ | 52 | 24 | 28 | 28 | 52 | 15 | 37 | 37 | 76 | 15 | 61 | 61 | 51 | 14 | 37 | 37 | 0 | 0 | 0 | 23 | 11 | 7 | 7 | 5 | 1 | 4 |
| 13 | ಧಾರವಾಡ | 69 | 18 | 51 | 51 | 69 | 15 | 54 | 54 | 67 | 11 | 56 | 56 | 47 | 13 | 34 | 34 | 0 | 0 | 0 | 43 | 16 | 22 | 22 | 5 | 2 | 3 |
| 14 | ಗದಗ | 46 | 20 | 26 | 26 | 30 | 16 | 14 | 14 | 34 | 10 | 24 | 24 | 25 | 8 | 17 | 17 | 0 | 0 | 0 | 22 | 11 | 6 | 6 | 5 | 0 | 5 |
| 15 | ಹಾಸನ | 92 | 20 | 72 | 72 | 99 | 21 | 78 | 78 | 94 | 19 | 75 | 75 | 44 | 20 | 24 | 24 | 0 | 0 | 0 | 27 | 3 | 20 | 20 | 4 | 0 | 4 |
| 16 | ಹಾವೇರಿ | 113 | 38 | 75 | 75 | 109 | 19 | 90 | 90 | 75 | 10 | 65 | 65 | 78 | 7 | 71 | 71 | 0 | 0 | 0 | 51 | 4 | 39 | 39 | 8 | 0 | 8 |
| 17 | ಕಲಬುರಗಿ | 77 | 26 | 51 | 51 | 62 | 15 | 47 | 47 | 60 | 7 | 53 | 53 | 76 | 9 | 67 | 63 | 0 | 0 | 0 | 29 | 0 | 29 | 23 | 0 | 0 | 0 |
| 18 | ಕೊಡಗು | 9 | 3 | 6 | 6 | 10 | 5 | 5 | 5 | 9 | 3 | 6 | 6 | 12 | 2 | 10 | 10 | 0 | 0 | 0 | 3 | 0 | 3 | 2 | 0 | 0 | 0 |
| 19 | ಕೋಲಾರ | 11 | 0 | 11 | 11 | 6 | 0 | 6 | 6 | 7 | 0 | 7 | 7 | 6 | 1 | 5 | 5 | 0 | 0 | 0 | 3 | 0 | 2 | 1 | 1 | 0 | 1 |
| 20 | ಕೊಪ್ಪಳ | 38 | 14 | 24 | 24 | 13 | 4 | 9 | 9 | 36 | 7 | 29 | 29 | 29 | 4 | 25 | 25 | 0 | 0 | 0 | 14 | 4 | 8 | 8 | 2 | 1 | 1 |
| 21 | ಮಂಡ್ಯ | 124 | 30 | 94 | 94 | 76 | 4 | 72 | 72 | 108 | 25 | 83 | 83 | 74 | 12 | 62 | 62 | 0 | 0 | 0 | 32 | 2 | 26 | 26 | 4 | 2 | 2 |
| 22 | ಮೈಸೂರು | 92 | 15 | 77 | 77 | 89 | 17 | 72 | 72 | 130 | 48 | 82 | 82 | 81 | 17 | 64 | 64 | 0 | 0 | 0 | 43 | 8 | 28 | 28 | 7 | 1 | 6 |
| 23 | ರಾಯಚೂರು | 81 | 37 | 44 | 44 | 38 | 3 | 35 | 35 | 30 | 6 | 24 | 24 | 44 | 16 | 28 | 28 | 0 | 0 | 0 | 17 | 2 | 8 | 7 | 7 | 4 | 3 |
| 24 | ರಾಮನಗರ | 36 | 5 | 31 | 31 | 13 | 3 | 10 | 10 | 15 | 4 | 11 | 11 | 15 | 4 | 11 | 11 | 0 | 0 | 0 | 5 | 0 | 2 | 2 | 3 | 0 | 3 |
| 25 | ಶಿವಮೊಗ್ಗ | 57 | 18 | 39 | 39 | 42 | 10 | 32 | 32 | 53 | 8 | 45 | 45 | 40 | 7 | 33 | 33 | 0 | 0 | 0 | 38 | 4 | 19 | 19 | 15 | 9 | 6 |
| 26 | ತುಮಕೂರು | 78 | 24 | 54 | 54 | 68 | 17 | 51 | 51 | 49 | 11 | 38 | 38 | 42 | 7 | 34 | 34 | 1 | 0 | 1 | 22 | 1 | 14 | 8 | 7 | 3 | 4 |
| 27 | ಉಡುಪಿ | 10 | 2 | 8 | 8 | 1 | 1 | 0 | 0 | 3 | 0 | 3 | 3 | 1 | 0 | 1 | 1 | 0 | 0 | 0 | 0 | 0 | 0 | 0 | 0 | 0 | 0 |
| 28 | ಉತ್ತರಕನ್ನಡ | 12 | 3 | 9 | 9 | 10 | 0 | 10 | 10 | 7 | 2 | 5 | 5 | 8 | 4 | 4 | 4 | 0 | 0 | 0 | 1 | 0 | 1 | 1 | 0 | 0 | 0 |
| 29 | ವಿಜಯಪುರ | 47 | 13 | 34 | 34 | 26 | 6 | 20 | 20 | 27 | 6 | 21 | 21 | 38 | 2 | 36 | 36 | 0 | 0 | 0 | 36 | 1 | 28 | 20 | 7 | 0 | 7 |
| 30 | ಯಾದಗಿರಿ | 61 | 12 | 49 | 49 | 54 | 10 | 44 | 44 | 54 | 4 | 50 | 50 | 52 | 12 | 40 | 40 | 0 | 0 | 0 | 20 | 2 | 14 | 14 | 4 | 0 | 4 |
| | ಒಟ್ಟು | 1525 | 463 | 1062 | 1062 | 1203 | 271 | 932 | 932 | 1320 | 272 | 1048 | 1046 | 1067 | 215 | 850 | 845 | 2 | 1 | 1 | 662 | 94 | 458 | 421 | 110 | 30 | 80 |

1. ವರದಿಯಾದ ಪ್ರಕರಣಗಳು 2. ತಿರಸ್ಕೃತಗೊಂಡ ಪ್ರಕರಣಗಳು 3. ಸಮಿತಿಯು ಅರ್ಹ ಪ್ರಕರಣವೆಂದು ನಿರ್ಧರಿಸಿದ ಪ್ರಕರಣಗಳು 4. ಪರಿಹಾರ ವಿತರಿಸಿರುವ ಅರ್ಹ ಪ್ರಕರಣಗಳು 5. ಸಮಿತಿಯು ತೀರ್ಮಾನಿಸಬೇಕಾದ ಪ್ರಕರಣಗಳು 6. ಎಫ್.ಎಸ್.ಎಲ್. ವರದಿಗಾಗಿ ಬಾಕಿ ಇರುವ ಪ್ರಕರಣಗಳು 7. ಇತರ ಕಾರಣಗಳಿಗಾಗಿ ಬಾಕಿ ಇರುವ ಪ್ರಕರಣಗಳು.

ಅನುಬಂಧ_೩ 3



## 2018–19 ಮತ್ತು 2019–20 ನೇ ಸಾಲಿನಲ್ಲಿ ರಾಜ್ಯದಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ವಿವಿಧ ಇಲಾಖೆಗಳಿಂದ ನೀಡಲಾಗುತ್ತಿರುವ ವಿಶೇಷ ಸೌಲಭ್ಯಗಳು

| ಕ್ರ ಸಂ. | ಇಲಾಖೆಗಳು | ಸೌಲಭ್ಯ ಪಡೆದಿರುವ ಸಂಖ್ಯೆ | ಮೊತ್ತ (ರೂ.ಗಳಲ್ಲಿ) | ಷರಾ |
|---|---|---|---|---|
| 1 | ಕಂದಾಯ ಇಲಾಖೆ | ವಿಧವಾ ಮಾಸಾಶನ – 4131 | ಮಾಸಾಶನ ಒಬ್ಬರಿಗೆ ರೂ.2000/- | ನವೆಂಬರ್ 2019ರ ಮಾಹೆಯವರೆಗೆ |
| 2 | ಶಿಕ್ಷಣ ಇಲಾಖೆ | ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮಕ್ಕಳು –765 ಫಲಾನುಭವಿಗಳು | 42,72,838.00 | |
| | | ಉನ್ನತ ಶಿಕ್ಷಣ – 16 ಫಲಾನುಭವಿಗಳು | 90,480.00 | |
| 3 | ಸಮಾಜ ಕಲ್ಯಾಣ ಇಲಾಖೆ | 2018–19 ನೇ ಸಾಲಿನಲ್ಲಿ – 61 ಫಲಾನುಭವಿಗಳು<br>2019–20 ನೇ ಸಾಲಿನಲ್ಲಿ – 51 ಫಲಾನುಭವಿಗಳು | | ಉಚಿತ ಊಟ ಮತ್ತು ವಸತಿ ಸೌಲಭ್ಯ |

ಅನುಬಂಧ-4



# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರೈತರ ಆತ್ಮಹತ್ಯೆ ಪ್ರಕರಣಗಳನ್ನು ವರದಿ ಮಾಡಲು ಕಾಲಮಿತಿ ನಿಗದಿ ಮಾಡುವ ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ:ಕೃತೋಇ 280 ಕೃಉಇ 2003, ದಿನಾಂಕ:18.07.2003.

2. ಸರ್ಕಾರದ ಆದೇಶ ಸಂಖ್ಯೆ: ಕೃಇ 57 ಕೃಉಇ 2015, ದಿನಾಂಕ:17.07.2015.

3. ಸರ್ಕಾರದ ಆದೇಶ ಸಂಖ್ಯೆ:ಕೃಇ 57 ಕೃಉಇ 2015 (ಭಾ-1), ದಿನಾಂಕ: 11.11.2015.

4. ಸರ್ಕಾರದ ಆದೇಶ ಸಂಖ್ಯೆ: ಕೃಇ 57 ಕೃಉಇ 2015 (ಭಾ-1, ದಿನಾಂಕ: 25.11.2015.

5. ಸರ್ಕಾರದ ಆದೇಶ ಸಂಖ್ಯೆ: ಕೃಇ 75 ಕೃಉಇ 2016, ದಿನಾಂಕ: 14.07.2016.

6. ಸರ್ಕಾರದ ಆದೇಶ ಸಂಖ್ಯೆ: ಕೃಇ 75 ಕೃಉಇ 2016, ದಿನಾಂಕ: 25.02.2017.

7. ಸರ್ಕಾರದ ಆದೇಶ ಸಂಖ್ಯೆ: ಕೃಇ 150 ಕೃಇಕ 2017, ದಿನಾಂಕ: 29.08.2017.

8. ಸರ್ಕಾರದ ಆದೇಶ ಸಂಖ್ಯೆ: ಕೃಇ 77 ಕೃಯೋಕಾ 2018, ದಿನಾಂಕ: 29.08.2018.

9. ಕೃಷಿ ಆಯುಕ್ತರವರ ಪತ್ರ ಸಂಖ್ಯೆ: ಉಕೃನಿ(ಬೆವಿ)/ರೈಆ/ರೈಆತವ/23/2019-20, ದಿನಾಂಕ: 03.07.2019

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಆದೇಶದಲ್ಲಿ ರಾಜ್ಯದಲ್ಲಿ ಪ್ರಕೃತಿ ವಿಕೋಪದಿಂದಾಗಿ ಬೆಳೆ ಹಾನಿ, ಸಾಲಭಾದೆ, ಬೆಲೆ ಕುಸಿತ ಹಾಗೂ ಇತರೆ ಹಲವಾರು ಕಾರಣಗಳಿಂದಾಗಿ ಸಂಕಷ್ಟಗೊಳಗಾದ ರೈತರು ಆತ್ಮಹತ್ಯೆಗೆ ಶರಣಾಗುತ್ತಿರುವುದನ್ನು ಗಮನಿಸಿದ ಸರ್ಕಾರವು ಸಾಲ ಭಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ಪ್ರತಿ ರೈತರ ಕುಟುಂಬಕ್ಕೆ ತಲಾ ರೂ.1.00 ಲಕ್ಷದಂತೆ (ಒಂದು ಲಕ್ಷ ರೂಗಳು ಮಾತ್ರ) ನಗದು ಪರಿಹಾರ ನೀಡಲು ಹಾಗೂ ಇಂತಹ ಆತ್ಮಹತ್ಯೆಗಳಿಗೆ ಸಾಲ ನೀಡುವ ಸಂಸ್ಥೆಗಳಿಂದ ಪಡೆದ ಸಾಲದ ಹೊರೆಯೇ ಕಾರಣ ಎಂಬ ವಿಷಯವನ್ನು ಖಾತರಿ ಮಾಡಿಕೊಂಡು ದೃಢೀಕರಣ ಪತ್ರವನ್ನು ನೀಡುವ ಸಲುವಾಗಿ ಕಂದಾಯ ಇಲಾಖೆಯ ಪ್ರತಿ ಉಪವಿಭಾಗಾಧಿಕಾರಿಯವರ ಅಧ್ಯಕ್ಷತೆಯಲ್ಲಿ ರಚಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ (2)ರ ಆದೇಶದಲ್ಲಿ ರೈತರ ಆತ್ಮಹತ್ಯೆಯನ್ನು ಪ್ರತಿ ಉಪ ವಿಭಾಗ ಮಟ್ಟದಲ್ಲಿ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯ ಸಮಿತಿಯು ನಿರ್ಣಯಿಸಿ ದೃಢೀಕರಿಸಿದ ರೈತ ಕುಟುಂಬಕ್ಕೆ ನಗದು ಪರಿಹಾರವನ್ನು ರೂ.1.00ಲಕ್ಷ (ರೂಪಾಯಿ ಒಂದು ಲಕ್ಷ) ರಿಂದ ರೂ.2.00ಲಕ್ಷ (ಎರಡು ಲಕ್ಷ) ವರೆಗೆ ಹೆಚ್ಚಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ (3)ರ ಆದೇಶದಲ್ಲಿ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯ ಸಮಿತಿಯಲ್ಲಿ ಸಾಲ ನೀಡುವ ಸಂಸ್ಥೆಗಳಿಂದ ಪಡೆದ ಸಾಲದ ಹೊರೆಯೇ ಆತ್ಮಹತ್ಯೆಗೆ ಕಾರಣವೆಂಬ ವಿಷಯವನ್ನು ದೃಢೀಕರಿಸಿದ ಪ್ರತಿ ರೈತ ಕುಟುಂಬಕ್ಕೆ ರೂ.2.00 ಲಕ್ಷದ (ರೂಪಾಯಿ ಎರಡು ಲಕ್ಷ)ದ ಬದಲಾಗಿ ರೂ.5.00ಲಕ್ಷ (ರೂಪಾಯಿ ಐದು ಲಕ್ಷ) ನಗದು ಪರಿಹಾರವನ್ನು ಹೆಚ್ಚಿಸಿ ದಿನಾಂಕ :01.04.2015 ರಿಂದ ಜಾರಿಗೆ ಬರುವಂತೆ ಆದೇಶಿಸಿದೆ. ಹಾಗೂ ರೈತರಿಂದ ಜಮೀನನ್ನು ಒಪ್ಪಂದದ ಮೇರೆಗೆ ಪಡೆದು ಕೃಷಿ ಉತ್ಪಾದನೆಯಲ್ಲಿ ತೊಡಗಿರುವ ಕೃಷಿ ಕಾರ್ಮಿಕರಿಗೂ ಸಹ ಸದರಿ ಪರಿಹಾರವನ್ನು ವಿಸ್ತರಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ (4)ರ ಆದೇಶದಲ್ಲಿ ಉಪವಿಭಾಗ ಮಟ್ಟದ ಸಮಿತಿಯು ಸಾಲದ ಹೊರೆಯು ಆತ್ಮಹತ್ಯೆಗೆ ಕಾರಣವೆಂಬ ವಿಷಯವನ್ನು ದೃಢೀಕರಿಸುವಾಗ, ಇತರೆ ಅಂಶಗಳಾದ ಕುಟುಂಬದ ಯಾವುದೇ ಸದಸ್ಯರ ಹೆಸರಿನಲ್ಲಿ ಜಮೀನು ಇದ್ದಲ್ಲಿ, ಸರ್ಕಾರದ ಅಧಿಕೃತ ಪರವಾನಗಿ ಹೊಂದಿ ಹಣಕಾಸು ವ್ಯವಹಾರ ನಡೆಸುತ್ತಿರುವ ಚಿಟ್ ಫಂಡ್ ಗಳು, ಫಾನ್ ಬ್ರೋಕರ್ ಅಂಗಡಿಗಳು, ಖಾಸಗಿ ಲೇವಾದೇವಿದಾರರು ಮತ್ತು ಖಾಸಗಿ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದಿರುವುದನ್ನು ಪರಿಗಣಿಸಲು ಹಾಗೂ ಕೃಷಿ ಕಾರ್ಮಿಕರು ರೈತರಿಂದ ಜಮೀನನ್ನು ಒಪ್ಪಂದದ ಮೇಲೆ ಪಡೆದು ಕೃಷಿ ಉತ್ಪಾದನೆಯಲ್ಲಿ ತೊಡಗಿ ರೈತ ಆತ್ಮಹತ್ಯೆ ಮಾಡಿಕೊಂಡಿದ್ದಲ್ಲಿ ದಿನಾಂಕ:01.04.2015 ರಿಂದಲೇ ಪೂರ್ವಾನ್ವಯವಾಗುವಂತೆ ಜಾರಿಗೊಳಿಸಿ ಆದೇಶಿಸಿದೆ.

ಮೇಲೆ ಓದಲಾದ (5)ರ ಆದೇಶದಲ್ಲಿ ಆತ್ಮಹತ್ಯೆಗೆ ಶರಣಾದ ರೈತರ ಕುಟುಂಬಗಳಿಗೆ ನೀಡಿರುವ ಎಲ್ಲಾ ಸೌಲಭ್ಯಗಳೂ ಸರಿಯಾದ ರೀತಿಯಲ್ಲಿ ಲಭ್ಯವಾಗುವಂತೆ ಉಸ್ತುವಾರಿ ಮಾಡಲು ಉಪ ವಿಭಾಗದ ಮಟ್ಟದಲ್ಲಿ ಆಯಾ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ ಆದೇಶಿಸಿದೆ.

ಮೇಲೆ ಓದಲಾದ (6)ರ ಆದೇಶದಲ್ಲಿ ಆತ್ಮಹತ್ಯೆಗೆ ಶರಣಾದ ರೈತರಿಗೆ ತ್ವರಿತವಾಗಿ ಪರಿಹಾರ ದೊರೆಯುತ್ತಿರುವ ಬಗ್ಗೆ ಉಸ್ತುವಾರಿ ವಹಿಸಲು ದಿನಾಂಕ:14.07.2016ರ ಸರ್ಕಾರದ ಆದೇಶ ಸಂಖ್ಯೆ: ಕೃಇ 75 ಕೃಉಇ 2016ರನ್ನು ಪರಿಷ್ಕರಿಸಿ ಜಿಲ್ಲಾ ಮಟ್ಟದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ ಆದೇಶಿಸಿದೆ.

ಮೇಲೆ ಓದಲಾದ (7)ರ ಆದೇಶದಲ್ಲಿ ರೈತರ ಆತ್ಮಹತ್ಯೆ ಪ್ರಕರಣ ಇತ್ಯರ್ಥಗೊಳಿಸುವ ಸಮಿತಿಯು ಕೈಗೊಂಡ ನಿರ್ಣಯವು ರೈತರ ಕುಟುಂಬದವರಿಗೆ ಸಮಂಜಸವಾಗಿಲ್ಲವೆಂದೆನಿಸಿದಾಗ ಅರ್ಜಿದಾರರು ಸಲ್ಲಿಸುವ ಮೇಲ್ಮನವಿಗಳ ಪ್ರಕರಣಗಳನ್ನು ಪರಿಶೀಲಿಸಲು ಸಂಬಂಧಿಸಿದ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮೇಲ್ಮನವಿ ಪ್ರಾಧಿಕಾರವನ್ನು ರಚಿಸಿ ಆದೇಶಿಸಿದೆ.

..3)

ಮೇಲೆ ಓದಲಾದ (8)ರ ಆದೇಶದಲ್ಲಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವ ಸಮಯದಲ್ಲಿ ಹಾವು ಕಡಿತದಿಂದ / ಆಕಸ್ಮಿಕ ಮರಣ ಹೊಂದಿದ ರೈತರ ಹಾಗೂ ಕೃಷಿ ಕಾರ್ಮಿಕರ ಕುಟುಂಬಗಳಿಗೆ ನೀಡುತ್ತಿರುವ ಪರಿಹಾರ ಧನವನ್ನು ರೂ.1.00 ಲಕ್ಷದಿಂದ (ರೂಪಾಯಿ ಒಂದು ಲಕ್ಷ) ರೂ 2.00 ಲಕ್ಷಗಳಿಗೆ (ರೂಪಾಯಿ ಎರಡು ಲಕ್ಷಗಳು) ಹೆಚ್ಚಿಸಿ ಆದೇಶಿಸಿದೆ, ಹಾಗೂ ಬೆಳೆ ಕಟಾವು ನಂತರ ಶೇಖರಿಸಲ್ಪಟ್ಟ ಹುಲ್ಲು ಮೆದೆ (ಬಣವೆ) ಗಳಿಗೆ ಆಕಸ್ಮಿಕ ಬೆಂಕಿಯಿಂದ ನಷ್ಟವಾಗುವ ಪ್ರಕರಣಗಳಿಗೆ ಪರಿಹಾರ ಧನವನ್ನು ರೂ.10,000/- ದಿಂದ ಗರಿಷ್ಠ ರೂ.20,000/-ಕ್ಕೆ ಹೆಚ್ಚಿಸಿ ಆದೇಶಿಸಿದೆ.

ಮೇಲೆ ಓದಲಾದ (9) ರ ಕೃಷಿ ಆಯುಕ್ತರ ಪ್ರಸ್ತಾವನೆಯಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ತಾಲ್ಲೂಕುಗಳಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳ ಅರ್ಜಿಗಳನ್ನು ಮೃತರ ರೈತ ಕುಟುಂಬದವರು ಕೃಷಿ ಇಲಾಖೆ ಅಥವಾ ಕಂದಾಯ ಇಲಾಖೆಗೆ ಸಲ್ಲಿಸುತ್ತಾರೆ. ರೈತರ ಆತ್ಮಹತ್ಯೆ ಪ್ರಕರಣಗಳ ಕೃಷಿ ಇಲಾಖೆಯ ಗಮನಕ್ಕೆ ಬಂದ ಕೂಡಲೇ ಕೃಷಿ ಇಲಾಖೆಯ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಮೃತ ರೈತರ ಕುಟುಂಬವನ್ನು ಭೇಟಿ ಮಾಡಿ ತಕ್ಷಣ ಇಲಾಖೆಯ ಗಮನಕ್ಕೆ ತರಲಾಗುತ್ತದೆ.

ಅನೇಕ ಜಿಲ್ಲೆಗಳಲ್ಲಿ ಸಾಮಾನ್ಯವಾಗಿ ಆಯಾ ಆರ್ಥಿಕ ವರ್ಷದ ಅಂತ್ಯದಲ್ಲಿ ಅಂದರೆ ಜನವರಿ, ಫೆಬ್ರವರಿ, ಮಾರ್ಚ್ ತಿಂಗಳಲ್ಲಿ ವರದಿಯಾಗುವ ಹಲವಾರು ಆತ್ಮಹತ್ಯೆ ಪ್ರಕರಣಗಳನ್ನು ಮುಂಬರುವ ಆರ್ಥಿಕ ವರ್ಷದಲ್ಲಿ ಸೇರಿಸಿ ವರದಿ ಮಾಡುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ.

ರೈತ ಆತ್ಮಹತ್ಯೆ ಮಾಡಿಕೊಂಡ ದಿನಾಂಕದಿಂದ ತಡವಾಗಿ ಅಂದರೆ 3 ತಿಂಗಳಿನಿಂದ ಒಂದು ವರ್ಷ ಅಥವಾ ಇನ್ನು ಹೆಚ್ಚಿನ ಅವಧಿ ಕಳೆದಾದ ನಂತರ ಇಲಾಖೆಗೆ ವರದಿ ಮಾಡುತ್ತಿದ್ದು ಇದರಿಂದ ತಡವಾಗಿ ವರದಿಯಾಗುತ್ತಿರುವ ಪ್ರಕರಣಗಳನ್ನು ಜಿಲ್ಲಾ ಮಟ್ಟದಲ್ಲಿ ಹಾಗೂ ಕೇಂದ್ರ ಕಚೇರಿಯಲ್ಲಿ ಆಯಾ ಆರ್ಥಿಕ ವರ್ಷದಲ್ಲಿ ಸೇರಿಸಲು ಹಾಗೂ ನಿಖರವಾದ ರೈತರ ಆತ್ಮಹತ್ಯೆ ಪ್ರಕರಣಗಳನ್ನು ವರದಿ ಮಾಡಲು ಕಷ್ಟಸಾಧ್ಯವಾಗಿರುತ್ತದೆ.

ಆದುದರಿಂದ ರೈತರು ಆತ್ಮಹತ್ಯೆ ಮಾಡಿಕೊಂಡ ಕುರಿತು ನಿಖರವಾದ ಮಾಹಿತಿಯನ್ನು ಸರ್ಕಾರಕ್ಕೆ, ಪತ್ರಿಕಾ ಮತ್ತು ದೂರದರ್ಶನ ಮಾಧ್ಯಮದವರಿಗೆ, ಲೋಕಸಭಾ ಹಾಗೂ ರಾಜ್ಯಸಭಾ ಅಧಿವೇಶನದ ಕಲಾಪಗಳಿಗೆ, ವಿಧಾನ ಸಭಾ ಮತ್ತು ವಿಧಾನ ಪರಿಷತ್ತು ಅಧಿವೇಶನದ ಕಲಾಪಗಳಿಗೆ, ರೈತ ಮುಖಂಡರಿಗೆ ಹಾಗೂ ಇನ್ನಿತರೆ ಸಂಘ ಸಂಸ್ಥೆಗಳಿಗೆ ನೀಡಲು ಮತ್ತು ವಿಶ್ಲೇಷಿಸಲು ತೊಂದರೆಯಾಗುತ್ತಿರುವ ಹಿನ್ನಲೆಯಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ರೈತರ ಮೃತರ ಕುಟುಂಬದವರು ಪರಿಹಾರಕ್ಕಾಗಿ ಅರ್ಜಿಯನ್ನು 3 ತಿಂಗಳೊಳಗಾಗಿ ತಾಲ್ಲೂಕು ಮಟ್ಟದಲ್ಲಿ ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆಗೆ ಹಾಗೂ ಒಂದು ವೇಳೆ 3 ತಿಂಗಳ ನಂತರ ಅರ್ಜಿಯನ್ನು ಸಲ್ಲಿಸುವುದಾದಲ್ಲಿ 3 ತಿಂಗಳ ಮೇಲ್ಪಟ್ಟು ಮತ್ತು 6ತಿಂಗಳ ಒಳಗಾಗಿ ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಅರ್ಜಿಯನ್ನು ಸಲ್ಲಿಸುವುದನ್ನು ಕಡ್ಡಾಯ ಮಾಡಲು ಹಾಗೂ ರೈತರ ಆತ್ಮಹತ್ಯೆ ಸಂಭವಿಸಿ 6 ತಿಂಗಳು ಮೀರಿದಲ್ಲಿ ಅಂತಹ ರೈತರ ಆತ್ಮಹತ್ಯೆ ಪ್ರಕರಣಗಳ ಅರ್ಜಿಯನ್ನು ಯಾವುದೇ ಕಾರಣಕ್ಕೂ ಪರಿಗಣಿಸಬಾರದೆಂದು ಸರ್ಕಾರಿ ಆದೇಶ ಹೊರಡಿಸಲು ಹಾಗೂ ಆಯಾ ಜಿಲ್ಲೆಗಳಲ್ಲಿ ರೈತ ಆತ್ಮಹತ್ಯೆ ಹೊಂದಿದ ದಿನಾಂಕದನ್ವಯ ಆಯಾ ಆರ್ಥಿಕ ವರ್ಷದಲ್ಲಿಯೇ ರೈತರ ಆತ್ಮಹತ್ಯೆ ಪ್ರಕರಣಗಳ ವರದಿಯನ್ನು ನಮೂದಿಸುವಂತೆ ಮತ್ತು ಎಲ್ಲಾ ಇಲಾಖೆಗಳಲ್ಲಿ ಏಕರೂಪದ ವರದಿಯನ್ನು ಅನುಸರಿಸುವಂತೆ ಸರ್ಕಾರಿ ಆದೇಶವನ್ನು ಹೊರಡಿಸಲು ಕೋರಿರುತ್ತಾರೆ.

..4)

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:AGRI-ACT/71/2019, ಬೆಂಗಳೂರು, ದಿನಾಂಕ: 31.10.2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ರಾಜ್ಯದ ರೈತರು ಆತ್ಮಹತ್ಯೆ ಮಾಡಿಕೊಂಡ ಸಂದರ್ಭದಲ್ಲಿ ಮೃತ ರೈತರ ಕುಟುಂಬವು ಪರಿಹಾರಕ್ಕಾಗಿ ಅರ್ಜಿಯನ್ನು ಈ ಕೆಳಕಂಡ ಷರತ್ತಿನೊಂದಿಗೆ ಹಾಗೂ ನಿಗದಿತ ಕಾಲಮಿತಿಯೊಳಗೆ ಸಲ್ಲಿಸುವಂತೆ ಆದೇಶಿಸಿದೆ.

<u>ಷರತ್ತು :</u>

1. ರೈತರ ಆತ್ಮಹತ್ಯೆ ಪ್ರಕರಣ ಸಂಭವಿಸಿದ ದಿನದಿಂದ 3 ತಿಂಗಳೊಳಗಾಗಿ ಅರ್ಜಿಯನ್ನು ಸಂಬಂಧಪಟ್ಟ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ ಇವರಿಗೆ ಸಲ್ಲಿಸುವುದು.
2. ರೈತರ ಆತ್ಮಹತ್ಯೆ ಪ್ರಕರಣ ಸಂಭವಿಸಿದ ದಿನದಿಂದ 3 ತಿಂಗಳಿಗೆ ಮೇಲ್ಪಟ್ಟು ಮತ್ತು 6 ತಿಂಗಳೊಳಗಾಗಿ ಅರ್ಜಿಯನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವುದು.
3. ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳುವ ಸಲುವಾಗಿ 15 ದಿನದೊಳಗಾಗಿ ಸಂಬಂಧಪಟ್ಟ ಉಪ ವಿಭಾಗಾಧಿಕಾರಿಗಳ ಸಮಿತಿಗೆ ಕಳುಹಿಸುವುದು.
4. ರೈತರ ಆತ್ಮಹತ್ಯೆ ಪ್ರಕರಣ ಸಂಭವಿಸಿ 6 ತಿಂಗಳು ಮೀರಿದಲ್ಲಿ ಅಂತಹ ರೈತರ ಆತ್ಮಹತ್ಯೆ ಪ್ರಕರಣಗಳನ್ನು ಪರಿಗಣಿಸತಕ್ಕದ್ದಲ್ಲ.
5. ರೈತರ ಆತ್ಮಹತ್ಯೆ ಪ್ರಕರಣಗಳ ವರದಿಯನ್ನು ಸಂಬಂಧಪಟ್ಟ ಎಲ್ಲಾ ಇಲಾಖೆಗಳು ಏಕರೂಪದ ವರದಿಯನ್ನು ಅನುಸರಿಸುವ ಸಲುವಾಗಿ ಅನುಬಂಧ-1 ಮತ್ತು ಅನುಬಂಧ-2ರ ನಮೂನೆಗಳನ್ವಯ ಕ್ರಮಕೈಗೊಳ್ಳಲು ಸೂಚಿಸಿದೆ.
6. ರೈತರ ಕುಟುಂಬದವರು ಮೃತ ರೈತರ ಆತ್ಮಹತ್ಯೆ ಪ್ರಕರಣದ ಅರ್ಜಿ ಸಲ್ಲಿಸಿದ ನಂತರ ಆಯಾ ಆರ್ಥಿಕ ವರ್ಷಕ್ಕೆ ಅನ್ವಯಿಸುವಂತೆ ರೈತರ ಆತ್ಮಹತ್ಯೆ ಪ್ರಕರಣಗಳ ವರದಿಯನ್ನು ನಮೂದಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

B S Nagarathnam

(ಬಿ.ಎಸ್. ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ)

ಸಂಕಲನಗಾರರು, ಕರ್ನಾಟಕ ರಾಜ್ಯ ಪತ್ರ ಹಾಗೂ ನಿರ್ದೇಶಕರು, ಲೇಖನ, ಮುದ್ರಣ ಸಾಮಾಗ್ರಿ ಹಾಗೂ ಪ್ರಕರಣಗಳ ಇಲಾಖೆ, ಸರ್ಕಾರಿ ಮುದ್ರಣಾಲಯ ಇವರಿಗೆ ಕಳುಹಿಸುತ್ತಾ ಈ ಆದೇಶವನ್ನು ರಾಜ್ಯ ಪತ್ರದ ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸಿ ಅದರ 50 ಪ್ರತಿಗಳನ್ನು ಸಚಿವಾಲಯದ ಈ ಇಲಾಖೆಗೆ ಕಳುಹಿಸುವಂತೆ ಕೋರಲಾಗಿದೆ.

..5)

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-1.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-1.
3. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಸಿ.ಆ.ಸು.ಇ (ಆಡಳಿತ ಸುಧಾರಣೆ) .
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು. ಸಹಕಾರ ಇಲಾಖೆ.
11. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
12. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ.
13. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳೆಯರ ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನ ಮತ್ತು ಹಿರಿಯನಾಗರಿಕರ ಸಬಲೀಕರಣ ಇಲಾಖೆ.
14. ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ.
15. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
16. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು/ಹೆಚ್ಚುವರಿ ಜಿಲ್ಲಾಧಿಕಾರಿಗಳು.
17. ರಾಜ್ಯದ ಎಲ್ಲಾ ಜಿಲ್ಲಾಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು.
18. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.
19. ಎಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳು.
20. ಪೊಲೀಸ್ ಇಲಾಖೆಯ ಎಲ್ಲಾ ಡಿವೈಎಸ್ ಪಿಗಳು.
21. ಎಲ್ಲಾ ಜಿಲ್ಲಾ ಸೂಪರಿಂಟೆಂಡೆಂಟ್ ಆಫ್ ಪೊಲೀಸ್.
22. ರಾಜ್ಯದ ಎಲ್ಲಾ ತಾಲ್ಲೂಕಿನ ತಹಶೀಲ್ದಾರುಗಳು.
23. ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾ ವೈದ್ಯಾಧಿಕಾರಿಗಳು.
24. ಸಹಕಾರ ಸಂಘಗಳ ಎಲ್ಲಾ ಎ.ಆರ್.ಸಿ.ಎಸ್.ಗಳು
25. ಎಲ್ಲಾ ಪ್ರಾದೇಶಿಕ ಆಯುಕ್ತರು.
26. ರಾಜ್ಯದ ಎಲ್ಲಾ ಇಲಾಖಾ ಆಯುಕ್ತರು/ನಿರ್ದೇಶಕರು.
27. ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-4) ಬೆಂಗಳೂರು.
28. ಸರ್ಕಾರದ ಉಪ ಕಾರ್ಯದರ್ಶಿ ಮತ್ತು ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಇಲಾಖೆ.
29. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು.
30. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು
31. ರಾಜ್ಯದ ಎಲ್ಲಾ ಜಂಟಿ ನಿರ್ದೇಶಕರು ಹಾಗೂ ಎಲ್ಲಾ ಸಹಾಯಕ ಕೃಷಿ ನಿರ್ದೇಶಕರು.
32. ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ,
33. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು
34. ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು
35. ಸರ್ಕಾರದ ಉಪ ಕಾರ್ಯದರ್ಶಿರವರ ಆಪ್ತ ಸಹಾಯಕರು, ಕೃಷಿ ಇಲಾಖೆ, ಬೆಂಗಳೂರು.
36. ಶಾಖಾ ರಕ್ಷ ಕಡತ / ಹೆಚ್ಚುವರಿ ಪ್ರತಿಗಳು.

(ಕ್ರ.ಸಂ.16 ರಿಂದ 26, ಹಾಗೂ 31ರವರೆಗೆ ಕೃಷಿ ನಿರ್ದೇಶಕರ ಮೂಲಕ).

23

. ಸರ್ಕಾರದ ಆದೇಶ ಸಂಖ್ಯೆ: AGRI.-ACT/71/2019, ಬೆಂಗಳೂರು, ದಿನಾಂಕ 31.10.2019ರ ಅನುಬಂಧ-I

## Former suicide details of the year

| Farmer name & address | Taluka | District | Age (years) | Date of death | Month | Area (Acres) | Crops | Loan & Other Details | Committee Decision | | | Reasons for pending | | Compensation Paid | | Rejected cases accepted later | Reasons for rejection | SC/ST/ Minorities Others | Type of Death | UDR No | Name of the Police station | Received the FSL | | Name of the Constituency |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | | | | | | | Accepted | Rejected | Pending | For FSL report | For document collection | Cheque/ UTR No and date | Amount (in Rs. lakh) | | | | | | | Yes | No | |
| 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 | 23 | 24 | 25 | 26 |

B S Nagarathnam
Under Secretary to Government
Agriculture Department (Planning)

## ಸರ್ಕಾರದ ಆದೇಶ ಸಂಖ್ಯೆ: AGRI.-ACT/71/2019, ಬೆಂಗಳೂರು, ದಿನಾಂಕ 31.10.2019ರ ಅನುಬಂಧ-2

| ಕ್ರ.ಸಂ | ಜಿಲ್ಲೆಗಳು | ಒಟ್ಟು ವರದಿಯಾದ ಪ್ರಕರಣಗಳು | ತಿರಸ್ಕೃತ ಪ್ರಕರಣಗಳು | ಅರ್ಹ ಪ್ರಕರಣಗಳು | ಪರಿಹಾರ ನೀಡಿರುವ ಪ್ರಕರಣಗಳು | ಬಾಕಿ ಇರುವ ಪ್ರಕರಣಗಳು | ಎಫ್.ಎಸ್.ಎಲ್. ವರದಿಗಾಗಿ ಬಾಕಿ ಇರುವ ಪ್ರಕರಣಗಳು | ಇತರೆ ದಾಖಲಾತಿಗಳಿಗಾಗಿ ಬಾಕಿ ಇರುವ ಪ್ರಕರಣಗಳು |
|---|---|---|---|---|---|---|---|---|
| 1 | ಬಾಗಲಕೋಟೆ | | | | | | | |
| 2 | ಬಳ್ಳಾರಿ | | | | | | | |
| 3 | ಬೆಂ. ಗ್ರಾಮಾಂತರ | | | | | | | |
| 4 | ಬೆಂ. ನಗರ | | | | | | | |
| 5 | ಬೆಳಗಾವಿ | | | | | | | |
| 6 | ಬೀದರ್ | | | | | | | |
| 7 | ಚಾಮರಾಜನಗರ | | | | | | | |
| 8 | ಚಿಕ್ಕಬಳ್ಳಾಪುರ | | | | | | | |
| 9 | ಚಿಕ್ಕಮಗಳೂರು | | | | | | | |
| 10 | ಚಿತ್ರದುರ್ಗ | | | | | | | |
| 11 | ದ.ಕನ್ನಡ | | | | | | | |
| 12 | ದಾವಣಗೆರೆ | | | | | | | |
| 13 | ಧಾರವಾಡ | | | | | | | |
| 14 | ಗದಗ | | | | | | | |
| 15 | ಹಾಸನ | | | | | | | |
| 16 | ಹಾವೇರಿ | | | | | | | |
| 17 | ಕಲಬುರಗಿ | | | | | | | |
| 18 | ಕೊಡಗು | | | | | | | |
| 19 | ಕೋಲಾರ | | | | | | | |
| 20 | ಕೊಪ್ಪಳ | | | | | | | |
| 21 | ಮಂಡ್ಯ | | | | | | | |
| 22 | ಮೈಸೂರು | | | | | | | |
| 23 | ರಾಯಚೂರು | | | | | | | |
| 24 | ರಾಮನಗರ | | | | | | | |
| 25 | ಶಿವಮೊಗ್ಗ | | | | | | | |
| 26 | ತುಮಕೂರು | | | | | | | |
| 27 | ಉಡುಪಿ | | | | | | | |
| 28 | ಉ.ಕನ್ನಡ | | | | | | | |
| 29 | ವಿಜಯಪುರ | | | | | | | |
| 30 | ಯಾದಗಿರಿ | | | | | | | |
| | ಒಟ್ಟು | | | | | | | |

B S Nagaratnamma

Under Secretary to Government
Agriculture Department (Planning)

ಅನುಬಂಧ - 5(ಅ)

24

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಆತ್ಮಹತ್ಯೆಗೆ ಶರಣಾದ ರೈತರ ಕುಟುಂಬಗಳಿಗೆ ವಿಶೇಷ ಸೌಲಭ್ಯಗಳನ್ನು ದೊರಕಿಸಲು ಉಸ್ತುವಾರಿ ಸಮಿತಿ ರಚಿಸುವ ಕುರಿತು

ಕೃಷಿ ಆಯುಕ್ತರ
01 MAR 2017
4179

ಓದಲಾಗಿದೆ:- 1. ಸರ್ಕಾರದ ಆದೇಶ ಸಂಖ್ಯೆ: ಕೃತೋಇ/280/ಕೃಉಇ/2003, ದಿನಾಂಕ 18.07.2003.
2. ಸರ್ಕಾರದ ಆದೇಶ ಸಂಖ್ಯೆ: ಕೃಇ/57/ಕೃಉಇ/2015 (ಭಾಗ-1), ದಿನಾಂಕ 11.11.2015.
3. ಸರ್ಕಾರದ ಆದೇಶ ಸಂಖ್ಯೆ: ಕೃಇ/57/ಕೃಉಇ/2015 (ಭಾಗ-1), ದಿನಾಂಕ 25.11.2015
4. ಸರ್ಕಾರದ ಆದೇಶ ಸಂಖ್ಯೆ: ಕೃತೋಇ/21/ಕೃಉಇ/2010, ದಿನಾಂಕ:17.05.2010
5. ಸರ್ಕಾರದ ಆದೇಶ ಸಂಖ್ಯೆ: ಕೃಇ/75/ಕೃಉಇ/2016 ದಿನಾಂಕ: 14.07.2016.
6. ಕೃಷಿ ಆಯುಕ್ತರ ಪ್ರಸ್ತಾವನೆ ಸಂಖ್ಯೆ: ಉಕೃನಿ(ಬೆವಿ)/ರೈಆಹ/ಉಸ/2016-17, ದಿನಾಂಕ: 21.01.2017

********

ಪ್ರಸ್ತಾವನೆ:-

ರಾಜ್ಯದಲ್ಲಿ ಪ್ರಕೃತಿ ವಿಕೋಪ, ಕೀಟ/ರೋಗಬಾಧೆಯಿಂದ ಬೆಳೆ ಹಾನಿ, ಸಾಲ ಬಾಧೆ, ಬೆಲೆ ಕುಸಿತ ಇತ್ಯಾದಿ ಕಾರಣಗಳಿಂದ ಸಂಕಷ್ಟಕ್ಕೊಳಗಾದ ಹಾಗೂ ಇತರೇ ಕಾರಣಗಳಿಂದಾಗಿ ಹಲವಾರು ರೈತರು ಆತ್ಮಹತ್ಯೆಗೆ ಶರಣಾಗುತ್ತಿರುವುದು ಗಮನಿಸಿ ಈ ಆತ್ಮಹತ್ಯೆಗೆ ವೈಜ್ಞಾನಿಕ ಕಾರಣಗಳನ್ನು ವಿಶ್ಲೇಷಣೆ ಮಾಡುವ ಸಲುವಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಮಾಜಿ ಉಪ ಕುಲಪತಿಗಳಾದ ಡಾ:ಜಿ.ಕೆ.ವೀರೇಶ ರವರ ಅಧ್ಯಕ್ಷತೆಯಲ್ಲಿ ಇತರೇ ಐದು ಸದಸ್ಯರನ್ನೊಳಗೊಂಡ ಸಮಿತಿಯೊಂದನ್ನು ರಚಿಸಲಾಗಿತ್ತು.ಈ ಸಮಿತಿಯ ಶಿಫಾರಸ್ಸಿನ ಮೇರೆಗೆ ಸಾಲ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ಪ್ರತಿ ರೈತರ ಕುಟುಂಬಕ್ಕೆ ರೂ.1.00 ಲಕ್ಷ ಪರಿಹಾರ ನೀಡಲು ಮಂಜೂರಾತಿ ನೀಡಿ, ಇಂತಹ ಆತ್ಮಹತ್ಯೆಗಳಿಗೆ ಸಾಲ ನೀಡುವ ಸಂಸ್ಥೆಗಳಿಂದ ಪಡೆದ ಸಾಲದ ಹೊರೆಯೇ ಕಾರಣ ಎಂಬ ವಿಷಯವನ್ನು ಖಾತರಿ ಪಡಿಸಿಕೊಂಡು ದೃಢೀಕರಣ ಪತ್ರ ನೀಡುವ ಸಲುವಾಗಿ ಪ್ರತಿ ಉಪವಿಭಾಗೀಯ ಆಯುಕ್ತರವರ(ಉಪ ವಿಭಾಗಾಧಿಕಾರಿ) ಅಧ್ಯಕ್ಷತೆಯಲ್ಲಿ ಮೇಲೆ ಓದಲಾದ (1) ರನ್ವಯ ಅಧಿಕಾರಿಗಳ ಸಮಿತಿಯೊಂದನ್ನು ರಚಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ (2)ರಲ್ಲಿ ದಿನಾಂಕ: 01.04.2015ರಿಂದ ಜಾರಿಗೆ ಬರುವಂತೆ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಗಳಿಗೆ ನೀಡುವ ಪರಿಹಾರವನ್ನು ರೂ. 5.00 ಲಕ್ಷಗಳಿಗೆ ಹೆಚ್ಚಿಸಲಾಗಿರುತ್ತದೆ.

ಮೇಲೆ ಓದಲಾದ (3)ರಲ್ಲಿ ಸಾಲದ ಹೊರೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಗಳಿಗೆ ಪರಿಹಾರ ನೀಡಲು ಉಪವಿಭಾಗ ಮಟ್ಟದ ಸಮಿತಿಯು ನಿರ್ಣಯಿಸಿ ದೃಢೀಕರಿಸಲು ಅನುಕೂಲವಾಗುವಂತೆ ಮಾನದಂಡಗಳನ್ನು ರಚಿಸಿ ದಿನಾಂಕ: 01.04.2015ರಿಂದಲೇ ಪೂರ್ವಾನ್ವಯವಾಗುವಂತೆ ಜಾರಿಗೊಳಿಸಿ ಆದೇಶಿಸಿದೆ.

ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವಾಗ ಹಾವು ಕಡಿತ, ಮರದಿಂದ ಬೀಳುವುದು ಅಥವಾ ಕೃಷಿಗೆ ಸಂಬಂಧಿಸಿದ ಇತರೆ ಆಕಸ್ಮಿಕಗಳಿಂದ ಮರಣ ಹೊಂದಿದ ರೈತರು/ಕೃಷಿ ಕಾರ್ಮಿಕರ ಕುಟುಂಬಗಳಿಗೆ ರೂ.1.00ಲಕ್ಷ ಸಹಾಯಧನ ಹಾಗೂ ಬೆಂಕಿ ಆಕಸ್ಮಿಕದಿಂದ ಹುಲ್ಲು ಮೆದೆ ಬಣವೆಗಳು ನಷ್ಟವಾದ ಪ್ರಕರಣದಲ್ಲಿ ರೂ.10000/-ದ ವರೆಗೆ ಪರಿಹಾರ ನೀಡಲು ಸರ್ಕಾರವು ಮೇಲೆ ಓದಲಾದ (4)ರ ಆದೇಶದಲ್ಲಿ ಮಂಜೂರಾತಿ ನೀಡಿರುತ್ತದೆ. ಇದಕ್ಕೆ ಸಂಬಂಧಿಸಿದ ದೃಢೀಕರಣವನ್ನು ನೀಡುವ ಕಾರ್ಯವನ್ನು ಉಪವಿಭಾಗ ಮಟ್ಟದಲ್ಲಿ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯ ಸಮಿತಿಯೇ ನಿರ್ವಹಿಸುವಂತೆ ಸರ್ಕಾರವು ಆದೇಶಿಸಿರುತ್ತದೆ.

ಮೇಲೆ ಓದಲಾದ (5)ರ ಸರ್ಕಾರದ ಆದೇಶದಲ್ಲಿ ಆತ್ಮಹತ್ಯೆಗೆ ಶರಣಾದ ರೈತ ಕುಟುಂಬಗಳಿಗೆ ನೀಡಿರುವ ಎಲ್ಲಾ ಸೌಲಭ್ಯಗಳೂ ಸರಿಯಾದ ರೀತಿಯಲ್ಲಿ ಲಭ್ಯವಾಗುವಂತೆ ಉಸ್ತುವಾರಿ ಮಾಡಲು ಉಪ ವಿಭಾಗ ಮಟ್ಟದಲ್ಲಿ ಆಯಾ ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ ಆದೇಶಿಸಿದೆ.

ಮೇಲೆ ಓದಲಾದ (6)ರ ಕೃಷಿ ಆಯುಕ್ತರ ಪತ್ರದಲ್ಲಿ ದಿನಾಂಕ: 14.07.2016ರ ಆದೇಶದಲ್ಲಿ, ಆತ್ಮಹತ್ಯೆ ಮಾಡಿಕೊಳ್ಳುವ ರೈತರ ಕುಟುಂಬಗಳಿಗೆ ಪರಿಹಾರ ನೀಡುವ ಕುರಿತು ಉಸ್ತುವಾರಿ ವಹಿಸಲು ನೇಮಿಸಿರುವ ಸಮಿತಿಯು ಉಪವಿಭಾಗ ಮಟ್ಟಕ್ಕೆ ಮಾತ್ರ ಸೀಮಿತವಾಗಿದ್ದು, ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಿದಲ್ಲಿ ಉಸ್ತುವಾರಿ ಕಾರ್ಯವನ್ನು ಜಿಲ್ಲಾ ಮಟ್ಟದಲ್ಲಿ ನಿರ್ವಹಿಸುವುದರಿಂದ ಏಕಕಾಲಕ್ಕೆ ಜಿಲ್ಲೆಯ ಪೂರ್ಣ ಪ್ರಗತಿಯನ್ನು

ತಿಳಿಯಲು ಮತ್ತು ಸೌಲಭ್ಯಗಳನ್ನು ಒದಗಿಸಲು ಅನುಕೂಲವಾಗುವುದರಿಂದ, ಈಗಾಗಲೇ ರಚನೆಯಾಗಿರುವ ಉಪ ವಿಭಾಗ ಮಟ್ಟದ ಸಮಿತಿಯನ್ನು ರದ್ದುಪಡಿಸಿ, ಜಿಲ್ಲಾಮಟ್ಟದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕೆಳಕಂಡಂತೆ ಸಮಿತಿಯನ್ನು ರಚಿಸಿ ಪರಿಷ್ಕೃತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

| ಕ್ರ.ಸಂ | ಜಿಲ್ಲಾ ಮಟ್ಟದ ಸಮಿತಿ | ಸಮಿತಿಯಲ್ಲಿ ಸ್ಥಾನ |
|---|---|---|
| 1 | ಹೆಚ್ಚುವರಿ ಜಿಲ್ಲಾಧಿಕಾರಿಗಳು, ಕಂದಾಯ ಇಲಾಖೆ | ಅಧ್ಯಕ್ಷರು |
| 2 | ಹೆಚ್ಚುವರಿ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು | ಸದಸ್ಯರು |
| 3 | ಜಿಲ್ಲಾ ಸಹಕಾರ ನಿಬಂಧಕರು, ಸಹಕಾರ ಇಲಾಖೆ | ಸದಸ್ಯರು |
| 4 | ಜಿಲ್ಲಾ ವೈದ್ಯಾಧಿಕಾರಿಗಳು | ಸದಸ್ಯರು |
| 5 | ಜಿಲ್ಲಾ ಶಿಕ್ಷಣಾಧಿಕಾರಿಗಳು | ಸದಸ್ಯರು |
| 6 | ಸಂಬಂಧಿಸಿದ ಉಪ ಕೃಷಿ ನಿರ್ದೇಶಕರು | ಸದಸ್ಯ ಕಾರ್ಯದರ್ಶಿ |
| 7 | ಸಂಬಂಧಿಸಿದ ಉಪವಿಭಾಗಾಧಿಕಾರಿಗಳು, ಕಂದಾಯ ಇಲಾಖೆ | ಸದಸ್ಯರು |
| 8 | ಸಂಬಂಧಿಸಿದ ತಾಲ್ಲೂಕು ತಹಶೀಲ್ದಾರುಗಳು | ಸದಸ್ಯರು |
| 9 | ಸಂಬಂಧಿಸಿದ ಸರ್ಕಲ್ ಇನ್ಸ್‌ಪೆಕ್ಟರ್ ಆಫ್ ಪೋಲೀಸ್ | ಸದಸ್ಯರು |
| 10 | ಸಂಬಂಧಿಸಿದ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು | ಸದಸ್ಯರು |
| 11 | ಸಂಬಂಧಿಸಿದ ತಾಲ್ಲೂಕು ಕಾರ್ಯ ನಿರ್ವಹಣಾಧಿಕಾರಿಗಳು | ಸದಸ್ಯರು |
| 12 | ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು | ಸದಸ್ಯರು |
| 13 | ಸಂಬಂಧಿಸಿದ ತಾಲ್ಲೂಕು ವೈದ್ಯಾಧಿಕಾರಿಗಳು | ಸದಸ್ಯರು |

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 75 ಕೃಉಇ 2016 ಬೆಂಗಳೂರು, ದಿನಾಂಕ: 25.02.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಆತ್ಮಹತ್ಯೆಗೆ ಶರಣಾದ ರೈತರಿಗೆ ತ್ವರಿತವಾಗಿ ಪರಿಹಾರ ದೊರೆಯುತ್ತಿರುವ ಬಗ್ಗೆ ಉಸ್ತುವಾರಿ ವಹಿಸಲು ದಿನಾಂಕ: 14.07.2016ರ ಸರ್ಕಾರದ ಆದೇಶ ಸಂಖ್ಯೆ: ಕೃಇ/75/ಕೃಉಇ/2016ಅನ್ನು ಪರಿಷ್ಕರಿಸಿ ಜಿಲ್ಲಾ ಮಟ್ಟದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಸಮಿತಿಯನ್ನು ರಚಿಸಲಾಗಿದೆ.

| ಕ್ರ.ಸಂ | ಜಿಲ್ಲಾ ಮಟ್ಟದ ಸಮಿತಿ | ಸಮಿತಿಯಲ್ಲಿ ಸ್ಥಾನ |
|---|---|---|
| 1 | ಹೆಚ್ಚುವರಿ ಜಿಲ್ಲಾಧಿಕಾರಿಗಳು, ಕಂದಾಯ ಇಲಾಖೆ | ಅಧ್ಯಕ್ಷರು |
| 2 | ಹೆಚ್ಚುವರಿ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು | ಸದಸ್ಯರು |
| 3 | ಜಿಲ್ಲಾ ಸಹಕಾರ ನಿಬಂಧಕರು, ಸಹಕಾರ ಇಲಾಖೆ | ಸದಸ್ಯರು |
| 4 | ಜಿಲ್ಲಾ ವೈದ್ಯಾಧಿಕಾರಿಗಳು | ಸದಸ್ಯರು |
| 5 | ಜಿಲ್ಲಾ ಶಿಕ್ಷಣಾಧಿಕಾರಿಗಳು | ಸದಸ್ಯರು |
| 6 | ಸಂಬಂಧಿಸಿದ ಉಪವಿಭಾಗಾಧಿಕಾರಿಗಳು, ಕಂದಾಯ ಇಲಾಖೆ | ಸದಸ್ಯರು |
| 7 | ಸಂಬಂಧಿಸಿದ ತಾಲ್ಲೂಕು ತಹಶೀಲ್ದಾರುಗಳು | ಸದಸ್ಯರು |
| 8 | ಸಂಬಂಧಿಸಿದ ಸರ್ಕಲ್ ಇನ್ಸ್‌ಪೆಕ್ಟರ್ ಆಫ್ ಪೋಲೀಸ್ | ಸದಸ್ಯರು |
| 9 | ಸಂಬಂಧಿಸಿದ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು | ಸದಸ್ಯರು |
| 10 | ಸಂಬಂಧಿಸಿದ ತಾಲ್ಲೂಕು ಕಾರ್ಯ ನಿರ್ವಹಣಾಧಿಕಾರಿಗಳು | ಸದಸ್ಯರು |
| 11 | ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು | ಸದಸ್ಯರು |
| 12 | ಸಂಬಂಧಿಸಿದ ತಾಲ್ಲೂಕು ವೈದ್ಯಾಧಿಕಾರಿಗಳು | ಸದಸ್ಯರು |
| 13 | ಸಂಬಂಧಿಸಿದ ಉಪ ಕೃಷಿ ನಿರ್ದೇಶಕರು | ಸದಸ್ಯ ಕಾರ್ಯದರ್ಶಿ |

ಸದರಿ ಸಮಿತಿಯ ಅಧ್ಯಕ್ಷರು ಅವಶ್ಯಕತೆ ಆಧಾರದ ಮೇಲೆ ಹೆಚ್ಚಿನ ಆಮಂತ್ರಿತ ಸದಸ್ಯರನ್ನು ನೇಮಿಸಿಕೊಳ್ಳುವ ಅಧಿಕಾರ ಹೊಂದಿರುತ್ತಾರೆ.

\- 2 -

ಸಮಿತಿಯು ತಿಂಗಳಿಗೊಮ್ಮೆ ನಿಗದಿತ ದಿನದಂದು ಸಭೆ ಸೇರಿ ಮೃತ ರೈತರ ಕುಟುಂಬಗಳಿಗೆ ಸರ್ಕಾರದ ಸೌಲಭ್ಯಗಳು ದೊರಕಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳತಕ್ಕದ್ದು. ಅವಶ್ಯವಾದಲ್ಲಿ, ಕಾಲ ಕಾಲಕ್ಕೆ ಸಮಿತಿ ಸಭೆ ಕರೆದು ಪ್ರಗತಿ ಪರಿಶೀಲನೆ ಮಾಡುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ಶಿವಕುಮಾರ
(ಆರ್.ಎಸ್. ಶಿವಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).
25/02/17

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
3. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ)
8. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು.
9. ಸರ್ಕಾರದ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು.
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು.
12. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
13. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು.
14. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ.
15. ಎಲ್ಲಾ ಜಿಲ್ಲಾ ಜಿಲ್ಲಾಧಿಕಾರಿಗಳು.
16. ಎಲ್ಲಾ ಹೆಚ್ಚುವರಿ ಜಿಲ್ಲಾಧಿಕಾರಿಗಳು.
17. ಎಲ್ಲಾ ಹೆಚ್ಚುವರಿ ಪೋಲೀಸ್ ವರಿಷ್ಠಾಧಿಕಾರಿಗಳು.
18. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು.
19. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

(ಕ್ರಮ ಸಂಖ್ಯೆ: 15 & 18 ಕೃಷಿ ಆಯುಕ್ತರ ಮುಖಾಂತರ)

ಅನುಬಂಧ - 5 (ಆ)

271

26

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಆತ್ಮಹತ್ಯೆಗೆ ಶರಣಾದ ರೈತರ ಕುಟುಂಬಗಳಿಗೆ ವಿಶೇಷ ಸೌಲಭ್ಯಗಳನ್ನು ದೊರಕಿಸಲು ಉಸ್ತುವಾರಿ ಸಮಿತಿ ರಚಿಸುವ ಕುರಿತು

ಓದಲಾಗಿದೆ:-
1. ಸರ್ಕಾರದ ಆದೇಶ ಸಂಖ್ಯೆ:ಕೃತೋಇ/280/ಕೃಉಇ/2003, ದಿನಾಂಕ 18.07.2003.
2. ಸರ್ಕಾರದ ಆದೇಶ ಸಂಖ್ಯೆ: ಕೃಇ/57/ಕೃಉಇ/2015 (ಭಾಗ-1), ದಿನಾಂಕ 11.11.2015.
3. ಸರ್ಕಾರದ ಆದೇಶ ಸಂಖ್ಯೆ: ಕೃಇ/57/ಕೃಉಇ/2015 (ಭಾಗ-1), ದಿನಾಂಕ 25.11.2015
4. ಸರ್ಕಾರದ ಆದೇಶ ಸಂಖ್ಯೆ: ಕೃತೋಇ/21/ಕೃಉಇ/2010, ದಿನಾಂಕ:17.05.2010
5. ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ.164/ಡಿ.ಎಸ್.ಪಿ/2015, ದಿನಾಂಕ 13.11.2015.
6. ಸರ್ಕಾರದ ಆದೇಶ ಸಂಖ್ಯೆ: ಇಡಿ/31/ವಿವಿಧ/2015, ದಿನಾಂಕ 13.11.2015
7. ಸರ್ಕಾರದ ಆದೇಶ ಸಂಖ್ಯೆ: ಆಕುಕ/315/ಸಿ.ಜಿ.ಇ/2015, ದಿನಾಂಕ 24.11.2015
8. ಕೃಷಿ ಆಯುಕ್ತರ ಪ್ರಸ್ತಾವನೆ ಸಂಖ್ಯೆ: ಉಕೃನಿ(ಬೆವಿ)/ರೈಆಹ/ಉಸ/2016-17 ದಿನಾಂಕ: 02.07.2016

ಪ್ರಸ್ತಾವನೆ:-

ರಾಜ್ಯದಲ್ಲಿ ಪ್ರಕೃತಿ ವಿಕೋಪ, ಕೀಟ/ರೋಗಬಾಧೆಯಿಂದ ಬೆಳೆ ಹಾನಿ, ಸಾಲ ಬಾಧೆ, ಬೆಲೆ ಕುಸಿತ ಇತ್ಯಾಧಿ ಕಾರಣಗಳಿಂದ ಸಂಕಷ್ಟಕ್ಕೊಳಗಾದ ಹಾಗೂ ಇತರೇ ಕಾರಣಗಳಿಂದಾಗಿ ಹಲವಾರು ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದುದು ಗಮನಿಸಿ ಈ ಆತ್ಮಹತ್ಯೆಗೆ ವೈಜ್ಞಾನಿಕ ಕಾರಣಗಳನ್ನು ವಿಶ್ಲೇಷಣೆ ಮಾಡುವ ಸಲುವಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಮಾಜಿ ಉಪ ಕುಲಪತಿಗಳಾದ ಡಾ:ಜಿ.ಕೆ.ವೀರೇಶ ರವರ ಅಧ್ಯಕ್ಷತೆಯಲ್ಲಿ ಇತರೇ ಐದು ಸದಸ್ಯರನ್ನೊಳಗೊಂಡ ಸಮಿತಿಯೊಂದನ್ನು ರಚಿಸಲಾಗಿತ್ತು. ಈ ಸಮಿತಿಯ ಶಿಫಾರಸ್ಸಿನ ಮೇರೆಗೆ ಸಾಲದ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ಪ್ರತಿ ರೈತರ ಕುಟುಂಬಕ್ಕೆ ರೂ.1.00 ಲಕ್ಷ ಪರಿಹಾರ ನೀಡಲು ಮಂಜೂರಾತಿ ನೀಡಿ, ಇಂತಹ ಆತ್ಮಹತ್ಯೆಗಳಿಗೆ ಸಾಲ ನೀಡುವ ಸಂಸ್ಥೆಗಳಿಂದ ಪಡೆದ ಸಾಲದ ಹೊರೆಯೇ ಕಾರಣ ಎಂಬ ವಿಷಯವನ್ನು ಖಾತರಿ ಪಡಿಸಿಕೊಂಡು ದೃಢೀಕರಣ ಪತ್ರ ನೀಡುವ ಸಲುವಾಗಿ ಕಂದಾಯ ಇಲಾಖೆಯ ಪ್ರತಿ ಉಪವಿಭಾಗೀಯ ಆಯುಕ್ತರವರ(ಉಪ ವಿಭಾಗಾಧಿಕಾರಿ) ಅಧ್ಯಕ್ಷತೆಯಲ್ಲಿ ಮೇಲೆ ಓದಲಾದ (1) ರನ್ವಯ ಅಧಿಕಾರಿಗಳ ಸಮಿತಿಯೊಂದನ್ನು ರಚಿಸಿ ಆದೇಶಿಸಲಾಗಿದೆ.

ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಗಳಿಗೆ ನೀಡುತ್ತಿದ್ದ ಪರಿಹಾರವನ್ನು ರೂ. 5.00 ಲಕ್ಷಗಳಿಗೆ ದಿನಾಂಕ:01.04.2015ರಿಂದ ಜಾರಿಗೆ ಬರುವಂತೆ ಮೇಲೆ (2)ರಲ್ಲಿ ಓದಲಾದ ಆದೇಶದಲ್ಲಿ ಹೆಚ್ಚಿಸಲಾಗಿರುತ್ತದೆ.

ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವಾಗ ಹಾವು ಕಡಿತ, ಮರದಿಂದ ಬೀಳುವುದು ಅಥವಾ ಕೃಷಿಗೆ ಸಂಬಂಧಿಸಿದ ಇತರೆ ಆಕಸ್ಮಿಕಗಳಿಂದ ಮರಣ ಹೊಂದಿದ ರೈತರು/ಕೃಷಿ ಕಾರ್ಮಿಕರ ಕುಟುಂಬಗಳಿಗೆ ರೂ.1.00ಲಕ್ಷ ಸಹಾಯಧನ ನೀಡಲಾಗುವುದು ಹಾಗೂ ಬೆಂಕಿ ಆಕಸ್ಮಿಕದಿಂದ ಹುಲ್ಲು ಮೆದೆ ಬಣವೆಗಳು ನಷ್ಟವಾದ ಪ್ರಕರಣದಲ್ಲಿ ರೂ.10000/-ದ ವರೆಗೆ ಪರಿಹಾರ ನೀಡಲು ಸರ್ಕಾರವು ಮೇಲೆ ಓದಲಾದ (4)ರ ಆದೇಶದಲ್ಲಿ ಮಂಜೂರಾತಿ ನೀಡಿರುತ್ತದೆ. ಇದಕ್ಕೆ ಸಂಬಂಧಿಸಿದ ದೃಢೀಕರಣವನ್ನು ನೀಡುವ ಕಾರ್ಯವನ್ನು ಉಪವಿಭಾಗ ಮಟ್ಟದಲ್ಲಿ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯ ಸಮಿತಿಯೇ ನಿರ್ವಹಿಸುವಂತೆ ಸರ್ಕಾರವು ಆದೇಶಿಸಿರುತ್ತದೆ.

ರಾಜ್ಯದಲ್ಲಿ ಇರುವ ಬರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಸಾಲದ ಬಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಗಳಿಗೆ ಹೆಚ್ಚಿನ ಆರ್ಥಿಕ ಪರಿಹಾರ ಮತ್ತು ನೆರವು ನೀಡಲು ಸರ್ಕಾರವು ವಿವಿಧ ಇಲಾಖೆಗಳಿಂದ ಸೌಲಭ್ಯಗಳನ್ನು ರೈತರ ಕುಟುಂಬಗಳಿಗೆ ವಿಸ್ತರಿಸಿದೆ.

1. ಸಾಲದ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿಯರಿಗೆ ನೀಡಲಾಗುತ್ತಿದ್ದ ರೂ.500/ ಗಳ ವಿಧವ ಮಾಸಾಶನಗಳನ್ನು ರೂ.2000/ ಗಳಿಗೆ ಹೆಚ್ಚಿಸಿ ಮೇಲೆ (5) ರಲ್ಲಿ ಓದಲಾದ ಕಂದಾಯ ಇಲಾಖೆ ಆದೇಶದಲ್ಲಿ ಮಂಜೂರಾತಿ ನೀಡಲಾಗಿದೆ.

2. ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಗಳ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಸ್ನಾತಕೊತ್ತರ ಪಧವಿಯ ಹಂತದವರೆಗೆ ಶಿಕ್ಷಣವನ್ನು ಮುಂದುವರಿಸಲು ಅನುಮಾಗುವಂತೆ ಉಚಿತ ಶಿಕ್ಷಣ, ಹಾಸ್ಟೆಲ್ ಸೌಲಭ್ಯ ಅಥವಾ ತತ್ಸಮಾನ ಶಿಕ್ಷಣ ಶುಲ್ಕ ಮತ್ತು ಹೊಸತಿ ವೆಚ್ಚದ ಮರುಪಾವತಿ ಮಾಡುವಂತೆ ಶಿಕ್ಷಣ ಇಲಾಖೆಯಿಂದ ಮೇಲೆ ಓದಲಾದ (6) ರಲ್ಲಿ ಸರ್ಕಾರದ ಆದೇಶ ಹೊರಡಿಸಲಾಗಿದೆ.

3. ರಾಜ್ಯದಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಗಳನ್ನು ಪರಿಶೀಲಿಸಿ ಸಂಬಂಧಪಟ್ಟ ಜಿಲ್ಲಾಧಿಕಾರಿಯವರು ನೀಡಿದ ದೃಢೀಕರಣ ಪತ್ರವನ್ನು ಹೊಂದಿರುವ ಕುಟುಂಬಗಳಿಗೆ "ವಾಜಪೇಯಿ ಆರೋಗ್ಯಶ್ರೀ" ಯೋಜನೆಯಡಿ 7 ಗಂಭೀರ ಕಾಯಿಲೆಗಳಿಗೆ ಸರ್ಕಾರಿ ಹಾಗೂ ನೋಂದಾಯಿತ ಅತ್ಯುತ್ತಮ ದರ್ಜೆಯ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಶಸ್ತ್ರಚಿಕಿತ್ಸೆ ಮತ್ತು ಆರೈಕೆಯ ಸೌಲಭ್ಯವನ್ನು ಸುವರ್ಣ ಆರೋಗ್ಯ ಸುರಕ್ಷ ಟ್ರಸ್ಟ್ ಮೂಲಕ ಒದಗಿಸಲು ಮತ್ತು ಇನ್ನುಳಿದ ಇತರೆ ಪಾಥಮಿಕ ಹಾಗೂ ಪ್ರೌಢ ಸ್ವರೂಪದ ತಪಾಸಣೆ ಮತ್ತು ಚಿಕಿತ್ಸೆಯನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ವಿಶೇಷ ಆರೋಗ್ಯ ಚಿಕಿತ್ಸಾ ಸೌಲಭ್ಯವನ್ನು ನೀಡಲು ಮೇಲೆ ಓದಲಾದ (7)ರಲ್ಲಿ ಆರೋಗ್ಯ ಇಲಾಖೆಯು ಆದೇಶ ಹೊರಡಿಸಿರುತ್ತದೆ.

ಮೇಲೆ ಓದಲಾದ(1-7) ಸರ್ಕಾರ ಆದೇಶಗಳಲ್ಲಿ ನೀಡಿರುವ ಎಲ್ಲಾ ಸೌಲಭ್ಯಗಳನ್ನು ಮೃತ ರೈತರ ಕುಟುಂಬಗಳಿಗೆ ಸರಿಯಾದ ರೀತಿಯಲ್ಲಿ ಲಭ್ಯವಾಗುವಂತೆ ಉಸ್ತುವಾರಿ ಮಾಡುವುದು ರೈತರ ಹಿತದೃಷ್ಟಿಯಿಂದ ಅತ್ಯಗತ್ಯವಾಗಿರುತ್ತದೆ. ಎಲ್ಲಾ ಸೌಲಭ್ಯಗಳು ಮೃತ ರೈತ ಕುಟುಂಬಗಳಿಗೆ ಸರಿಯಾದ ರೀತಿಯಲ್ಲಿ ದೊರಕುವಂತೆ ಉಸ್ತುವಾರಿ ಮಾಡಲು ಉಪ ವಿಭಾಗ ಮಟ್ಟದಲ್ಲಿ ಆಯಾ ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಈ ಕೆಳಕಂಡಂತೆ ರಚಿಸಿ ಮತ್ತು ಕೆಳಗೆ ವಿವರಿಸಿರುವ ಕರ್ತವ್ಯಗಳು ಮತ್ತು ನಿಬಂಧನೆಗಳನ್ನು ಒಳಗೊಂಡಂತೆ ಸರ್ಕಾರಿ ಆದೇಶ ಹೊರಡಿಸಲು ಕೃಷಿ ಆಯುಕ್ತರು ಮೇಲೆ ಓದಲಾದ (8)ರ ಪತ್ರದಲ್ಲಿ ಕೋರಿರುತ್ತಾರೆ.

| ಕ್ರ. ಸಂ | ಉಪ ವಿಭಾಗ ಮಟ್ಟದ ಸಮಿತಿ | |
|---|---|---|
| 1 | ಉಪ ವಿಭಾಗಾಧಿಕಾರಿಗಳು, ಕಂದಾಯ ಇಲಾಖೆ | ಅಧ್ಯಕ್ಷರು |
| 2 | ಉಪ ವಿಭಾಗದ ಡೆಪ್ಯೂಟಿ ಸೂಪರಿಡೆಂಟ್ ಆಫ್ ಪೋಲಿಸ್ | ಸದಸ್ಯರು |
| 3 | ಸಂಬಂಧಿಸಿದ ವಿಭಾಗೀಯ ಉಪ ಕೃಷಿ ನಿರ್ದೇಶಕರು | ಸದಸ್ಯ ಕಾಯದರ್ಶಿ |
| 4 | ಸಂಬಂಧಿಸಿದ ಸಹಕಾರಿ ಸಂಘಗಳ ಸಹಾಯಕ ನಿಬಂಧಕರು | ಸದಸ್ಯರು |
| 5 | ಸಂಬಂಧಿಸಿದ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು | ಸದಸ್ಯರು |
| 6 | ಸಂಬಂಧಿಸಿದ ತಾಲ್ಲೂಕಿನ ತಹಶೀಲ್ದಾರ್‌ಗಳು | ಸದಸ್ಯರು |
| 7 | ಸಂಬಂಧಿಸಿದ ತಾಲ್ಲೂಕಿನ ಕಾರ್ಯನಿರ್ವಹಣಾಧಿಕಾರಿಗಳು | ಸದಸ್ಯರು |
| 8 | ಸಂಬಂಧಿಸಿದ ಸರ್ಕಲ್ ಇನ್ಸ್‌ಪೆಕ್ಟರ್ ಆಫ್ ಪೋಲೀಸ್ | ಸದಸ್ಯರು |
| 9 | ಸಂಬಂಧಿಸಿದ [illegible] | ಸದಸ್ಯರು |
| 10 | ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು | ಸದಸ್ಯರು |

26
27

ಮೇಲೆ ತಿಳಿಸಿದ ಸಮಿತಿಯ ಅಧ್ಯಕ್ಷರು ಅವಶ್ಯಕತೆ ಆಧಾರದ ಮೇಲೆ ಹೆಚ್ಚಿನ ಆಮಂತ್ರಿತ ಸದಸ್ಯರನ್ನು ನೇಮಿಸಿಕೊಳ್ಳುವ ಅಧಿಕಾರ ಹೊಂದಿರುತ್ತಾರೆ. ಸಮಿತಿಯ ಕರ್ತವ್ಯಗಳು ಮತ್ತು ನಿಬಂಧನೆಗಳನ್ನು ಈ ಕೆಳಗಿನಂತೆ ವಿವರಿಸಿದೆ.

1. ಸಮಿತಿಯು ತಿಂಗಳಿಗೊಮ್ಮೆ ನಿಗದಿತ ದಿನದಂದು ಸಭೆ ಸೇರಿ ಮೃತ ರೈತರ ಕುಟುಂಬಗಳಿಗೆ ಮೇಲೆ ತಿಳಿಸಲಾದ ಎಲ್ಲಾ ಸೌಲಭ್ಯಗಳು ದೊರಕಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.

2. ಅಲ್ಲದೇ, ಅವಶ್ಯವಾದ್ದಲ್ಲಿ, ಕಾಲ ಕಾಲಕ್ಕೆ ಸಮಿತಿ ಸಭೆ ಕರೆದು ಪ್ರಗತಿ ಪರಿಶೀಲನೆ ಮಾಡುವುದು.

3. ಮೇಲಿನ ಉಲ್ಲೇಖಿತ ಸರ್ಕಾರಿ ಆದೇಶಗಳನ್ವಯ, ಮೃತ ರೈತ ಕುಟುಂಬಗಳಿಗೆ ಸರ್ಕಾರದ ಸವಲತ್ತು ಲಭ್ಯವಾಗುವಂತೆ ಮಾಡಿ ರೈತ ಕುಟುಂಬಗಳ ಮನಸ್ಥೈರ್ಯ ಹೆಚ್ಚಿಸುವಂತೆ ಕ್ರಮಕೈಗೊಳ್ಳುವುದು.

4. ರೈತರ ಆತ್ಮಹತ್ಯೆ ಪ್ರಕರಣಗಳನ್ನು ತ್ವರಿತವಾಗಿ ತೀರ್ಮಾನ ಕೈಗೊಂಡು ಅರ್ಹ ಕುಟುಂಬಗಳಿಗೆ ತಕ್ಷಣ ಪರಿಹಾರ ನೀಡುವಂತೆ ಕ್ರಮಕೈಗೊಳ್ಳುವುದು.

ಮೇಲ್ಕಂಡ ಪ್ರಸ್ತಾವನೆಯನ್ನು ಪರೀಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 75 ಕೃಉಇ 2016 ಬೆಂಗಳೂರು, ದಿನಾಂಕ: 14.07.2016**

ಮೇಲೆ ಓದಲಾದ (1)ರಿಂದ (7)ರವರೆಗಿನ ಆದೇಶಗಳಲ್ಲಿ, ಆತ್ಮಹತ್ಯೆಗೆ ಶರಣಾದ ರೈತ ಕುಟುಂಬಗಳಿಗೆ ನೀಡಿರುವ ಎಲ್ಲಾ ಸೌಲಭ್ಯಗಳೂ ಸರಿಯಾದ ರೀತಿಯಲ್ಲಿ ಲಬ್ಯವಾಗುವಂತೆ ಉಸ್ತುವಾರಿ ಮಾಡಲು ಉಪ ವಿಭಾಗ ಮಟ್ಟದಲ್ಲಿ ಆಯಾ ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಸಮಿತಿಯನ್ನು ರಚಿಸಿದೆ.

| ಕ್ರ. ಸಂ | ಉಪ ವಿಭಾಗ ಮಟ್ಟದ ಸಮಿತಿ | |
|---|---|---|
| 1 | ಉಪ ವಿಭಾಗಾಧಿಕಾರಿಗಳು. ಕಂದಾಯ ಇಲಾಖೆ | ಅಧ್ಯಕ್ಷರು |
| 2 | ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು | ಸದಸ್ಯರು |
| 3 | ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ | ಸದಸ್ಯರು |
| 4 | ಸಂಬಂಧಿಸಿದ ಸಹಕಾರಿ ಸಂಘಗಳ ಸಹಾಯಕ ನಿಬಂಧಕರು | ಸದಸ್ಯರು |
| 5 | ಸಂಬಂಧಿಸಿದ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು | ಸದಸ್ಯರು |
| 6 | ಸಂಬಂಧಿಸಿದ ತಾಲ್ಲೂಕಿನ ತಹಶೀಲ್ದಾರ್‌ಗಳು | ಸದಸ್ಯರು |
| 7 | ಸಂಬಂಧಿಸಿದ ತಾಲ್ಲೂಕಿನ ಕಾರ್ಯನಿರ್ವಹಣಾಧಿಕಾರಿಗಳು | ಸದಸ್ಯರು |
| 8 | ಸಂಬಂಧಿಸಿದ ಸರ್ಕಲ್ ಇನ್ಸ್‌ಪೆಕ್ಟರ್ ಆಫ್ ಪೋಲೀಸ್ | ಸದಸ್ಯರು |
| 9 | ಸಂಬಂಧಿಸಿದ ವೈದ್ಯಾಧಿಕಾರಿಗಳು | ಸದಸ್ಯರು |
| 10 | ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು | ಸದಸ್ಯರು |
| 11 | ಸಂಬಂಧಿಸಿದ ವಿಭಾಗೀಯ ಉಪ ಕೃಷಿ ನಿರ್ದೇಶಕರು | ಸದಸ್ಯ ಕಾರ್ಯದರ್ಶಿ |

..4..

263



ಮೇಲೆ ತಿಳಿಸಿದ ಸಮಿತಿಯ ಅಧ್ಯಕ್ಷರು ಅವಶ್ಯಕತೆ ಆಧಾರದ ಮೇಲೆ ಹೆಚ್ಚಿನ ಆಮಂತ್ರಿತ ಸದಸ್ಯರನ್ನು ನೇಮಿಸಿಕೊಳ್ಳುವ ಅಧಿಕಾರ ಹೊಂದಿರುತ್ತಾರೆ. ಸಮಿತಿಯ ಕರ್ತವ್ಯಗಳು ಮತ್ತು ನಿಬಂಧನೆಗಳು ಈ ಕೆಳಕಂಡಂತಿರುತ್ತದೆ:

1. ಸಮಿತಿಯು ತಿಂಗಳಿಗೊಮ್ಮೆ ನಿಗದಿತ ದಿನದಂದು ಸಭೆ ಸೇರಿ ಮೃತ ರೈತರ ಕುಟುಂಬಗಳಿಗೆ ಮೇಲೆ ತಿಳಿಸಲಾದ ಎಲ್ಲಾ ಸೌಲಭ್ಯಗಳು ದೊರಕಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.

2. ಅಲ್ಲದೇ, ಅವಶ್ಯವಾದ್ದಲ್ಲಿ, ಕಾಲ ಕಾಲಕ್ಕೆ ಸಮಿತಿ ಸಭೆ ಕರೆದು ಪ್ರಗತಿ ಪರಿಶೀಲನೆ ಮಾಡುವುದು.

3. ಮೇಲಿನ ಉಲ್ಲೇಖಿತ ಸರ್ಕಾರಿ ಆದೇಶಗಳನ್ವಯ, ಮೃತ ರೈತ ಕುಟುಂಬಗಳಿಗೆ ಸರ್ಕಾರದ ಸವಲತ್ತು ಲಭ್ಯವಾಗುವಂತೆ ಮಾಡಿ ರೈತ ಕುಟುಂಬಗಳ ಮನಸ್ಥೈರ್ಯ ಹೆಚ್ಚಿಸುವಂತೆ ಕ್ರಮಕೈಗೊಳ್ಳುವುದು.

4. ರೈತರ ಆತ್ಮಹತ್ಯೆ ಪ್ರಕರಣಗಳನ್ನು ತ್ವರಿತವಾಗಿ ತೀರ್ಮಾನ ಕೈಗೊಂಡು ಅರ್ಹ ಕುಟುಂಬಗಳಿಗೆ ತಕ್ಷಣ ಪರಿಹಾರ ನೀಡುವಂತೆ ಕ್ರಮಕೈಗೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ಆರ್. ಎಸ್. ಶಿವಕುಮಾರ್

(ಆರ್.ಎಸ್. ಶಿವಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).
14/07/16

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
3. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, [illegible] ಮತ್ತು [illegible] ಇಲಾಖೆ ([illegible])

ಅನುಬಂಧ - 6

ಕೃಷಿ ಆಯುಕ್ತರ ಕಛೇರಿ
2035
11 SEP 2017
ಶೇಷಾದ್ರಿ ರಸ್ತೆ, ಬೆಂಗಳೂರು - 01.

28

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರೈತರ ಆತ್ಮಹತ್ಯೆ ಪ್ರಕರಣಗಳನ್ನು ಇತ್ಯರ್ಥ ಪಡಿಸಲು ಹೆಚ್ಚಿನ ಮೇಲ್ಮನವಿ ಪ್ರಾಧಿಕಾರವನ್ನು ರಚಿಸುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಕೃತೋಇ/280/ಕೃಉಇ/2003, ಬೆಂಗಳೂರು ದಿನಾಂಕ: 18-07-2003.
2. ಸರ್ಕಾರದ ಆದೇಶ ಸಂಖ್ಯೆ ಕೃತೋಇ/21/ಕೃಉಇ/2010, ಬೆಂಗಳೂರು, ದಿನಾಂಕ 17.5.2010.
3. ಸರ್ಕಾರಿ ಆದೇಶ ಸಂಖ್ಯೆ: ಕೃಇ/57/ಕೃಉಇ/ 2015(ಭಾಗ-1), ಬೆಂಗಳೂರು ದಿನಾಂಕ: 11.11.2015.
4. ಸರ್ಕಾರಿ ಆದೇಶ ಸಂಖ್ಯೆ: ಕೃಇ/57/ಕೃಉಇ 2015(ಭಾಗ-1), ಬೆಂಗಳೂರು ದಿನಾಂಕ: 25.11.2015.
5. ಸರ್ಕಾರಿ ಆದೇಶ ಸಂಖ್ಯೆ: ಕೃಇ/75/ಕೃಉಇ 2016, ಬೆಂಗಳೂರು ದಿನಾಂಕ 14.7.2016.
6. ಕೃಷಿ ಆಯುಕ್ತರವರ ಪತ್ರ ಸಂ. ಉಕೃನಿ/ಬೆವಿ/ರೈಆ/ಮೆ.ಪ್ರಾ/2017-18 ದಿನಾಂಕ 20.06.2047.

ಪ್ರಸ್ತಾವನೆ:

ಮೇಲೆ ಓದಲಾದ (1) ರಲ್ಲಿ ಸರ್ಕಾರದ ಸಾಲ ನೀಡುವ ಸಂಸ್ಥೆಗಳಿಂದ ಪಡೆದ ಸಾಲದ ಹೊರೆಯಿಂದ ಮಾತ್ರ ಆತ್ಮಹತ್ಯೆ ಮಾಡಿಕೊಂಡ ಪ್ರತಿಯೊಂದು ರೈತರ ಕುಟುಂಬಳಿಗೆ ತಲಾ ರೂ. 1.00 ಲಕ್ಷ ನಗದು ಪರಿಹಾರ ನೀಡಲು ಆದೇಶಿಸಿದೆ. ಮುಂದುವರೆದು, ಇಂತಹ ಆತ್ಮಹತ್ಯೆಗಳಿಗೆ ಸಾಲ ನೀಡುವ ಸಂಸ್ಥೆಗಳಿಂದ ಪಡೆದ ಸಾಲದ ಹೊರೆಯೇ ಕಾರಣ ಎಂಬ ವಿಷಯವನ್ನು ಖಾತರಿ ಮಾಡಿಕೊಂಡ ಧೃಡೀಕರಣ ಪತ್ರವನ್ನು ನೀಡುವ ಸಲುವಾಗಿ ಕಂದಾಯ ಇಲಾಖೆಯ ಪ್ರತಿ ವಿಭಾಗೀಯ ಆಯುಕ್ತರವರ (ಉಪ ವಿಭಾಗಾಧಿಕಾರಿ) ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಸಮಿತಿಯನ್ನು ರಚಿಸಲು ಸಹ ಸರ್ಕಾರದ ಮಂಜೂರಾತಿ ನೀಡಿದೆ. ರೈತರ ಆತ್ಮಹತ್ಯೆ ಪ್ರಕರಣಗಳನ್ನು ಇತ್ಯರ್ಥಪಡಿಸಲು ಉಪ ವಿಭಾಗ ಮಟ್ಟದಲ್ಲಿ ಸಮಿತಿಯನ್ನು ರಚಿಸಲಾಗಿದ್ದು ಅದರಂತೆ ಸಮಿತಿಯ ಸಭೆಯಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳನ್ನು ನಿರ್ಣಯಗೊಳಿಸಲಾಗುತ್ತಿದೆ. ಈ ಸಮಿತಿಯಲ್ಲಿ ರಚಿಸಿರುವ ಸದಸ್ಯರ ವಿವರವು ಈ ಕೆಳಕಂಡತಿದೆ:

| ಕ್ರ. ಸಂ. | ಅಧಿಕಾರಿಗಳು | ಸಮಿತಿಯಲ್ಲಿ ಸ್ಥಾನ |
|---|---|---|
| 1 | ಉಪ ವಿಭಾಗಾಧಿಕಾರಿ ಕಂದಾಯ ಇಲಾಖೆ | ಅಧ್ಯಕ್ಷರು |
| 2 | ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ | ಸದಸ್ಯರು |
| 3 | ಸರ್ಕಲ್ ಇನ್ಸಪೆಕ್ಟರ್ ಆಫ್ ಪೋಲೀಸ್ | ಸದಸ್ಯರು |
| 4 | ಆಯಾ ತಾಲ್ಲೂಕಿನ ತಹಸೀಲ್ದಾರರು | ಸದಸ್ಯರು |
| 5 | ತಾಲ್ಲೂಕು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಕಾರ್ಯದರ್ಶಿ | ಸದಸ್ಯರು |
| 6 | ತಾಲ್ಲೂಕು ಸಹಕಾರಿ ಸಂಘಗಳ ಅಭಿವೃದ್ಧಿ ಅಧಿಕಾರಿ | ಸದಸ್ಯರು |
| 7 | ಲೀಡ್ ಬ್ಯಾಂಕ್ ಮ್ಯಾನೇಜರ್ | ಸದಸ್ಯರು |
| 8 | ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು | ಸದಸ್ಯ ಕಾರ್ಯದರ್ಶಿ |

..2)

ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ, ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವಾಗ ಹಾವು ಕಡಿತ, ಮರದಿಂದ ಬೀಳುವುದು ಅಥವಾ ಕೃಷಿಗೆ ಸಂಬಂಧಿಸಿದ ಇತರೆ ಆಕಸ್ಮಿಕಗಳಿಂದ ಮರಣ ಹೊಂದಿದ ರೈತರ/ಕೃಷಿ ಕಾರ್ಮಿಕರ ಕುಟುಂಬಗಳಿಗೆ ರೂ.1.00 ಲಕ್ಷ ಸಹಾಯಧನ ನೀಡಲಾಗುವುದು ಹಾಗೂ ಬೆಂಕಿ ಆಕಸ್ಮಿಕದಿಂದ ಹುಲ್ಲು ಮೆದೆ ಬಣವೆಗಳು ನಷ್ಟವಾದ ಪ್ರಕರಣದಲ್ಲಿ ರೂ. 10000/-ದ ವರೆಗೆ ಪರಿಹಾರ ನೀಡಲು ಸರ್ಕಾರವು ಆದೇಶದಲ್ಲಿ ಮಂಜೂರಾತಿ ನೀಡಿರುತ್ತದೆ. ಇದಕ್ಕೆ ಸಂಬಂಧಿಸಿದ ದೃಢೀಕರಣವನ್ನು ನೀಡುವ ಕಾರ್ಯವನ್ನು ಉಪವಿಬಾಗ ಮಟ್ಟದಲ್ಲಿ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯ ಸಮಿತಿಯೇ ನಿರ್ವಹಿಸುವಂತೆ ಸರ್ಕಾರವು ಆದೇಶಿಸಿರುತ್ತದೆ.

ಮೇಲೆ (3) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಗಳಿಗೆ ನೀಡುತ್ತಿದ್ದ ಪರಿಹಾರವನ್ನು ರೂ.5.00 ಲಕ್ಷಗಳಿಗೆ ದಿನಾಂಕ: 01-04-2015 ರಿಂದ ಜಾರಿಗೆ ಬರುವಂತೆ ಆದೇಶ ಹೊರಡಿಸಲಾಗಿರುತ್ತದೆ.

ಮೇಲೆ (4) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ರೈತ ಆತ್ಮಹತ್ಯೆ ಮಾಡಿಕೊಂಡ ಸಂದರ್ಭದಲ್ಲಿ ಸಾಲದ ಹೊರೆ ಆತ್ಮಹತ್ಯೆಗೆ ಕಾರಣವೆಂಬ ವಿಷಯವನ್ನು ಪ್ರತಿ ಉಪವಿಭಾಗ ಮಟ್ಟದ ಸಮಿತಿಯು ನಿರ್ಣಯಿಸಿ ದೃಢೀಕರಿಸುವಾಗ (1) ಸಾಲದ ಹೊರೆಯಿಂದ ಆತ್ಮಹತ್ಯೆ ಮಾಡಿಕೊಂಡಾಗ ಕುಟುಂಬದ ಯಾವುದೇ ಸದಸ್ಯರ ಹೆಸರಿನಲ್ಲಿ ಜಮೀನು ಇದ್ದಲ್ಲಿ ಅಂತಹ ಪ್ರಕರಣಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು. (2) ಸರ್ಕಾರದ ಅಧಿಕೃತ ಪರವಾನಗಿ ಹೊಂದಿ ಹಣಕಾಸು ವ್ಯವಹಾರ ನಡೆಸುತ್ತಿರುವ ಯಾವುದೇ ಚಿಟ್ ಫಂಡ್‌ಗಳು, ಫಾನ್ ಬ್ರೋಕರ್ ಅಂಗಡಿಗಳು, ಖಾಸಗಿ ಲೇವಾದೇವಿದಾರರು ಮತ್ತು ಖಾಸಗಿ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದಿರುವುದನ್ನು ಪರಿಗಣನೆಗೆ ತೆಗೆದುಕೊಳ್ಳುವುದು. (3) ಹಲವಾರು ಕೃಷಿ ಕಾರ್ಮಿಕರು ರೈತರಿಂದ ಜಮೀನನ್ನು ಒಪ್ಪಂದದ ಮೇಲೆ ಪಡೆದು ಕೃಷಿ ಉತ್ಪಾದನೆಯಲ್ಲಿ ತೊಡಗಿದ್ದರೆ ಅಂತಹ ರೈತ ಆತ್ಮಹತ್ಯೆ ಮಾಡಿಕೊಂಡಿದ್ದಲ್ಲಿ ದಿನಾಂಕ: 01.04.2015ರಿಂದಲೇ ಪೂರ್ವಾನ್ವಯವಾಗುವಂತೆ ಪರಿಗಣನೆಗೆ ತೆಗೆದುಕೊಳ್ಳುವುದು. ಈ ಪರಿಷ್ಕೃತ ಮಾನದಂಡಗಳನ್ನು ದಿನಾಂಕ: 01-04-2015 ರಿಂದಲೇ ಪೂರ್ವಾನ್ವಯವಾಗುವಂತೆ ಜಾರಿಗೊಳಿಸಿ ಆದೇಶಿಸಿದೆ.

ರಾಜ್ಯದಲ್ಲಿ ಇರುವ ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ಸಾಲದ ಬಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಗಳಿಗೆ ಹೆಚ್ಚಿನ ಆರ್ಥಿಕ ಪರಿಹಾರ ಮತ್ತು ನೆರವು ನೀಡಲು ಸರ್ಕಾರವು ವಿವಿಧ ಇಲಾಖೆಗಳಿಂದ ಸೌಲಭ್ಯಗಳನ್ನು ರೈತರ ಕುಟುಂಬಗಳಿಗೆ ವಿಸ್ತರಿಸಿದೆ. ಆತ್ಮಹತ್ಯೆಗೆ ಶರಣಾದ ರೈತ ಕುಟುಂಬಗಳಿಗೆ ನೀಡಿರುವ ಎಲ್ಲಾ ಸೌಲಭ್ಯಗಳೂ ಸರಿಯಾದ ರೀತಿಯಲ್ಲಿ ಲಭ್ಯವಾಗುವಂತೆ ಉಸ್ತುವಾರಿ ಮಾಡಲು ಉಪ ವಿಭಾಗ ಮಟ್ಟದಲ್ಲಿ ಆಯಾ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮೇಲೆ (5)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ರಚಿಸಲಾಗಿರುತ್ತದೆ.

..3)

ಈ ಹಿನ್ನಲೆಯಲ್ಲಿ, ಕೃಷಿ ಆಯುಕ್ತರು ಮೇಲೆ (6) ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ, ಕೆಲವು ಆತ್ಮಹತ್ಯೆ ಪ್ರಕರಣಗಳು, ಹಾಗು ಹಾವು ಕಡಿತ ಮತ್ತು ಆಕಸ್ಮಿಕ ಮರಣದ ಪ್ರಕರಣಗಳಲ್ಲಿ ಉಪವಿಭಾಗದ ಸಮಿತಿ ಸಭೆಯ ನಿರ್ಣಯವು ರೈತ ಕುಟುಂಬದವರೆಗೆ ನಿರ್ಣಯವು ಸಮಂಜಸವಾಗಿಲ್ಲವೆಂದು ಗೊಂದಲವಿದ್ದಾಗ ಮೇಲನ್ಮವಿಗೆ ಮನವಿ ಸಲ್ಲಿಸಲು ಅವಕಾಶವಿಲ್ಲವಾಗಿರುತ್ತದೆ ಮತ್ತು ಕೆಲವು ಸಮಯದಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬದವರಿಂದ ಆಕ್ಷೇಪಣೆಗಳು ಬರುತ್ತಿದ್ದು, ಉಪ ವಿಭಾಗ ಮಟ್ಟದ ಸಮಿತಿಯಲ್ಲಿ ತೆಗೆದುಕೊಂಡ ನಿರ್ಣಯದ ಬಗ್ಗೆ ದೂರು ಸಲ್ಲಿಸಿರುತ್ತಾರೆ. ಉಪ ವಿಭಾಗ ಮಟ್ಟದ ಸಮಿತಿಯಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬದವರಿಗೆ ಈ ನಿರ್ಣಯವು ಗೊಂದಲವಿದ್ದಾಗ ಸಮಂಜಸವಾಗಿಲ್ಲದಿದ್ದು, ಅವರು ಹೆಚ್ಚಿನ ಮೇಲನ್ಮವಿ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಲು ಅವಕಾಶ ಕಲ್ಪಿಸಬೇಕಾಗಿರುತ್ತದೆ. ಕೆಲವು ಬಾರಿ ರೈತ ಆತ್ಮಹತ್ಯೆಯನ್ನು ವಾಸವಿರುವ ಸ್ಥಳ ಬಿಟ್ಟು ಆಯಾ ಉಪ ವಿಭಾಗ ಸಮಿತಿ ವ್ಯಾಪ್ತಿ ಹೊರೆಗೆ ಆತ್ಮಹತ್ಯೆ ಮಾಡಿಕೊಂಡಾಗ ಉಪವಿಭಾಗ ಸಮಿತಿಯಲ್ಲಿ ನಿರ್ಣಯ ತೆಗೆದು ಕೊಳ್ಳಲು ತೊಂದರೆ ಉಂಟಾಗುತ್ತದೆ ಇಂತಹ ಪ್ರಕರಣಗಳನ್ನು ಮರು ಪರಿಶೀಲಿಸಲು ಕೇಂದ್ರ ಕಛೇರಿಯಲ್ಲಿ ಸಾಧ್ಯವಿರುವುದಿಲ್ಲ ಹಾಗೂ ಇಂತಹ ಸಮಸ್ಯೆಯನ್ನು ಬಗೆಹರಿಸಲು ಪ್ರಾದೇಶಿಕ ಆಯುಕ್ತರು ಅಧ್ಯಕ್ಷತೆಯಲ್ಲಿ ಹೆಚ್ಚಿನ ಮೇಲನ್ಮವಿ ಪ್ರಾಧಿಕಾರವನ್ನು ಕೆಳಕಂಡ ಅಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ರಚಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

| ಕ್ರ. ಸಂ. | ಅಧಿಕಾರಿಗಳು | ಸಮಿತಿಯಲ್ಲಿ ಸ್ಥಾನ |
|---|---|---|
| 1 | ಪ್ರಾದೇಶಿಕ ಆಯುಕ್ತರು | ಅಧ್ಯಕ್ಷರು |
| 2 | ಆಯಾ ಪ್ರಾದೇಶಿಕ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಯ ಜಿಲ್ಲಾಧಿಕಾರಿಗಳು | ಸದಸ್ಯರು |
| 3 | ಆಯಾ ಜಿಲ್ಲೆಯ ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ | ಸದಸ್ಯರು |
| 4 | ಆಯಾ ಜಿಲ್ಲೆಯ ಜಿಲ್ಲಾ ವೈದ್ಯಾಧಿಕಾರಿಗಳು | ಸದಸ್ಯರು |
| 5 | ಜಿಲ್ಲಾ ಸಹಕಾರ ಅಧಿಕಾರಿಗಳು | ಸದಸ್ಯರು |
| 6 | ಲೀಡ್ ಬ್ಯಾಂಕ್ ಮ್ಯಾನೇಜರ್ | ಸದಸ್ಯರು |
| 7 | ಜಿಲ್ಲೆಯ ಜಂಟ ಕೃಷಿ ನಿರ್ದೇಶಕರು | ಸದಸ್ಯರು |
| 8 | ಆಯಾ ಪ್ರಾದೇಶಿಕ ವ್ಯಾಪ್ತಿಯಲ್ಲಿ ಬರುವ ವಿಭಾಗದ ಜಂಟಿ ಕೃಷಿ ನಿರ್ದೇಶಕರು | ಸದಸ್ಯ ಕಾರ್ಯದರ್ಶಿಗಳು |

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಕೃಇ 150 ಕೃಇಕ 2017, ಬೆಂಗಳೂರು, ದಿನಾಂಕ 29.08.2017</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ರೈತರ ಆತ್ಮಹತ್ಯೆ ಪ್ರಕರಣಗಳನ್ನು ಇತ್ಯರ್ಥಪಡಿಸಲು ರಚಿಸಿರುವ ಉಪ ವಿಭಾಗಾಧಿಕಾರಿ ಅಧ್ಯಕ್ಷತೆಯ ಉಪ ವಿಭಾಗ ಸಮಿತಿಯು ಕೈಗೊಂಡ ನಿರ್ಣಯವು ರೈತ ಕುಟುಂಬದವರಿಗೆ ಸಮಂಜಸವಾಗಿಲ್ಲವೆನಿಸಿದಾಗ ಅರ್ಜಿದಾರರು ಸಲ್ಲಿಸುವ ಮೇಲ್ಮನವಿಗಳ ಪ್ರಕರಣಗಳನ್ನು ಪರಿಶೀಲಿಸಲು ಸಂಬಂಧಿಸಿದ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕೆಳಕಂಡ ಮೇಲ್ಮನವಿ ಪ್ರಾಧಿಕಾರವನ್ನು ರಚಿಸಿ ಆದೇಶಿಸಿದೆ.

| ಕ್ರ. ಸಂ. | ಅಧಿಕಾರಿಗಳು | ಸಮಿತಿಯಲ್ಲಿ ಸ್ಥಾನ |
|---|---|---|
| 1 | ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಸಂಬಂಧಿಸಿದ ಜಿಲ್ಲೆಯ ಪೊಲೀಸ್ ಅಧೀಕ್ಷಕರು | ಸದಸ್ಯರು |
| 3 | ಸಂಬಂಧಿಸಿದ ಜಿಲ್ಲೆಯ ಜಿಲ್ಲಾ ವೈದ್ಯಾಧಿಕಾರಿಗಳು | ಸದಸ್ಯರು |
| 4 | ಸಂಬಂಧಿಸಿದ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರು | ಸದಸ್ಯ ಕಾರ್ಯದರ್ಶಿಗಳು |

ಮೇಲೆ ತಿಳಿಸಿದ ಸಮಿತಿಯ ಅಧ್ಯಕ್ಷರು ಅವಶ್ಯಕತೆ ಆಧಾರದ ಮೇಲೆ ಸದಸ್ಯರು. ಉಪ ಸದಸ್ಯರುಗಳನ್ನು ನೇಮಿಸಿಕೊಳ್ಳುವ ಅಧಿಕಾರ ಹೊಂದಿರುತ್ತಾರೆ. ಸಮಿತಿಯ ಕರ್ತವ್ಯಗಳು ಮತ್ತು ನಿಬಂಧನೆಗಳು ಈ ಕೆಳಗಿನಂತಿರುತ್ತದೆ.

<u>ಸಮಿತಿಯ ಕರ್ತವ್ಯಗಳು ಮತ್ತು ನಿಬಂಧನೆಗಳು:</u>

1. ಸಮಿತಿಯು ಆಗ್ಗಿಂದ್ದಾಗೆ ಸಭೆ ಸೇರಿ ಉಪ ವಿಭಾಗ ಮಟ್ಟದ ಸಮಿತಿಯ ನಿರ್ಣಯದ ಬಗ್ಗೆ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬದವರೆಗೆ ಅಸಮಾಧಾನವಿದ್ದಲ್ಲಿ ಅವರು ಮರುಪರಿಶೀಲನೆಗೆ ಅರ್ಜಿ ಸಲ್ಲಿಸಿದಲ್ಲಿ ಅಂತಹ ಪ್ರಕರಣಗಳನ್ನು ತುರ್ತಾಗಿ ತೀರ್ಮಾನಿಸುವುದು.
2. ನಿರ್ಣಯದ ವರದಿಯನ್ನು ಉಪ ವಿಭಾದ ಸಮಿತಿಗೆ ವರ್ಗಾಯಿಸುವುದು. ಅರ್ಹ ಪ್ರಕರಣವೆಂದು ಕಂಡು ಬಂದಲ್ಲಿ ಹಾಗು ಪರಿಹಾರ ನೀಡುವ ಧೃಢೀಕರಣ ಸಂದರ್ಭದಲ್ಲಿ ಪರಿಹಾರದ ಮೊತ್ತವು ಮೃತ ರೈತ ಕುಟುಂಬದ ಕಾನೂನು ಬದ್ದ ವಾರಸುದಾರರಿಗೆ ಪರಿಹಾರ ಧನವು ತಲುಪುವಂತೆ ಉಪ ವಿಭಾಗದ ಸಮಿತಿಯು ಎಚ್ಚರಿಕೆ ವಹಿಸುವುದು ಹಾಗು ಪರಿಹಾರಧನ ತಲುಪುವುದನ್ನು ಖಾತರಿಮಾಡಿಕೊಂಡು ಈ ಬಗ್ಗೆ ವರದಿಯನ್ನು ಮೇಲ್ಮನವಿ ಪ್ರಾಧಿಕಾರಕ್ಕೆ ಸಲ್ಲಿಸುವುದು.
3. ಪರಿಹಾರ ವಿತರಣೆ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲು ಸಮಿತಿಯು ಸ್ವತಂತ್ರವಾಗಿದೆ ಹಾಗೂ ಪೂರ್ಣ ಅಧಿಕಾರವನ್ನು ಹೊಂದಿದೆ.
4. ಅವಶ್ಯಕತೆ ಆಧಾರದ ಮೇಲೆ ಸಮಿತಿಯು ಆತ್ಮಹತ್ಯೆ ಮಾಡಿಕೊಂಡ ರೈತರ ಸ್ಥಳ ಪರೀಕ್ಷೆ ಹಾಗೂ ಪ್ರಕರಣಗಳಿಗೆ ಸಂಬಂಧಿಸಿದಂತೆ ಅಗತ್ಯ ಸಾಕ್ಷ್ಯಾಧಾರಗಳನ್ನು ಪಡೆಯಲು ಅಧಿಕಾರ ಹೊಂದಿರುತ್ತದೆ.
5. ಮೇಲ್ಮನವಿ ಪ್ರಾಧಿಕಾರದ ನಿರ್ಣಯವು ಅಂತಿಮವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

ಎನ್. ರಾಜೇಶ್ವರಿ 27/08/14
(ಎನ್. ರಾಜೇಶ್ವರಿ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಕೃಷಿ ಇಲಾಖೆ ಯೋಜನೆ

ಗೆ:
ಸಂಕಲನಗಾರರು, ಕರ್ನಾಟಕ ರಾಜ್ಯ ಪತ್ರ ಹಾಗೂ ನಿರ್ದೇಶಕರು, ಲೇಖನ, ಮುದ್ರಣ, ಸಾಮಾಗ್ರಿ ಹಾಗೂ ಪ್ರಕರಣಗಳ ಇಲಾಖೆ, ಸರ್ಕಾರಿ ಮುದ್ರಣಾಲಯ ಇವರಿಗೆ ಕಳುಹಿಸಿ, ಈ ಆದೇಶವನ್ನು ರಾಜ್ಯ ಪತ್ರದ ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸಿ ಅದರ 100 ಪ್ರತಿಯನ್ನು ಸಚಿವಾಲಯದ ಈ ಇಲಾಖೆಗೆ ಕಳುಹಿಸುವಂತೆ ಕೋರಲಾಗಿದೆ.

30



ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಪ್ರತಿಗಳ ರವಾನೆ:

1) ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2) ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
3) ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ,
~~5) ಆಯುಕ್ತರು~~/ ನಿರ್ದೇಶಕರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು
6) ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು / ಹೆಚ್ಚುವರಿ ಜಿಲ್ಲಾಧಿಕಾರಿಗಳು
7) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು
8) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು
9) ಎಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳು
10) ಪೊಲೀಸ್ ಇಲಾಖೆಯ ಎಲ್ಲಾ ಡಿವೈಎಸ್‌ಪಿಗಳು
11) ಎಲ್ಲಾ ಜಿಲ್ಲಾ ಸೂಪರಿಂಟೆಂಡೆಂಟ್ ಆಫ್ ಪೊಲೀಸ್
12) ರಾಜ್ಯದ ಎಲ್ಲಾ ತಾಲ್ಲೂಕಿನ ತಹಶೀಲ್ದಾರುಗಳು
13) ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾ ವೈದ್ಯಾಧಿಕಾರಿಗಳು
14) ಸಹಕಾರ ಸಂಘಗಳ ಎಲ್ಲಾ ಎ.ಆರ್.ಸಿ.ಎಸ್.ಗಳು
15) ಎಲ್ಲಾ ಪ್ರಾದೇಶಿಕ ಆಯುಕ್ತರು
16) ರಾಜ್ಯದ ಎಲ್ಲಾ ಇಲಾಖಾ ಆಯುಕ್ತರು / ನಿರ್ದೇಶಕರು
17) ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-4) ಬೆಂಗಳೂರು.
18) ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
19) ಉಪ ನಿರ್ದೇಶಕರು, ಟಿ.ಎನ್.ಎಂ.ಸಿ., ಖನಿಜ ಭವನ, ಬೆಂಗಳೂರು
20) ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು
21) ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು
22) ರಾಜ್ಯದ ಎಲ್ಲಾ ಜಂಟಿ ಕೃಷಿ ನಿರ್ದೇಶಕರು ಹಾಗೂ ಎಲ್ಲಾ ಸಹಾಯಕ ಕೃಷಿ ನಿರ್ದೇಶಕರು
23) ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು
24) ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ:

1) ಪೊಲೀಸ್ ಮಹಾ ನಿರ್ದೇಶಕರು, ಬೆಂಗಳೂರು
2) ಸಹಕಾರ ಸಂಘಗಳ ರಿಜಿಸ್ಟ್ರಾರ್, ಬೆಂಗಳೂರು
3) ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಗಳು
4) ಎಲ್ಲಾ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿಗಳು
5) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು
6) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು
7) ಸರ್ಕಾರದ ಉಪ ಕಾರ್ಯದರ್ಶಿ-1 & 2, ಕೃಷಿ ಇಲಾಖೆ ರವರ ಆಪ್ತ ಸಹಾಯಕರು

(ಕ್ರಮ ಸಂಖ್ಯೆ: 8 ರಿಂದ 17 & 23 ಕೃಷಿ ಆಯುಕ್ತರ ಮುಖಾಂತರ).

31

ಅನುಬಂಧ - 7

2108
10 DEC 2015
ಬೆಂಗಳೂರು

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಾಲದ ಹೊರೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ಪರಿಹಾರಧನ ನೀಡಲು ಅನುಸರಿಸುತ್ತಿರುವ ಮಾನದಂಡಗಳನ್ನು ಪರಿಷ್ಕರಿಸುವ ಬಗ್ಗೆ

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಕೃತೋಇ/280/ಕೃಉಇ/2003. ಬೆಂಗಳೂರು, ದಿನಾಂಕ:18.07.2003
2. ಸರ್ಕಾರದ ಆದೇಶ ಸಂಖ್ಯೆ: ಕೃಇ/57/ಕೃಉಇ/2015. ಬೆಂಗಳೂರು, ದಿನಾಂಕ:17.07.2015
3. ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಟಿಪ್ಪಣಿ ಸಂಖ್ಯೆ:ಮುಕಾ/678/, ದಿನಾಂಕ:14.10.2015
4. ಸರ್ಕಾರದ ಆದೇಶ ಸಂಖ್ಯೆ: ಕೃಇ/57/ಕೃಉಇ/2015(ಭಾಗ-1). ಬೆಂಗಳೂರು, ದಿನಾಂಕ:11.11.2015
5. ದಿನಾಂಕ:24.11.2015ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯದಲ್ಲಿ ಬರದ ಮೇಲಿನ ವಿಷಯಕ್ಕೆ ಸಂಬಂದಿಸಿದಂತೆ ಜರುಗಿದ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದಂತೆ/ನಿರ್ದೇಶಿಸಿದಂತೆ

### ಪ್ರಸ್ತಾವನೆ:

ಬೆಳೆಹಾನಿ, ಸಾಲಭಾದೆ, ಬೆಲೆಕುಸಿತ ಇತ್ಯಾದಿ ಕಾರಣಗಳಿಂದ ಸಂಕಷ್ಟಕ್ಕೊಳಗಾದ ಹಲವಾರು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ಗಮನಿಸಿದ ರಾಜ್ಯ ಸರ್ಕಾರವು, ಮೇಲೆ ಓದಲಾದ (1)(2) ಮತ್ತು (4) ರ ಸರ್ಕಾರದ ಆದೇಶಗಳಲ್ಲಿ 2003-04ನೇ ಸಾಲಿನಿಂದ ಸಾಲದ ಹೊರೆಯಿಂದ ಆತ್ಮಹತ್ಯೆ ಮಾಡಿಕೊಂಡ ಪ್ರತಿಯೊಂದು ರೈತರ ಕುಟುಂಬಕ್ಕೆ ಕ್ರಮವಾಗಿ ತಲಾ ರೂ.1.00ಲಕ್ಷ, ರೂ:2.00ಲಕ್ಷ ಮತ್ತು ರೂ:5.00ಲಕ್ಷದಂತೆ ಪರಿಹಾರದ ಮೊತ್ತವನ್ನು ಪರಿಷ್ಕರಿಸಲಾಗಿದೆ

ಸಾಲದ ಹೊರೆಯಿಂದ ರೈತರು ಆತ್ಮಹತ್ಯೆ ಮಾಡಿಕೊಂಡ ಸಂಧರ್ಭದಲ್ಲಿ ಪರಿಹಾರ ನೀಡುವಾಗ ಆತ್ಮಹತ್ಯೆ ಮಾಡಿಕೊಂಡ ರೈತರ ಹೆಸರಿನಲ್ಲಿ ಜಮೀನು ಹೊಂದಿರುವುದು ಕಡ್ಡಾಯವಾಗಿರುತ್ತದೆ, ಇಲ್ಲದ್ದಿದ್ದಲ್ಲಿ ಅಂತಹ ಪ್ರಕರಣಗಳನ್ನು ಪರಿಗಣಿಸಲಾಗುತ್ತಿರಲಿಲ್ಲ, ಅದೇ ರೀತಿ ಆತ್ಮಹತ್ಯೆ ಮಾಡಿಕೊಂಡ ರೈತನ ಹೆಸರಿನಲ್ಲಿ ಅಧಿಕೃತ ಸಾಲ ಸಂಸ್ಥೆಗಳಾದ ಸಹಕಾರ ಸಂಘಗಳು, ಸಹಕಾರ ಬ್ಯಾಂಕುಗಳು/ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು/ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲಪಡೆದು ಆತ್ಮಹತ್ಯೆ ಮಾಡಿಕೊಂಡಿರುವುದನ್ನು ಖಾತರಿ ಪಡಿಸಿಕೊಂಡು ಪರಿಹಾರ ವಿತರಣೆಗೆ ಪರಿಗಣಿಸಲಾಗುತ್ತಿತ್ತು, ಉಲ್ಲೇಖ(4)ರ ಆದೇಶದಲ್ಲಿ ಕೃಷಿ ಕಾರ್ಮಿಕರು ರೈತರಿಂದ ಒಪ್ಪಂದದ ಮೇರೆಗೆ ಜಮೀನು ಪಡೆದು ಕೃಷಿ ಉತ್ಪಾದನೆಯಲ್ಲಿ ತೊಡಗಿದ್ದು ಅಂತಹವರಿಗೂ ಪರಿಹಾರ ನೀಡಲು ದಿನಾಂಕ:11.11.2015ರಿಂದ ಜಾರಿಗೆ ಬರುವಂತೆ ಆದೇಶಿಸಲಾಗಿತ್ತು.

ರೈತ ತನ್ನ ಕೃಷಿ ಚಟುಟಿಕೆಗಳಿಗಾಗಿ ಮೇಲ್ಕಂಡ ಸಂಘ ಸಂಸ್ಥೆಗಳಲ್ಲದೆ, ಸರ್ಕಾರದಿಂದ ಅಧಿಕೃತ ಪರವಾನಗಿ ಪಡೆದು ಹಣಕಾಸು ವಹಿವಾಟು ನಡೆಸುತ್ತಿರುವ ಚಿಟ್‌ಫಂಡ್‌ಗಳು/ಪಾನ್‌ಬ್ರೋಕರ್ ಅಂಗಡಿಗಳು/ಖಾಸಗಿ ಲೇವಾದೇವಿ ಸಂಸ್ಥೆಗಳು/ಖಾಸಗಿ ಹಣಕಾಸು ಸಂಸ್ಥೆಗಳಿಂದಲೂ ಸಾಲವನ್ನು ಪಡೆದು ಆತ್ಮಹತ್ಯೆ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ ದಿನಾಂಕ:24.11.2015ರಂದು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯದಲ್ಲಿ ಬರದ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಜರುಗಿದ ಸಭೆಯಲ್ಲಿ ಸಾಲದ ಹೊರೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಗಳಿಗೆ ಪರಿಹಾರ ನೀಡಲು ಪ್ರಸ್ತುತ ಅನುಸರಿಸುತ್ತಿರುವ ಮಾನದಂಡಗಳನ್ನು ಪರಿಷ್ಕರಿಸುವ ಬಗ್ಗೆ ವ್ಯಾಪಕವಾಗಿ ಚರ್ಚಿಸಿ ಈ ಸಂಬಂಧ ಸೂಕ್ತ ಆದೇಶ ಹೊರಡಿಸಲು ಮಾನ್ಯ ಮುಖ್ಯಮಂತ್ರಿಗಳು ಸೂಚನೆ ನೀಡಿರುತ್ತಾರೆ.

**ಸರ್ಕಾರಿ ಆದೇಶ ಸಂಖ್ಯೆ: ಕೃಇ/57/ಕೃಉಇ 2015 (ಭಾಗ-1), ಬೆಂಗಳೂರು, ದಿನಾಂಕ:25.11.2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ರೈತ ಆತ್ಮಹತ್ಯೆ ಮಾಡಿಕೊಂಡ ಸಂದರ್ಭದಲ್ಲಿ ಸಾಲದ ಹೊರೆ ಆತ್ಮಹತ್ಯೆಗೆ ಕಾರಣವೆಂಬ ವಿಷಯವನ್ನು ಪ್ರತಿ ಉಪವಿಭಾಗ ಮಟ್ಟದ ಸಮಿತಿಯು ನಿರ್ಣಯಿಸಿ ದೃಢೀಕರಿಸುವಾಗ ಈ ಕೆಳಕಂಡ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು:

1. ಸಾಲದ ಹೊರೆಯಿಂದ ಆತ್ಮಹತ್ಯೆ ಮಾಡಿಕೊಂಡಾಗ ಕುಟುಂಬದ ಯಾವುದೇ ಸದಸ್ಯರ ಹೆಸರಿನಲ್ಲಿ ಜಮೀನು ಇದ್ದಲ್ಲಿ ಅಂತಹ ಪ್ರಕರಣಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು.
2. ಸರ್ಕಾರದ ಅಧಿಕೃತ ಪರವಾನಗಿ ಹೊಂದಿ ಹಣಕಾಸು ವ್ಯವಹಾರ ನಡೆಸುತ್ತಿರುವ ಚಿಟ್ ಫಂಡ್‌ಗಳು, ಪಾನ್ ಬ್ರೋಕರ್ ಅಂಗಡಿಗಳು, ಖಾಸಗಿ ಲೇವಾದೇವಿದಾರರು ಮತ್ತು ಖಾಸಗಿ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದಿರುವುದನ್ನು ಪರಿಗಣನೆಗೆ ತೆಗೆದುಕೊಳ್ಳುವುದು.
3. ಹಲವಾರು ಕೃಷಿ ಕಾರ್ಮಿಕರು ರೈತರಿಂದ ಜಮೀನನ್ನು ಒಪ್ಪಂದದ ಮೇಲೆ ಪಡೆದು ಕೃಷಿ ಉತ್ಪಾದನೆಯಲ್ಲಿ ತೊಡಗಿದ್ದರೆ ಅಂತಹ ರೈತ ಆತ್ಮಹತ್ಯೆ ಮಾಡಿಕೊಂಡಿದ್ದಲ್ಲಿ ದಿನಾಂಕ:01.04.2015ರಿಂದಲೇ ಪೂರ್ವಾನ್ವಯವಾಗುವಂತೆ ಪರಿಗಣನೆಗೆ ತೆಗೆದುಕೊಳ್ಳುವುದು.

ಇದಕ್ಕೆ ತಗಲುವ ವೆಚ್ಚವನ್ನು ಪ್ರಸ್ತುತ ಚಾಲ್ತಿಯಲ್ಲಿರುವ ಲೆಕ್ಕಶೀರ್ಷಿಕೆ:2401-00-800-1-40 ಉಪ ಶೀರ್ಷಿಕೆ(100)ರಲ್ಲಿ ಭರಿಸಲು ಅನುಮತಿ ನೀಡಲಾಗಿದೆ.

**ಈ ಪರಿಷ್ಕೃತ ಮಾನದಂಡಗಳು ದಿನಾಂಕ:01.04.2015ರಿಂದಲೇ ಪೂರ್ವಾನ್ವಯವಾಗುವಂತೆ ಜಾರಿಗೊಳಿಸಿ ಆದೇಶಿಸಿದೆ.**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಆರ್. ಎಸ್. ಶಿವಕುಮಾರ್

(ಆರ್.ಎಸ್.ಶಿವಕುಮಾರ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ(ಯೋಜನೆ).

25/11/15

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-1.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು
3. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
4. ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
5. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು
6. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು
7. ಕಂದಾಯ ಇಲಾಖೆಯ ಎಲ್ಲಾ ಉಪ ವಿಭಾಗಾಧಿಕಾರಿಗಳು

8. ಪೋಲೀಸ್ ಇಲಾಖೆಯ ಎಲ್ಲಾ ಡಿವೈಎಸ್ ಪಿ ಗಳು
9. ರಾಜ್ಯದ ಎಲ್ಲಾ ತಾಲ್ಲೂಕು ತಹಸೀಲ್ದಾರರುಗಳು
10. ರಾಜ್ಯದ ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು ಹಾಗೂ ಎಲ್ಲಾ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳು
11. ಸಹಕಾರ ಸಂಘಗಳ ಎಲ್ಲಾ ಎ.ಆರ್.ಸಿ.ಎಸ್.ಗಳು
12. ಸರ್ಕಾರದ ಉಪ ಕಾರ್ಯದರ್ಶಿ -1, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
13. ಸರ್ಕಾರದ ಉಪ ಕಾರ್ಯದರ್ಶಿ ಮತ್ತು ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಇಲಾಖೆ, ಬೆಂಗಳೂರು.
14. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-4), ವಿಧಾನ ಸೌಧ, ಬೆಂಗಳೂರು.
15. ಡೆಪ್ಯೂಟಿ ಡೈರೆಕ್ಟರ್, TNMC, ಖನಿಜ ಭವನ, ಬೆಂಗಳೂರು.
16. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು.
17. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
18. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ.

1. ಪೋಲೀಸ್ ಮಹಾ ನಿರ್ದೇಶಕರು, ಬೆಂಗಳೂರು
2. ಸಹಕಾರ ಸಂಘಗಳ ರಿಜಿಸ್ಟ್ರಾರ್, ಬೆಂಗಳೂರು
3. ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಗಳು
4. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು
5. ಮಾನ್ಯ ಗೃಹ ಸಚಿವರ ಆಪ್ತ ಕಾರ್ಯದರ್ಶಿಗಳು
6. ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿಗಳು
7. ಮಾನ್ಯ ಕೃಷಿ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು
8. ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು
9. ಅಪರ ಮುಖ್ಯ ಕಾರ್ಯದರ್ಶಿರವರು ಹಾಗೂ ಅಭಿವೃದ್ಧಿ ಆಯುಕ್ತರುರವರ ಆಪ್ತ ಕಾರ್ಯದರ್ಶಿಗಳು
10. ಗೃಹ, ಕಂದಾಯ, ಸಹಕಾರ, ಆರ್ಥಿಕ ಹಾಗೂ ಯೋಜನಾ ಇಲಾಖೆಗಳ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು
11. ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿಗಳು.

**ಕರ್ನಾಟಕ ಕೃಷಿ ಬೆಲೆ ಆಯೋಗವು ದಿನಾಂಕ:29.02.2020 ರಂದು ಕೃಷಿ ಆಯುಕ್ತಾಲಯದ ಸಮೃದ್ಧಿ ಸಭಾಂಗಣದಲ್ಲಿ ಆಯೋಜಿಸಿದ್ದ "ಸಂತ್ರಸ್ತ ರೈತ ಮಹಿಳೆಯರ ಬವಣೆಗಳು ಮತ್ತು ಪರಿಹಾರಗಳ ಸಾಧ್ಯತೆ" ಎಂಬ ವಿಷಯದ ಬಗೆಗಿನ ಕಾರ್ಯಾಗಾರದ ನಡವಳಿಗಳು.**

ಹಾಜರಿದ್ದ ಸದಸ್ಯರುಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ಈ ಕಾರ್ಯಾಗಾರದ ಅಧ್ಯಕ್ಷತೆಯನ್ನು ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷರಾದ ಶ್ರೀ ಹನುಮನಗೌಡ ಬೆಳಗುರ್ಕಿರವರು ವಹಿಸಿದ್ದರು. ಆಯೋಗದ ಸದಸ್ಯ ಕಾರ್ಯದರ್ಶಿಗಳಾದ ಕೃಷಿ ನಿರ್ದೇಶಕರು ಸಭೆಗೆ ಆಗಮಿಸಿದ್ದ ಎಲ್ಲರನ್ನೂ ಸ್ವಾಗತಿಸಿದರು. ನಂತರ ಎಲ್ಲರ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಳ್ಳಲಾಯಿತು. ಸ್ವಾಗತ ಭಾಷಣವನ್ನು ಮಾಡಿದ ಅಧ್ಯಕ್ಷರು ಯಾವುದೇ ಕ್ಷೇತ್ರದಲ್ಲಾಗಲೀ ನಾಗರಿಕರು ಸಂತ್ರಸ್ತರಾದ ಪಕ್ಷದಲ್ಲಿ ಅವರುಗಳಿಗೆ ಸಾಂತ್ವನ ನೀಡುವುದು ಹಾಗೂ ಪರಿಹಾರವನ್ನು ಒದಗಿಸುವುದು ಕಲ್ಯಾಣ ರಾಷ್ಟ್ರವಾದ ಭಾರತದ ಒಂದು ಸಿದ್ಧಾಂತವಾಗಿದೆ. ಅದರಲ್ಲೂ ವಿಶೇಷವಾಗಿ ಕೃಷಿ ಕ್ಷೇತ್ರದಲ್ಲಿ ಸಂತ್ರಸ್ತರಾದವರಿಗೆ ಪರಿಹಾರವನ್ನು ಆದಷ್ಟು ಬೇಗನೆ ಒದಗಿಸುವುದು ಒಂದು ಉತ್ತಮ ಕಾರ್ಯವಾಗಿರುತ್ತದೆ. ಕೃಷಿ ಕ್ಷೇತ್ರದಲ್ಲಿನ ಆದಾಯವು ಅನಿಶ್ಚಿತವಾಗಿರುವುದರಿಂದ ಹಾಗೂ ರೈತರು ಆದಾಯದ ಸ್ಪಷ್ಟ ಕಲ್ಪನೆ ಇಲ್ಲದೆ ಪರಿಕರಗಳಿಗೆ ಖರ್ಚು ಮಾಡುವುದರಿಂದ ಆದಾಯವು ನಿರೀಕ್ಷಿತ ಮಟ್ಟದಲ್ಲಿ ಬರದೇ ಇದ್ದಾಗ, ರೈತರು ದಿಕ್ಕೆಟ್ಟು ಆತ್ಮಹತ್ಯೆ ಮಾಡಿಕೊಳ್ಳುವುದು ರಾಷ್ಟ್ರದಲ್ಲಿ ಹಾಗೂ ರಾಜ್ಯದಲ್ಲಿ ಸಾಮಾನ್ಯ ಸಂಗತಿಯಾಗುತ್ತಿದೆ. ಇದರಿಂದಾಗಿ ಆತ್ಮಹತ್ಯೆಗೊಳಗಾದ ರೈತನ ಕುಟುಂಬವು ಬಹಳ ಕಷ್ಟಕ್ಕೀಡಾಗುತ್ತದೆ. ರೈತ ಮಹಿಳೆಯರು ಮತ್ತು ಅವರ ಮಕ್ಕಳು, ರೈತನ ತಂದೆ-ತಾಯಿಗಳು ಹಾಗೂ ಇತರ ಅವಲಂಬಿತರು ಈ ರೀತಿಯ ಅನಿರೀಕ್ಷಿತ ಅವಘಡಕ್ಕೆ ಸಿದ್ಧರಾಗಿರುವುದಿಲ್ಲ ಮತ್ತು ಇಡೀ ಕುಟುಂಬವು ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ವೈಯುಕ್ತಿಕವಾಗಿ ದಿಕ್ಕೆಡುತ್ತದೆ. ಇದನ್ನು ಮನಗಂಡು "ಮಕಾಮ್" ಎಂಬ ಸ್ವಯಂ ಸೇವಾ ಸಂಸ್ಥೆಯು ಈ ಬಗ್ಗೆ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿದೆ ಮತ್ತು ಒಂದು ಸಮೀಕ್ಷೆಯನ್ನು ಕೈಗೊಂಡಿದೆ. ಇದರ ಫಲಿತಾಂಶಗಳನ್ನು ಸಭಿಕರ ಮುಂದಿಟ್ಟು ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿ ಸರ್ಕಾರಕ್ಕೆ ಕಾರ್ಯನೀತಿ ಸಲಹೆಯನ್ನು ನೀಡುವುದು ಈ ಸಂಸ್ಥೆಯ ಉದ್ದೇಶವಾಗಿದೆ. ಆದ್ದರಿಂದ ಸಭೆಯಲ್ಲಿ ನೆರೆದಿರುವ ಎಲ್ಲಾ ಸಭಿಕರೂ ಸಹ ಸಕ್ರಿಯವಾಗಿ ಭಾಗವಹಿಸಿ ಉತ್ತಮ ಕಾರ್ಯನೀತಿ ಸಲಹೆ ನೀಡುವುದಕ್ಕೆ ಸಹಕರಿಸಬೇಕೆಂದು ಕೋರಿಕೊಂಡರು.

ಮಕಾಮ್ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀಮತಿ ಕವಿತಾ ಶ್ರೀನಿವಾಸನ್‌ರವರು ಮಕಾಮ್ ಸಂಸ್ಥೆಯು ನಡೆಸಿದ ಒಂದು ಸಮೀಕ್ಷಾ ಅಧ್ಯಯನದ ಬಗ್ಗೆ ಸಭೆಗೆ ತಿಳಿಸಿದರು. ಸಂಸ್ಥೆಯು 2019ರಲ್ಲಿ ಕರ್ನಾಟಕ ರಾಜ್ಯದ ಸಂತ್ರಸ್ತ ಮಹಿಳೆಯರ ಬಗ್ಗೆ ಒಂದು ಅಧ್ಯಯನವನ್ನು ಕೈಗೊಂಡಿತ್ತು. ಈ ಅಧ್ಯಯನದ ಉದ್ದೇಶವು (ಅ) ಯಾವ ಕುಟುಂಬಗಳಲ್ಲಿ ರೈತರ ಆತ್ಮಹತ್ಯೆ ನಡೆದಿರುತ್ತದೆಯೋ ಅಂತಹ ಕುಟುಂಬಗಳ ಮಹಿಳೆಯರ ಸ್ಥಿತಿಗತಿಗಳನ್ನು ಅರಿತುಕೊಳ್ಳುವಿಕೆ, (ಆ) ಇದರ ಆಧಾರದ ಮೇರೆಗೆ ಸಂತ್ರಸ್ತ ಮಹಿಳೆಯರಿಗೆ ಸಮಗ್ರ ಬೆಂಬಲ ಯೋಜನೆಯನ್ನು ರೂಪಿಸುವ ಸಲುವಾಗಿ ಶಿಫಾರಸ್ಸುಗಳನ್ನು ಮಾಡುವುದು.

ಈ ಅಧ್ಯಯನಕ್ಕಾಗಿ ಒಂದು ಪ್ರಶ್ನಾವಳಿಯನ್ನು ಸಿದ್ಧಪಡಿಸಿಕೊಳ್ಳಲಾಗಿತ್ತು. ಇದನ್ನು ತುಮಕೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಪೂರ್ವಭಾವಿಯಾಗಿ ಉಪಯೋಗಿಸಲಾಯಿತು ಮತ್ತು ಸಂತ್ರಸ್ತ ಕುಟುಂಬಗಳ ದತ್ತಾಂಶವನ್ನು ಸಂಗ್ರಹಿಸಿ ಪ್ರಶ್ನಾವಳಿಯ ಗುಣಮಟ್ಟವನ್ನು ಪರೀಕ್ಷಿಸಲಾಯಿತು. ಮುಖ್ಯವಾಗಿ ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿಯರನ್ನು ಸಂದರ್ಶಿಸಲಾಯಿತು. ಅವಿವಾಹಿತ ರೈತರ ಬಗ್ಗೆ ಅವರ ತಾಯಂದಿರನ್ನು ಸಂದರ್ಶಿಸಲಾಯಿತು ಮತ್ತು ಒಂದು ಪ್ರಕರಣದಲ್ಲಿ ಮಾತ್ರ ಮಗಳನ್ನು ಸಂದರ್ಶಿಸಲಾಯಿತು. ಜೊತೆಗೆ ಈ ಬಗ್ಗೆ ಬ್ಯಾಂಕ್ ಮ್ಯಾನೇಜರ್‌ಗಳ ಜೊತೆ, ರೈತ

ಸಂಘಟನೆಗಳ ಮುಂದಾಳುಗಳೊಂದಿಗೆ, ತಹಸೀಲ್ದಾರ್‌ಗಳೊಂದಿಗೆ ಹಾಗೂ ಪೋಲೀಸ್ ಸಿಬ್ಬಂದಿಯೊಂದಿಗೆ ಮಾತನಾಡಿ ಉಪದತ್ತಾಂಶವನ್ನು ಪಡೆದುಕೊಳ್ಳಲಾಯಿತು. ಬೇರೆ ರಾಜ್ಯಗಳಲ್ಲಿ ಸಂತ್ರಸ್ತರ ಬವಣೆಗಳನ್ನು ಹೇಗೆ ಪರಿಹರಿಸುತ್ತಾರೆಂದು ತಿಳಿದುಕೊಳ್ಳಲು ಆಂಧ್ರಪ್ರದೇಶದ ಅನಂತಪುರಕ್ಕೂ ಸಹ ಹೋಗಲಾಯಿತು.

ಅಧ್ಯಯನಕ್ಕಾಗಿ ರಾಜ್ಯದ ಕೋಲಾರ, ತುಮಕೂರು, ಮೈಸೂರು, ಮಂಡ್ಯ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಒಟ್ಟು 12 ತಾಲ್ಲೂಕುಗಳ 42 ಗ್ರಾಮಗಳನ್ನು ಆಯ್ದುಕೊಳ್ಳಲಾಗಿತ್ತು. ಈ ಗ್ರಾಮಗಳಲ್ಲಿನ ಒಟ್ಟು 50 ಆತ್ಮಹತ್ಯೆಯಿಂದ ನೊಂದ ಕುಟುಂಬಗಳ ದತ್ತಾಂಶವನ್ನು ಈ ಅಧ್ಯಯನಕ್ಕಾಗಿ ಸಂಗ್ರಹಿಸಲಾಯಿತು.

ಸಂದರ್ಶಿಸಲಾದ ಹೆಚ್ಚಿನ ಕುಟುಂಬಗಳು ಹಿಂದೂಳಿದ ವರ್ಗಗಳಿಗೆ ಸೇರಿದ್ದವು ಮತ್ತು 3 ಕುಟುಂಬಗಳು ಮಾತ್ರ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ್ದವು. ಆತ್ಮಹತ್ಯೆ ಮಾಡಿಕೊಂಡ ಹೆಚ್ಚಿನ ರೈತರು 31 ರಿಂದ 55 ವರ್ಷದ ಒಳಗಿನ ವಯೋಮಾನದವರಾಗಿದ್ದರು ಮತ್ತು ಇವರುಗಳ ವಿಧವೆ ಪತ್ನಿಯರೂ ಸಹ ಅದೇ ವಯೋಮಾನದವರಾಗಿದ್ದರು. ಹೆಚ್ಚಿನ ವಿಧವೆಯರು ಅನಕ್ಷರಸ್ಥರಾಗಿದ್ದರು. ಇವರುಗಳ ದಾಂಪತ್ಯ ಜೀವನದ ಅವಧಿಯೂ ಹೆಚ್ಚಿನ ಪ್ರಕರಣಗಳಲ್ಲಿ 16 ರಿಂದ 30 ವರ್ಷಗಳಾಗಿದ್ದವು. ಹೆಚ್ಚಿನವರಿಗೆ 1 ರಿಂದ 2 ಮಕ್ಕಳಿದ್ದವು. ಆತ್ಮಹತ್ಯೆ ಪ್ರಕರಣದ ನಂತರ ಈ ಸಂತ್ರಸ್ತ ಮಹಿಳೆಯರು ಹೆಚ್ಚಿನ ಪ್ರಕರಣಗಳಲ್ಲಿ ಕೃಷಿಯನ್ನೇ ಮುಂದುವರೆಸಿಕೊಂಡು ಹೋಗುತ್ತಿದ್ದರು. ಉಳಿದಂತೆ ಕೆಲವರು ಕೃಷಿ ಕಾರ್ಮಿಕರಾಗಿ ಹಾಗೂ ಮನೆ ಕೆಲಸಗಳಲ್ಲಿ ತೊಡಗಿಕೊಂಡಿದ್ದರು. ಹೆಚ್ಚಿನ ಕುಟುಂಬಗಳಲ್ಲಿ ಸಂತ್ರಸ್ತೆಯರು ತಾವೇ ಸ್ವಂತವಾಗಿ ಮನೆಯನ್ನು ನಡೆಸಿಕೊಂಡು ಹೋಗುತ್ತಿದ್ದರು ಮತ್ತು ಕೆಲವರು ಮಾತ್ರ ಒಟ್ಟು ಕುಟುಂಬಗಳಲ್ಲಿ ಉಳಿದಿದ್ದರು.

ಆತ್ಮಹತ್ಯೆ ಮಾಡಿಕೊಂಡ ಹೆಚ್ಚಿನ ರೈತರು ತಾವು ಸಾಲ ತೆಗೆದುಕೊಂಡ ಬಗ್ಗೆ ತಮ್ಮ ಪತ್ನಿಯರಿಗೆ ತಿಳಿಸಿರಲಿಲ್ಲ. ಆತ್ಮಹತ್ಯೆ ಮಾಡಿಕೊಳ್ಳುವ ಮೊದಲು ಈ ರೈತರಿಗೆ ಸಾಕಷ್ಟು ಜಮೀನು ಇತ್ತು. ಜೊತೆಗೆ ಆಯಾ ಪ್ರದೇಶಕ್ಕೆ ಅನುಗುಣವಾದ ವಿವಿಧ ಬೆಳೆಗಳನ್ನು ಬೆಳೆಯುತ್ತಲೂ ಇದ್ದರು. ಇವರ ಮನೆಗಳಲ್ಲಿ ಹಸು ಕರುಗಳು, ಎಮ್ಮೆಗಳು, ಕುರಿ ಮೇಕೆಗಳು, ಕೋಳಿಗಳು ಇತ್ಯಾದಿ ಪಶುಸಂಪತ್ತೂ ಸಹ ಇದ್ದವು. ಹೀಗಿದ್ದರೂ ಸಹ ಆತ್ಮಹತ್ಯೆಯಂತಹ ದುರ್ಭರ ಪ್ರಕರಣಗಳು ನಡೆದ ಕಾರಣ ಈ ಮನೆಗಳ ಸದಸ್ಯರ ಜೀವನಶೈಲಿ ಬದಲಾಗಿತ್ತಲ್ಲದೆ ಅವರ ಜಮೀನು ಹಾಗೂ ಪಶು ಸಂಪತ್ತೂ ಸಹ ಕಡಿಮೆಯಾದವು. ಸಾಮಾಜಿಕವಾಗಿ ಇವರುಗಳ ಅಂತಸ್ತು ಕೆಳಗಿಳಿಯಿತು. ಹೆಚ್ಚಿನ ಮಹಿಳೆಯರು ಅವರುಗಳ ಈಗಿನ ಪರಿಸ್ಥಿತಿಗೆ ಬಹಳ ಆತಂಕ ಪಡುತ್ತಿದ್ದಾರೆ, ಸಂಕಷ್ಟಕ್ಕೀಡಾಗಿದ್ದಾರೆ, ಮಾನಸಿಕವಾಗಿ ಕುಗ್ಗಿದ್ದಾರೆ ಹಾಗೂ ತೀರಿಸಬೇಕಾದ ಸಾಲದ ಬಗ್ಗೆ ಯೋಚಿಸಿ ಸೊರಗಿ ಹೋಗಿದ್ದಾರೆ.

## ಸರ್ಕಾರದ ಪರಿಹಾರೋಪಾಯಗಳು

ಕರ್ನಾಟಕ ರಾಜ್ಯ ಸರ್ಕಾರವು ದೇಶದ ಬೆನ್ನೆಲುಬಾದ ರೈತರ ಈ ಸಂಕಷ್ಟವನ್ನು ನೋಡಲಾರದೆ ಕೆಲವು ಪರಿಹಾರ ಕ್ರಮಗಳನ್ನು ಮತ್ತು ಪುನರ್ ವಸತಿ ವ್ಯವಸ್ಥೆಯನ್ನು ಮಾಡಿದೆ. ವಿವರಗಳು ಈ ರೀತಿ ಇದೆ:

1. ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ 5 ಲಕ್ಷ ರೂಗಳ ಪರಿಹಾರ ಧನ
2. ಆತ್ಮಹತ್ಯೆ ಮಾಡಿಕೊಂಡ ರೈತರ ಅಂತಿಮ ಕ್ರಿಯೆಗಳನ್ನು ನೆರವೇರಿಸಲು 5 ಸಾವಿರ ರೂಗಳ ತಕ್ಷಣದ ಪರಿಹಾರ
3. ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿಯರಿಗೆ 2 ಸಾವಿರ ರೂಗಳ ಮಾಸಿಕ ವಿಧವಾ ವೇತನ

ಸರ್ಕಾರದ ಈ ಪರಿಹಾರಗಳನ್ನು ರೈತರ ವಿಧವೆಯರಿಗೆ ಒದಗಿಸಲು ಸ್ಥಳೀಯ ಶಾಲಾ ಶಿಕ್ಷಕರು, ಸ್ಥಳೀಯ ಆಸ್ಪತ್ರೆಯ ವೈದ್ಯರು, ಬಂಧು ಮಿತ್ರರು, ರೈತ ಸಂಘಟನೆಗಳು, ಸ್ಥಳೀಯ ರಾಜಕೀಯ ಧುರೀಣರು ಇವರುಗಳು ಸಹಾಯ ಮಾಡಿದ್ದಾರೆ. 49 ಪ್ರಕರಣಗಳ ಪೈಕಿ 25 ಪ್ರಕರಣಗಳಲ್ಲಿ ಈ ಮಹಿಳೆಯರನ್ನು ಪೋಲೀಸ್ ಸಿಬ್ಬಂದಿ ಹೊರತಾಗಿ ಉಳಿದ

ಯಾವ ಇಲಾಖೆಗಳ ಅಧಿಕಾರಿಗಳೂ ಸಹ ಭೇಟಿಯಾಗಲಿಲ್ಲ. ರಾಜ್ಯದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಇನ್ನೂ ಅನೇಕ ರೈತ ಸಂಘಟನೆಗಳು ಸಕ್ರಿಯವಾಗಿದ್ದರೂ ಸಹ, ಈ ಸಂಘಟನೆಗಳು ರೈತ ವಿಧವೆಯರಿಗೆ ಪರಿಹಾರವನ್ನು ಕೊಡಿಸಲು ಹೆಚ್ಚಿನ ಆಸಕ್ತಿ ವಹಿಸದೇ ಇದ್ದುದು ಸಂಶೋಧಕರಿಗೆ ಆಶ್ಚರ್ಯದ ಸಂಗತಿಯಾಗಿದೆ.

ರೈತ ಮಹಿಳೆಯರಿಗೆ 5 ಲಕ್ಷ ರೂಪಾಯಿಗಳ ಪರಿಹಾರ ಧನವನ್ನು ನೀಡಲು ಸರ್ಕಾರವು ಕಂದಾಯ ಇಲಾಖೆ, ಕೃಷಿ ಇಲಾಖೆ, ಪೋಲೀಸ್ ಇಲಾಖೆ ಇತ್ಯಾದಿಗಳ ಅಧಿಕಾರಿಗಳನ್ನೊಳಗೊಂಡ ಉಪವಿಭಾಗೀಯ ಮಟ್ಟದ ಸಮಿತಿಗಳನ್ನು ರಚಿಸಿದೆ. ಈ ಸಮಿತಿಗಳು ಆತ್ಮಹತ್ಯೆಗೆ ಸಂಬಂಧಪಟ್ಟಂತಹ ಅಗತ್ಯ ದಾಖಲೆಗಳನ್ನು ಪರಿಶೀಲಿಸಿದ ನಂತರ ಈ ಪರಿಹಾರ ಧನವನ್ನು ಸಂತ್ರಸ್ತ ಕುಟುಂಬಗಳಿಗೆ ಬಿಡುಗಡೆ ಮಾಡುತ್ತವೆ. ದಾಖಲೆಗಳು ಸಮರ್ಪಕವಾಗಿಲ್ಲದ ಪಕ್ಷದಲ್ಲಿ ಅಂತಹ ಪ್ರಕರಣಗಳು ತಿರಸ್ಕೃತಗೊಳ್ಳುತ್ತವೆ. ಈ ಸಮೀಕ್ಷಾ ಅಧ್ಯಯನದಲ್ಲಿ ದೊರಕಿದ ಫಲಿತಾಂಶದ ಪ್ರಕಾರ 50 ಸಂತ್ರಸ್ತ ಕುಟುಂಬಗಳ ಪೈಕಿ 37 ಕುಟುಂಬಗಳಿಗೆ 5 ಲಕ್ಷ ರೂಗಳ ಪರಿಹಾರ ಧನ ದೊರಕಿದೆ. ಆ ಪೈಕಿ 5 ಕುಟುಂಬಗಳಿಗೆ ಅಂತ್ಯಕ್ರಿಯೆ ಪರಿಹಾರ ಧನ ಸಿಕ್ಕಿದೆ ಮತ್ತು 28 ವಿಧವೆಯರಿಗೆ ವಿಧವಾ ವೇತನ ದೊರಕುತ್ತಿದೆ. ಉಳಿದಂತೆ 3 ಪ್ರಕರಣಗಳಲ್ಲಿ ಸಂತ್ರಸ್ತ ಕುಟುಂಬಗಳ ಮಕ್ಕಳಿಗೆ ವಿದ್ಯಾಭ್ಯಾಸದ ಸೌಲಭ್ಯ ದೊರಕಿದೆ.

ಸಂತ್ರಸ್ತ ಕುಟುಂಬಗಳ ಎಲ್ಲರಿಗೂ ಪಡಿತರ ಸೌಲಭ್ಯ ದೊರೆತಿದೆ. ಸುಮಾರು 14 ವಿಧವೆಯರಿಗೆ ನರೇಗಾ ಯೋಜನೆಯ ಕೆಲಸದ ಚೀಟಿ ದೊರೆತಿದೆ. ಸಹಕಾರ ಸಂಘಗಳಲ್ಲಿ 20 ಸಾಲದ ಪ್ರಕರಣಗಳು, ವಾಣಿಜ್ಯ ಬ್ಯಾಂಕುಗಳಲ್ಲಿ 27 ಸಾಲದ ಪ್ರಕರಣಗಳು, ಲೇವಾದೇವಿಯವರಲ್ಲಿ 34 ಸಾಲದ ಪ್ರಕರಣಗಳು ಮತ್ತು ಇತರೆ ಸಣ್ಣಪುಟ್ಟ ಸಾಲ ನೀಡಿಕೆದಾರರಲ್ಲಿ 14 ಪ್ರಕರಣಗಳು ಕಂಡುಬಂದಿವೆ. ಕೆಲವು ಸಾಲದ ಪ್ರಕರಣಗಳು ಒಂದೇ ಬಾರಿ ಇಂತಿಷ್ಟು ದುಡ್ಡನ್ನು ನೀಡಿ ಸಾಲ ಇಲ್ಲದಂತೆ ಮಾಡಿಕೊಳ್ಳುವ ರೀತಿಯಲ್ಲಿ ಇತ್ಯರ್ಥವಾಗಿದ್ದವು.

ಸಂತ್ರಸ್ತ ಮಹಿಳೆಯರು ಸ್ವಾವಲಂಬಿಗಳಾಗುವ ಸಲುವಾಗಿ ಸ್ವಯಂ ಸೇವಾ ಗುಂಪುಗಳಲ್ಲೂ ಸಹ ಸದಸ್ಯತ್ವವನ್ನು 19 ಪ್ರಕರಣಗಳಲ್ಲಿ ಪಡೆದುಕೊಂಡಿದ್ದವು. ಈ ಮಹಿಳೆಯರ ಪೈಕಿ 3 ಮಹಿಳೆಯರು ಗಂಡನ ಸಾವಿಗೆ ಅವರೇ ಕಾರಣ ಎಂಬ ಅಪವಾದವನ್ನು ಸಮುದಾಯದಿಂದ ಪಡೆದುಕೊಂಡಿದ್ದರು. ಅಧ್ಯಯನಕಾರರು ಗಮನಿಸಿದ್ದೇನೆಂದರೆ ಈ ಮಹಿಳೆಯರು ಅಪವಾದದ ಬಗ್ಗೆ ಚಿಂತಿಸದೆ ಸಾಮಾಜಿಕ ಕಾರ್ಯಕಲಾಪಗಳಲ್ಲಿ ಸಕ್ರಿಯರಾಗಿದ್ದರು. ಜೊತೆಗೆ ಹೆಚ್ಚಿನ ಸಂತ್ರಸ್ತೆಯರು ಹಿಂದೂ ಸಂಪ್ರದಾಯದ ಪ್ರಕಾರ ಗೃಹಿಣಿಯ ಎಲ್ಲಾ ಚಿಹ್ನೆಗಳನ್ನೂ ಸಹ ಧರಿಸಿಕೊಂಡಿದ್ದರು. ಕೆಲವು ದಶಕಗಳ ಹಿಂದೆ ಇದನ್ನು ಯೋಚಿಸಲೂ ಸಹ ಆಗುತ್ತಿರಲಿಲ್ಲ.

ಈ ಅಧ್ಯಯನದಿಂದ ಕಂಡುಬಂದ ಕೆಲವು ಸಾಮಾನ್ಯ ಅಂಶಗಳು ಈ ರೀತಿ ಇವೆ:

1. ಪರಿಹಾರಕ್ಕಾಗಿ ಇರುವ ಅರ್ಹತಾ ಅಂಶಗಳು ಮತ್ತು ಪ್ರಕರಣವು ತಿರಸ್ಕೃತವಾಗುವುದಕ್ಕೆ ಇರುವ ಕಾರಣಗಳು ಇವುಗಳು ಸಮರ್ಪಕವಾಗಿಲ್ಲದಿರುವುದು.
2. ಸಂತ್ರಸ್ತ ಕುಟುಂಬಗಳಿಗೆ ವಿಸ್ತರಿಸಬೇಕಾದ ಬೆಂಬಲವು ನಿಧಾನಗತಿಯಲ್ಲಿ ಸಾಗುತ್ತಿರುವುದು.
3. ಪರಿಹಾರ ಯೋಜನೆಯನ್ನು ಪೂರ್ಣವಾಗಿ ಅನುಷ್ಠಾನಗೊಳಿಸದೇ ಅರ್ಧಂಬರ್ಧ ಕಾರ್ಯಗತಗೊಳಿಸುತ್ತಿರುವುದು.
4. ಸಂತ್ರಸ್ತೆಯರಿಗೆ ದಾಖಲೆಗಳನ್ನು ಒದಗಿಸಲು ನಾಗರಿಕ ಸಮುದಾಯವು ಮುಂದೆ ಬರಬೇಕಾಗಿದ್ದು, ಇದಕ್ಕಾಗಿ ಯಾವ ನಿಯಮಿತ ಪದ್ಧತಿಯೂ ಸಹ ಇಲ್ಲದಿರುವುದು.
5. ಪ್ರಸ್ತುತದಲ್ಲಿ ಗ್ರಾಮ ಪಂಚಾಯಿತಿಗಳು ಈ ಬಗ್ಗೆ ಸಕ್ರಿಯವಾಗಿ ಒಳಗೊಳ್ಳದೆ ಇರುವುದು.
6. ಸಂತ್ರಸ್ತೆಯರಿಗೆ ಪರಿಹಾರ ಕೊಡಿಸುವಲ್ಲಿ ಮತ್ತು ಅವರಿಗೆ ಪುನರ್ ವಸತಿ ಕಲ್ಪಿಸುವಲ್ಲಿ ವಿವಿಧ ಸಂಸ್ಥೆಗಳ ನಡುವೆ ಸಂಯೋಜನೆ ಇಲ್ಲದಿರುವುದು.

7. ಆತ್ಮಹತ್ಯೆಗೆ ಒಳಗಾದ ರೈತನು ಅವಿವಾಹಿತನಾಗಿದ್ದ ಪಕ್ಷದಲ್ಲಿ ಆತನ ತಾಯಿಗೆ ಪರಿಹಾರ ನೀಡುವ ವ್ಯವಸ್ಥೆಯನ್ನು ಕಲ್ಪಿಸದೆ ಇರುವುದು.

ಅಧ್ಯಯನದ ಫಲಿತಾಂಶದ ಆಧಾರದ ಮೇರೆಗೆ ಮಕಾಮ್ ಸಂಸ್ಥೆಯು ಮಾಡುತ್ತಿರುವ ಕೆಲವು ಶಿಫಾರಸ್ಸುಗಳು ಈ ರೀತಿ ಇವೆ.

1. ಸಂತ್ರಸ್ತ ಮಹಿಳೆಯರಿಗೆ ಆತ್ಮಹತ್ಯೆ ಮಾಡಿಕೊಂಡ ರೈತನು ಮಾಡಿಕೊಂಡಿದ್ದ ಸಾಲದ (ಬ್ಯಾಂಕುಗಳಿಂದ ಹಾಗೂ ಖಾಸಗಿಯವರಿಂದ) ಹೊಣೆಗಾರಿಕೆಯನ್ನು ತಪ್ಪಿಸುವುದು.
2. ಆತ್ಮಹತ್ಯೆ ಮಾಡಿಕೊಂಡ ರೈತನು ಹೊಂದಿದ್ದ ಜಮೀನಿನ ಹಕ್ಕುದಾರಿಕೆಯನ್ನು ಸಂತ್ರಸ್ತ ಮಹಿಳೆಯರಿಗೆ ನೀಡುವುದು.
3. ಸಂತ್ರಸ್ತ ಮಹಿಳೆಯರು ನೋಡಿದಾಗಲೇ ಗೊತ್ತಾಗುವಂತೆ ಖಿನ್ನತೆಗೆ ಒಳಗಾಗಿದ್ದರೂ ಮತ್ತು ಆತ್ಮಹತ್ಯೆ ಮಾಡಿಕೊಳ್ಳುವಂತೆ ತೋರಿಬಂದರೂ ಸಹ ಅವರುಗಳಿಗೆ ಮಾನಸಿಕ ಹಾಗೂ ಸಾಮಾಜಿಕ ಬೆಂಬಲ ನೀಡುವ ಯಾವ ವ್ಯವಸ್ಥೆಯೂ ಸಹ ಇಲ್ಲ, ಇದನ್ನು ತಪ್ಪಿಸಬೇಕು.
4. ಸಂತ್ರಸ್ತ ಮಹಿಳೆಯರು ಆತ್ಮಹತ್ಯೆಗೆ ಒಳಗಾದ ರೈತನು ಮಾಡುತ್ತಿದ್ದ ಕೃಷಿ ಕಾರ್ಯವನ್ನು ಮುಂದುವರಿಸಲು ಸಾಧ್ಯವಾಗದಿದ್ದರೂ ಸಹ, ಆ ಮಹಿಳೆಯರಿಗೆ ಬೇರೆ ರೀತಿಯ ಪುನರ್ ವಸತಿಯನ್ನು ಕಲ್ಪಿಸುವ ವ್ಯವಸ್ಥೆ ಮಾಡಬೇಕು.
5. ಸಂತ್ರಸ್ತ ಮಹಿಳೆಯರಿಗೆ ಸುಸ್ಥಿರ ಜೀವನೋಪಾಯದ ಬಗ್ಗೆ ತಿಳಿಸಿಕೊಡುವ ಯಾವ ವಿಸ್ತರಣಾ ಸೇವೆಯನ್ನೂ ಸಹ ಒದಗಿಸಿಲ್ಲ, ಇದನ್ನು ಒದಗಿಸಬೇಕು.
6. ಕರ್ನಾಟಕದಲ್ಲಿ ನಾಗರಿಕ ಸಮುದಾಯಗಳು ಸಂತ್ರಸ್ತ ಮಹಿಳೆಯರಿಗೆ ಸಕ್ರಿಯವಾಗಿ ನೆರವು ನೀಡುವಂತೆ ಮಾಡಬೇಕು.
7. ಎಲ್ಲಾ ಗ್ರಾಮೀಣ ಕುಟುಂಬಗಳಿಗೂ ಸಹ ಆರ್ಥಿಕ ಸಾಕ್ಷರತೆಯನ್ನು ಕಲಿಸುವ ಪ್ರಯತ್ನ ಆಗಿಲ್ಲ ಇದನ್ನು ಮಾಡಬೇಕು.
8. ಸಂತ್ರಸ್ತ ಮಹಿಳೆಯರಿಗೆ ತೃಪ್ತಿದಾಯಕ ಮಟ್ಟದಲ್ಲಿ ವಸತಿ ವ್ಯವಸ್ಥೆ ಮತ್ತು ಆರೋಗ್ಯ ವ್ಯವಸ್ಥೆಯನ್ನು ಕಲ್ಪಿಸಿಲ್ಲಲ್ಲಿದನ್ನು ಸಲ್ಪಿಸಬೇಕು.
9. ಸಂತ್ರಸ್ತ ಮಹಿಳೆಯರನ್ನು ಸ್ವಾಭಾವಿಕ ವಿಪತ್ತುಗಳಿಂದ ಮತ್ತು ಬೆಳೆ ನಷ್ಟದಿಂದ ಪಾರುಮಾಡುವ ಸಂರಕ್ಷಣಾ ವ್ಯವಸ್ಥೆ ಇಲ್ಲ, ಇದನ್ನು ಒದಗಿಸಬೇಕು.
10. ಸಂತ್ರಸ್ತ ಮಹಿಳೆಯರು ಬೆಳೆದ ಉತ್ಪನ್ನಗಳ ಸಂಗ್ರಹಣೆಗೆ ಅವಕಾಶ ಇಲ್ಲದಿರುವುದು ಮತ್ತು ಲಾಭದಾಯಕ ಬೆಲೆಗೆ ಮಾರಾಟ ಮಾಡುವ ಸೌಲಭ್ಯ ಇಲ್ಲದಿರುವುದು. ಇವುಗಳನ್ನು ಒದಗಿಸಬೇಕು.

--------*****--------

ಈ ಸಮೀಕ್ಷಾ ಅಧ್ಯಯನದ ಫಲಿತಾಂಶಗಳನ್ನು ಮಕಾಮ್ ಸಂಸ್ಥೆಯ ಶ್ರೀಮತಿ ಕವಿತಾ ಕುರುಗಂಟಿ ಹಾಗೂ ಶ್ರೀಮತಿ ಕವಿತಾ ಶ್ರೀನಿವಾಸನ್ ಇವರುಗಳು ಸವಿಸ್ತಾರವಾಗಿ ನಿರೂಪಿಸಿದರು. ಇದರ ಆಧಾರದ ಮೇರೆಗೆ ಸಭೆಗೆ ಆಗಮಿಸಿದ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಹಾಗೂ ರೈತ ಮುಖಂಡರು ಚರ್ಚೆಯನ್ನು ಪ್ರಾರಂಭಿಸಿದರು. ಚರ್ಚೆಯ ಪ್ರಾರಂಭದಲ್ಲಿ ಮಾತನಾಡಿದ ಕೃಷಿ ಬೆಲೆ ಆಯೋಗದ ಅಧ್ಯಕ್ಷರು ರೈತ ಎನ್ನುವುದಕ್ಕೆ ಸರಿಯಾದ ವಿವರಣೆ ಬೇಕೆಂದು ಏಕೆಂದರೆ ಕೃಷಿ ಭೂಮಿಯನ್ನು ಹೊಂದಿರುವವನು ಮಾತ್ರ ರೈತನಾಗುವುದಿಲ್ಲ. ಸಾಗುವಳಿ ಕಾರ್ಯದಲ್ಲಿ

ನಿರತರಾಗುವ ಕೃಷಿ ಕಾರ್ಮಿಕರೂ ಸಹ ರೈತರೇ ಆಗಿರುತ್ತಾರೆ. ಇದೂ ಅಲ್ಲದೇ ಕೃಷಿಗೆ ಸಂಬಂಧಿಸಿದ ಬೇರೆ ಉದ್ಯಮಿಗಳು ಅಂದರೆ ಪಶುಸಂಗೋಪನೆ, ಮೀನುಗಾರಿಕೆ, ರೇಷ್ಮೆ ಕೃಷಿ, ಕೋಳಿ ಸಾಕಾಣಿಕೆ, ಕುರಿ ಮತ್ತು ಮೇಕೆ ಸಾಕಾಣಿಕೆ, ಹಂದಿ ಸಾಕಾಣಿಕೆ ಇತ್ಯಾದಿಗಳನ್ನು ಮಾಡುವವರೂ ಸಹ ಕೃಷಿಕರೇ ಆಗಿರುತ್ತಾರೆ. ಜೊತೆಗೆ ಕೃಷಿಗೆ ಬೇಕಾದ ಪರಿಕರಗಳನ್ನು ಅಂದರೆ ನೇಗಿಲುಗಳು, ಕುಂಟೆಗಳು, ಇತರ ಕೃಷಿ ಪರಿಕರಗಳು ಇತ್ಯಾದಿಗಳನ್ನು ಸಾಗುವಳಿಗೆ ಒದಗಿಸುವವರೂ ಸಹ ಕೃಷಿ ಉದ್ಯಮಕ್ಕೆ ಸೇರಿದವರೇ ಆಗಿರುತ್ತಾರೆ. ಆದ್ದರಿಂದ ಇವರುಗಳನ್ನೂ ಸಹ ರೈತ ಎನ್ನುವ ಪರಿಭಾಷೆಗೆ ಸೇರಿಸಿ ರೈತರ ಆತ್ಮಹತ್ಯೆಗೆ ಸರ್ಕಾರವು ನೀಡುವ ಎಲ್ಲಾ ಸೌಲಭ್ಯಗಳನ್ನು ಇವರಿಗೂ ಸಹ ನೀಡಬೇಕೆಂದು ಅವರು ಅಭಿಪ್ರಾಯಪಟ್ಟರು.

ಆತ್ಮಹತ್ಯೆಯು ಕಾನೂನಿನ ವ್ಯಾಪ್ತಿಗೆ ಬರುವುದರಿಂದ ಪರಿಹಾರ ನೀಡುವಿಕೆಯಲ್ಲಿ ಪೋಲೀಸ್ ಇಲಾಖೆಯ ಪಾತ್ರವೂ ಸಹ ಮಹತ್ವದ್ದಾಗಿದೆ. ಸಭೆಗೆ ಪೋಲೀಸ್ ಇಲಾಖೆಯ ಹೆಚ್ಚುವರಿ ಮಹಾನಿರೀಕ್ಷಕರಾದ ಡಾ.ಜಗದೀಶ್ ರವರು ಆಗಮಿಸಿದ್ದರು. ಈ ಬಗ್ಗೆ ಮಾತನಾಡಲು ಅಧ್ಯಕ್ಷರು ಅವರನ್ನು ಕೋರಿದರು. ಡಾ.ಜಗದೀಶ್ ರವರು ಇದಕ್ಕೆ ಸ್ಪಂದಿಸಿ ಆತ್ಮಹತ್ಯೆ ಬಗ್ಗೆ ಬೆಳಕು ಚೆಲ್ಲಿದರು. ಪೋಲೀಸ್ ಇಲಾಖೆಯ ದತ್ತಾಂಶಕ್ಕೂ ಮತ್ತು ಕೃಷಿ ಇಲಾಖೆಯ ದತ್ತಾಂಶಕ್ಕೂ ವ್ಯತ್ಯಾಸಗಳು ಮೇಲ್ನೋಟಕ್ಕೆ ಕಂಡುಬಂದಿವೆ. ರಾಷ್ಟ್ರಮಟ್ಟದ ಹಾಗೂ ರಾಜ್ಯಮಟ್ಟದ ಅಪರಾಧ ದಾಖಲೆಗಳ ಪ್ರಕಾರ ರೈತರ ಆತ್ಮಹತ್ಯೆಗಳು ವೃತ್ತಿನಿರತರ ಆತ್ಮಹತ್ಯೆಗಳೆಂದು ಪರಿಗಣಿಸಲ್ಪಡುತ್ತದೆ. ಕೃಷಿ ಇಲಾಖೆಯು ರೈತ ಎಂಬ ಪದಕ್ಕೆ ಸರಿಯಾದ ವ್ಯಾಖ್ಯಾನ ಇನ್ನೂ ಮಾಡಿಲ್ಲದ ಕಾರಣ ಕೃಷಿ ಕಾರ್ಮಿಕರು ಹಾಗೂ ಈ ಮೊದಲೇ ಹೇಳಿದಂತೆ ಈ ಉದ್ಯಮಕ್ಕೆ ಸೇರಿದ ಇತರರು ಯೋಜನೆಯ ವ್ಯಾಪ್ತಿಯಿಂದ ದೂರ ಉಳಿಯುತ್ತಾರೆ. ಆದ್ದರಿಂದ ಇದನ್ನು ಸರಿಪಡಿಸಿಕೊಳ್ಳಬೇಕೆಂದರು. ಪರಿಹಾರ ಯೋಜನೆಯು ಈ ಎಲ್ಲರಿಗೂ ಅನುಕೂಲ ಒದಗಿಸಬೇಕೆಂಬ ದೃಷ್ಟಿಯಿಂದ ಒಂದು ಏಕ ಸೂತ್ರದ ಕಾರ್ಯವಿಧಾನವನ್ನು ಅನುಸರಿಸಬೇಕೆಂದು ಶ್ರೀಯುತರು ತಿಳಿಸಿದರು.

ಈ ಮಧ್ಯೆ ಮಾತನಾಡಿದ ಆಯೋಗದ ಅಧ್ಯಕ್ಷರು ಕೆಲವು ಆತ್ಮಹತ್ಯೆ ಪ್ರಕರಣಗಳು ತಿರಸ್ಕೃತವಾಗಲು ಕಾರಣಗಳೇನು ಎಂದು ಕೃಷಿ ಇಲಾಖೆಯ ಸಂಬಂಧಪಟ್ಟ ವಿಭಾಗವನ್ನು ಪ್ರಶ್ನಿಸಿದರು. ಈ ಪ್ರಕರಣಗಳಲ್ಲಿ ಯಾವ ಅರ್ಹತಾ ಅಂಶಗಳು ಇರಲಿಲ್ಲ ಎಂಬುದನ್ನು ರೈತರಿಗೆ ಗೊತ್ತಾಗುವಂತೆ ಮಾಡಬೇಕು ಎಂದು ಅವರು ಹೇಳಿದರು.

ಮಕಾಮ್ ಸಂಸ್ಥೆಯ ಪ್ರತಿನಿಧಿಗಳು ಈ ಹಂತದಲ್ಲಿ ಮಾತನಾಡಿ ಕೆಲವು ಪ್ರಕರಣಗಳ ಇತ್ಯರ್ಥವು ಶೀಘ್ರವಾಗಿ ಆಗದಿರುವುದಕ್ಕೆ ವಿಧಿವಿಜ್ಞಾನ ಪ್ರಯೋಗಾಲಯಗಳಿಂದ ಫಲಿತಾಂಶಗಳು ವಿಳಂಬವಾಗಿ ಬರುವುದೇ ಕಾರಣವೆಂದರು. ಜೊತೆಗೆ ಮರಣೋತ್ತರ ವರದಿಯನ್ನು ಬರೆಯುವುದಕ್ಕೆ ಮುಂಚಿತವಾಗಿ ವೈದ್ಯರು ಪ್ರಯೋಗಾಲಯಗಳಿಂದ ನಿಖರ ಮಾಹಿತಿಯನ್ನು ಅಪೇಕ್ಷಿಸುತ್ತಾರೆಂದರು. ಒಟ್ಟಿನಲ್ಲಿ ಈ ಸಂಬಂಧದಲ್ಲಿ ಭಾಗೀದಾರ ಸಂಸ್ಥೆಗಳ ನಡುವೆ ಉತ್ತಮ ಸಂಯೋಜನೆ ಇಲ್ಲದಿರುವುದು ಇದ್ದಕ್ಕೆಲ್ಲಾ ಮೂಲ ಕಾರಣವಾಗಿದೆ ಎಂದರು.

ಕಾರ್ಯಾಗಾರದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಹನುಮನಗೌಡ ಬೆಳಗುರ್ಕಿರವರು ಸಭೆಯಲ್ಲಿ ಭಾಗವಹಿಸಿದ ಸರ್ಕಾರದ ಕಂದಾಯ ಇಲಾಖೆಯ ಅಪರ ಕಾರ್ಯದರ್ಶಿಗಳಾದ ಶ್ರೀ ಪರಂಧಾಮಯ್ಯ ರವರನ್ನು ಈ ಬಗ್ಗೆ ಕೆಲವು ಮಾಹಿತಿಯನ್ನು ನೀಡಲು ಕೋರಿದರು. ಜಿಲ್ಲಾಮಟ್ಟದಲ್ಲಿ ಮತ್ತು ರಾಜ್ಯಮಟ್ಟದಲ್ಲಿ ಪ್ರಸ್ತುತದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಮಿತಿಗಳು ಪೂರ್ಣವಾಗಿ ಕಾರ್ಯೋನ್ಮುಖವಾಗಬೇಕು ಎಂದು ಶ್ರೀ ಪರಂಧಾಮಯ್ಯನವರು ಹೇಳಿದರು. ಹೀಗಾದಾಗ ಮಾತ್ರ ಪ್ರಕರಣಗಳನ್ನು ಉಸ್ತುವಾರಿ ಮಾಡಬಹುದು ಮತ್ತು ಪರಿಸ್ಥಿತಿಯನ್ನು ಸೂಕ್ತವಾಗಿ ವಿಮರ್ಶಿಸಬಹುದೆಂದರು. ರೈತರ ಆತ್ಮಹತ್ಯೆಗಳನ್ನು ತಡೆಗಟ್ಟಲು ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಪರಿಹಾರ ಹಾಗೂ ಪುನರ್ ವಸತಿ ಸೌಲಭ್ಯಗಳು ವಿವಿಧ ಸಂಸ್ಥೆಗಳ ಉತ್ತಮ ಸಂಯೋಜನೆಗಳಿಂದಾಗಿ ಎಲ್ಲಾ ಸಂತ್ರಸ್ತ ಕುಟುಂಬಗಳಿಗೂ ದೊರಕಬೇಕು ಎಂದು ಅವರು ಹೇಳಿದರು. ಸಮಿತಿಗಳಲ್ಲಿ ರೈತ ಸಂಘಟನಾ ಪ್ರತಿನಿಧಿಗಳು ಹಾಗೂ ನಾಗರೀಕ ಸಮುದಾಯದ

ಪ್ರತಿನಿಧಿಗಳೂ ಸಹ ಇರಬೇಕೆಂದು ಸಭೆಯು ಅಭಿಪ್ರಾಯಪಟ್ಟಿತು. ಸಂತ್ರಸ್ತ ಕುಟುಂಬಗಳಿಗೆ ಭರವಸೆಯುಕ್ತ ಬೆಂಬಲವು ಸಕಾಲದಲ್ಲಿ ದೊರಕುವುದು ಅತೀ ಮುಖ್ಯವೆಂದು ಇಡೀ ಸಭೆಯು ಘೋಷಿಸಿತು.

ಸಂತ್ರಸ್ತರಿಗೆ ಗುರುತಿನ ಚೀಟಿ ನೀಡಿದ ಪಕ್ಷದಲ್ಲಿ ಸರ್ಕಾರದಿಂದ ದೊರೆಯಬಹುದಾದ ಎಲ್ಲಾ ಸವಲತ್ತುಗಳನ್ನೂ ಅವರು ಸುಲಭವಾಗಿ ಪಡೆಯಬಹುದಾಗಿದೆ. ಜೊತೆಗೆ ಗುರುತಿನ ಚೀಟಿ ನೀಡುವ ಸಮಯದಲ್ಲಿ ದತ್ತಾಂಶ ಆಧಾರವನ್ನೂ ಸಹ ಅಭಿವೃದ್ಧಿ ಪಡಿಸಬಹುದಾಗಿದೆ. ಆದ್ದರಿಂದ ಈಗಾಗಲೇ ಮಹಾರಾಷ್ಟ್ರದಲ್ಲಿ ಪ್ರಚಲಿತದಲ್ಲಿರುವಂತೆ ನಮ್ಮ ರಾಜ್ಯದಲ್ಲೂ ಸಹ ಸಂತ್ರಸ್ತರಿಗೆ ಗುರುತಿನ ಚೀಟಿ ನೀಡುವ ಬಗ್ಗೆ ಕಂದಾಯ ಇಲಾಖೆಯು ಗಮನ ಹರಿಸಬೇಕೆಂದು ಕಂದಾಯ ಇಲಾಖೆಯ ಪ್ರತಿನಿಧಿಗಳಿಗೆ ತಿಳಿಸಲಾಯಿತು.

ಮಕಾಮ್ ಸಂಸ್ಥೆಯ ಪ್ರತಿನಿಧಿಗಳು ಮಾತನಾಡಿ ಸಂತ್ರಸ್ತ ಕುಟುಂಬಗಳು ಹೊಂದಿರುವ ಸಾಲವನ್ನು ಆಂಧ್ರಪ್ರದೇಶ ಸರ್ಕಾರವು ಅನುಸರಿಸುತ್ತಿರುವ ಮಾದರಿಯಲ್ಲಿ ಒಂದೇ ಬಾರಿಗೆ ತೀರಿಸುವ ಪದ್ಧತಿಯನ್ನು ಕರ್ನಾಟಕದಲ್ಲೂ ಸಹ ಜಾರಿಗೆ ತರಲು ಶಿಫಾರಸ್ಸನ್ನು ಮಾಡಲು ಸಭೆಯನ್ನು ಕೋರಿದರು. ಆಂಧ್ರಪ್ರದೇಶದಲ್ಲಿ ಸಂತ್ರಸ್ತ ಕುಟುಂಬಗಳು ಹೊಂದಿರಬಹುದಾದ ಗರಿಷ್ಠ 1.5 ಲಕ್ಷ ರೂಪಾಯಿಗಳ ಸಾಲವನ್ನು ಸರ್ಕಾರವು ಒಮ್ಮೆ ಮಾತ್ರ ಮನ್ನಾ ಮಾಡಬಹುದಾದ ಪದ್ಧತಿಯನ್ನು ಅನುಸರಿಸಿ ತೀರಿಸಬಹುದಾಗಿದೆ. ಜಿಲ್ಲಾಮಟ್ಟದ ಸಮಿತಿಯು ಪ್ರತಿಯೊಂದು ಪ್ರಕರಣದಲ್ಲೂ ಸಹ ಪರಿಸ್ಥಿತಿಯನ್ನು ಸೂಕ್ತ ರೀತಿಯಲ್ಲಿ ಅನುಸರಿಸಿ ಈ ಬಗ್ಗೆ ನಿರ್ಧಾರ ಕೈಗೊಳ್ಳಬಹುದಾಗಿದೆ. ಈ ಸಾಲದಲ್ಲಿ ಸಾಂಸ್ಥಿಕ ಸಾಲ ಹಾಗೂ ಖಾಸಗಿ ಸಾಲ ಈ ಎರಡೂ ಸೇರಿರುತ್ತವೆ. ಇದರ ಮುಖ್ಯ ಉದ್ದೇಶವೇನೆಂದರೆ ಸಂತ್ರಸ್ತ ಮಹಿಳೆಯರು ತಾನು ಮಾಡಿಲ್ಲದ ಸಾಲದ ಹೊರೆಯಿಂದ ವಿಮುಕ್ತಿಗೊಂಡು ಜೀವನೋಪಾಯವನ್ನು ಹೊಸದಾಗಿ ಕಂಡುಕೊಳ್ಳುವ ಸಲುವಾಗಿ ಹೊಸ ಸಾಲಗಳನ್ನು ಮಾಡಿಕೊಳ್ಳಬಹುದೆಂಬುದಾಗಿದೆ.

ಸಂಸ್ಥೆಯ ಪ್ರತಿನಿಧಿಗಳು ಮುಂದುವರೆದು ಮಾತನಾಡಿ ಸಂತ್ರಸ್ತ ಮಹಿಳೆಯರಿಗೆ ನೀಡಿವ ಪರಿಹಾರ ಧನವನ್ನು ಎರಡು ಭಾಗವಾಗಿ ವಿಂಗಡಿಸಿ, ಮೊದಲನೆಯ ಭಾಗವನ್ನು ನಿಶ್ಚಿತ ಠೇವಣಿಯಲ್ಲಿಡುವುದು ಸೂಕ್ತವೆಂದರು. ಉಳಿದರ್ಧ ಭಾಗವನ್ನು ಸಂತ್ರಸ್ತ ಮಹಿಳೆಯರು ಕುಟುಂಬದ ಕಲ್ಯಾಣಕ್ಕಾಗಿ ಸ್ವವಿವೇಚನೆಯಿಂದ ಖರ್ಚು ಮಾಡಿಕೊಳ್ಳಬಹುದೆಂಬ ಸಲಹೆಯನ್ನು ನೀಡಿದರು. ಈ ಸಂತ್ರಸ್ತ ಮಹಿಳೆಯರಿಗೆ ಸರ್ಕಾರದ ವಿವಿಧ ಇಲಾಖೆಗಳ ಚಾಲ್ತಿ ಯೋಜನೆಗಳಲ್ಲಿ ಫಲಾನುಭವಿಗಳಾಗಲು ಹೆಚ್ಚಿನ ಆದ್ಯತೆಯನ್ನು ನೀಡುವಂತೆ ಸರ್ಕಾರವನ್ನು ಒತ್ತಾಯಿಸಬೇಕೆಂದರು.

ಪಶುಸಂಗೋಪನೆ ಇಲಾಖೆಯ ಅಪರ ನಿರ್ದೇಶಕರಾದ ಡಾ.ಬಿ.ಎನ್.ಶಿವರಾಂ ರವರು ಮಾತನಾಡಿ ಸಂತ್ರಸ್ತ ಕುಟುಂಬಗಳಿಗೆ "ಪಶುಭಾಗ್ಯ" ಯೋಜನೆಯಡಿ ಆದ್ಯತೆಯನ್ನು ನೀಡಲಾಗುತ್ತಿದೆ. ಈ ಯೋಜನೆಯಲ್ಲಿ ದೊರಕುವ ಎಲ್ಲಾ ಸೌಲಭ್ಯಗಳನ್ನೂ ಸಹ ಈ ಕುಟುಂಬಗಳಿಗೆ ಆದ್ಯತೆಯ ಮೆರೆಗೆ ನೀಡುವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದರು. ಈ ಯೋಜನೆಯ ಮೂಲಕ ಕುರಿ, ಕೋಳಿ, ಮೇಕೆ ಇತ್ಯಾದಿ ಅನೇಕ ಸಾಕು ಪ್ರಾಣಿಗಳನ್ನು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ. ಇವು ಆ ಕುಟುಂಬಗಳಿಗೆ ಆರ್ಥಿಕ ಸುಸ್ಥಿರತೆಯನ್ನು ಕಂಡುಕೊಳ್ಳಲು ಸಹಾಯಕವಾಗುತ್ತದೆ ಎಂದು ಅವರು ಹೇಳಿದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಶ್ರೀ ವೈ.ಸಿ.ರವಿಕುಮಾರ್ ರವರು ನಂತರದಲ್ಲಿ ಮಾತನಾಡಿದರು. ಶಿಕ್ಷಣ ಇಲಾಖೆಯು ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಪಿ.ಯು.ಸಿವರೆಗೆ ಶಿಕ್ಷಣ ಶುಲ್ಕವನ್ನು ತೆಗೆದುಕೊಳ್ಳುವುದಿಲ್ಲ. ಸಂತ್ರಸ್ತ ಮಹಿಳೆಯರ ಕುಟುಂಬಗಳಲ್ಲಿನ ಮಕ್ಕಳು ಖಾಸಗಿ ಶಾಲೆಗಳಲ್ಲಿ ಓದುತ್ತಿದ್ದ ಪಕ್ಷದಲ್ಲಿ ಗರಿಷ್ಠ 24 ಸಾವಿರ ರೂಪಾಯಿಗಳ ಶುಲ್ಕ ವಿನಾಯಿತಿಯನ್ನು ಶಿಕ್ಷಣ ಇಲಾಖೆಯು ನೀಡುತ್ತದೆ ಎಂದು

ಅವರು ಹೇಳಿದರು. **ಆಯೋಗದ ಅಧ್ಯಕ್ಷರು ಈ ಬಗ್ಗೆ ಮಾತನಾಡಿ ಸಂತ್ರಸ್ತ ಕುಟುಂಬಗಳ ಮಕ್ಕಳನ್ನು ಮೊರಾರ್ಜಿ ಶಾಲೆಗಳಲ್ಲಿ ಹಾಗೂ ಕೇಂದ್ರೀಯ ಶಾಲೆಗಳಲ್ಲಿ ಓದಿಸಲು ಶಿಕ್ಷಣ ಇಲಾಖೆಯು ಪ್ರಯತ್ನಿಸಬೇಕೆಂದರು.**

ನಂತರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ 3 ಜನ ಹಿರಿಯ ವೈದ್ಯಾಧಿಕಾರಿಗಳು ಮಾತನಾಡಿದರು. ಮೊದಲಿಗೆ ಮಾತನಾಡಿದ ಡಾ.ರಜನಿರವರು ಪ್ರತಿ ಆತ್ಮಹತ್ಯೆ ಮಾಡಿಕೊಳ್ಳುವ ವ್ಯಕ್ತಿಗಳು ನಿಜವಾಗಿ ಆತ್ಯಹತ್ಯೆ ಮಾಡಿಕೊಳ್ಳುವುದಕ್ಕೆ ಮುಂಚಿತವಾಗಿ 8 ಬಾರಿ ಆತ್ಯಹತ್ಯೆಗೆ ಪ್ರಯತ್ನಿಸುತ್ತಾರೆ. ಅದಕ್ಕಿಂತಲೂ ಮುಂಚಿತವಾಗಿ ಸುಮಾರು 40 ಬಾರಿ ಆತ್ಯಹತ್ಯೆ ಬಗ್ಗೆ ಯೋಚಿಸಿರುತ್ತಾರೆ. ಇದಕ್ಕೆ ಅವರ ಖಿನ್ನತೆಯೇ ಕಾರಣವಾಗಿರುತ್ತದೆ. ಮದ್ಯ ಸೇವನೆಯು ಖಿನ್ನತೆಯನ್ನು ಇನ್ನಷ್ಟು ಹೆಚ್ಚಿಸಿ ಆತ್ಯಹತ್ಯೆಗೆ ಪ್ರಚೋದಿಸುತ್ತದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡುವ ಶೇ.40 ರಿಂದ 50 ರಷ್ಟು ರೋಗಿಗಳು ಒಂದಲ್ಲಾ ಒಂದು ಮಾನಸಿಕ ಸಮಸ್ಯೆಯಿಂದ ಬಳಲುತ್ತಿರುತ್ತಾರೆ. ಶೇ.14 ರಷ್ಟು ರೋಗಿಗಳು ಸಾಮಾನ್ಯ ರೀತಿಯ ಮಾನಸಿಕ ಸಮಸ್ಯೆಗಳನ್ನು ಹೊಂದಿರುವುದು ಕಂಡುಬರುತ್ತದೆ ಮತ್ತು ಶೇ.1 ರಷ್ಟು ರೋಗಿಗಳು ತೀವ್ರವಾದ ಮಾನಸಿಕ ರೋಗಗಳಿಂದ ಬಳಲುತ್ತಿರುತ್ತಾರೆ. ಖಿನ್ನತೆಗೆ ಪೂರಕವಾಗಿ ಮದ್ಯವು ಕಿರಾಣಿ ಅಂಗಡಿಗಳಲ್ಲೂ ಸಹ ಸಿಗುತ್ತಿದೆ. ಆದ್ದರಿಂದ ಆರೋಗ್ಯ ಇಲಾಖೆಯು "ಮನೋ ಚೈತನ್ಯ" ಕಾರ್ಯಕ್ರಮವನ್ನು ರೂಪಿಸಿಕೊಂಡು ಗ್ರಾಮೀಣ ಜನತೆಯ ಮನೋಸ್ಥೈರ್ಯವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದೆ. ಈ ಕಾರ್ಯಕ್ರಮದ ಮೂಲಕ ಜಿಲ್ಲಾಮಟ್ಟದಲ್ಲಿ, ತಾಲ್ಲೂಕುಮಟ್ಟದಲ್ಲಿ ಹಾಗೂ ಹೋಬಳಿಗಳ ಮಟ್ಟದಲ್ಲಿ ತಿಳುವಳಿಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಕೃಷಿ ಬೆಲೆ ಆಯೋಗದ ಅಧ್ಯಕ್ಷರು ಮಾತನಾಡಿ ಆರೋಗ್ಯ ಇಲಾಖೆಯ ಕ್ರಮವನ್ನು ಶ್ಲಾಘಿಸಿದರು ಜೊತೆಗೆ ರೈತರ ಮಾನಸಿಕ ಸಮಸ್ಯೆಗಳ ಬಗ್ಗೆ ಕೃಷಿ ಬೆಲೆ ಆಯೋಗದ ಸಹಯೋಗದೊಂದಿಗೆ ಅಧ್ಯಯನಗಳನ್ನು ಕೈಗೊಳ್ಳಬೇಕೆಂದು ಮಾನಸಿಕ ತಜ್ಞರಾದ ಡಾ.ರಜನಿ ಯವರನ್ನು ಕೋರಿಕೊಂಡರು. ಇನ್ನಿಬ್ಬರು ವೈದ್ಯಾಧಿಕಾರಿಗಳಾದ ಡಾ.ಎ.ವಿ.ಶ್ರೀನಿವಾಸ ಮತ್ತು ಡಾ.ರೆಜಿನಾ ಜೋಸೆಫ್ ಇವರುಗಳು ನಂತರದಲ್ಲಿ ಮಾತನಾಡಿದರು. ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆಯು (ಆಯುಷ್ಮಾನ್ ಭಾರತ – ಕರ್ನಾಟಕ) ರಾಜ್ಯದಲ್ಲಿ ಅಪಾರ ಜನಪ್ರಿಯತೆಯನ್ನುಗಳಿಸುತ್ತಿದೆ. ಗ್ರಾಮೀಣ ಹಾಗೂ ನಗರಗಳಲ್ಲಿನ ಬಡಜನತೆಯು ಇದರ ಪ್ರಯೋಜನವನ್ನು ಪಡೆದುಕೊಳ್ಳುತ್ತಿದೆ. ವರ್ಷಕ್ಕೆ 5 ಲಕ್ಷ ರೂಪಾಯಿಗಳವರೆಗೆ ಚಿಕಿತ್ಸೆಯನ್ನು ಈ ಯೋಜನೆಯ ಮೂಲಕ ಅನುಮೋದಿತ ಪಟ್ಟಿಯಲ್ಲಿನ ಆಸ್ಪತ್ರೆಗಳಲ್ಲಿ ತೆಗೆದುಕೊಳ್ಳಬಹುದಾಗಿದೆ. ಆತ್ಯಹತ್ಯೆಯಿಂದ ನೊಂದ ಕುಟುಂಬಗಳ ಸದಸ್ಯರೂ ಸಹ ಈ ಯೋಜನೆಯಡಿ ಉಚಿತ ಚಿಕಿತ್ಸೆಯನ್ನು ತೆಗೆದುಕೊಳ್ಳಬಹುದೆಂದು ವೈದ್ಯಾಧಿಕಾರಿಗಳು ಸಲಹೆ ನೀಡಿದರು. ಈ ಯೋಜನೆಯಡಿ ಫಲಾನುಭವಿಗಳಾಗುವ ಸಲುವಾಗಿ ಬಡ ಜನತೆಗೆ ಗುರುತಿನ ಚೀಟಿಯನ್ನೂ ಸಹ ನೀಡಲಾಗುತ್ತಿದೆ. ಗುರುತಿನ ಚೀಟಿಯನ್ನು ಪಡೆದುಕೊಂಡು ಅದರ ಮೂಲಕ ಚಿಕಿತ್ಸೆಗಳನ್ನು ಪಡೆದುಕೊಳ್ಳಬೇಕೆಂದು ಅವರು ಹೇಳಿದರು.

ರಾಜ್ಯದ ರೇಷ್ಮೆ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀಮತಿ ಜಿ ಸುಕುಮಾರಿ ಹಾಗೂ ಉಪ ನಿರ್ದೇಶಕರಾದ ಶ್ರೀಮತಿ ಜಿ ಇಂದ್ರಾಣಿ ಇವರುಗಳು ನಂತರದಲ್ಲಿ ಮಾತನಾಡಿದರು. ರೇಷ್ಮೆ ಇಲಾಖೆಯ ಎಲ್ಲಾ ಚಾಲ್ತಿ ಯೋಜನೆಗಳಲ್ಲೂ ಸಹ ಸಂತ್ರಸ್ತ ಮಹಿಳೆಯರಿಗೆ ಫಲಾನುಭವಿಗಳಾಗಲು ಅವಕಾಶ ಮಾಡಿಕೊಡಲಾಗುವುದು ಎಂದು ಅವರುಗಳು ಹೇಳಿದರು.

ಮಕಾಮ್ ಸಂಸ್ಥೆಯ ಪ್ರತಿನಿಧಿಗಳು ಈ ಹಂತದಲ್ಲಿ ಮಾತನಾಡಿ ಸರ್ಕಾರವು ಒಂದು ಆದೇಶವನ್ನು ಹೊರಡಿಸಿ ಎಲ್ಲಾ ಸರ್ಕಾರಿ ಇಲಾಖೆಗಳೂ ಸಹ ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ಮತ್ತು ಪುನರ್‌ವಸತಿ ಕಲ್ಪಿಸಲು ಆದ್ಯತೆಯ ಮೇರೆಗೆ ಕಾರ್ಯಪ್ರವೃತ್ತವಾಗಬೇಕು ಎಂದು ಆದೇಶಿಸಬೇಕೆಂದು ಕೋರಿಕೊಂಡರು. ಈ ಆದೇಶದಲ್ಲಿ ಗುತ್ತಿಗೆ ಆಧಾರದಲ್ಲಿ ಕೃಷಿ ಕಾರ್ಯವನ್ನು ಮಾಡುತ್ತಿರುವ ಕುಟುಂಬಗಳನ್ನೂ ಸಹ ಗಣನೆಗೆ ತೆಗೆದುಕೊಳ್ಳಬೇಕೆಂದು ಕೋರಿದರು. ತೆಲಂಗಾಣ

ರಾಜ್ಯದಲ್ಲಿನ 3 ಜಿಲ್ಲೆಗಳಲ್ಲಿ ಕಿಸಾನ್ ಮಿತ್ರ ಸಹಾಯವಾಣಿಯು ಕಾರ್ಯನಿರತವಾಗಿದ್ದು, ರೈತರ ಸಾಲವನ್ನು ತೀರಿಸುವ ಬಗ್ಗೆ ತಿಳುವಳಿಕೆ ನೀಡುತ್ತಿದೆ. ಕೇರಳದಲ್ಲಿ ಈ ಬಗ್ಗೆ ಆಯೋಗ ಒಂದನ್ನೂ ಸಹ ರಚಿಸಲಾಗಿದೆ. ಕರ್ನಾಟಕದಲ್ಲೂ ಸಹ ಈ ರೀತಿ ಮಾಡಬಹುದು ಎಂದು ಅವರು ಸಲಹೆ ನೀಡಿದರು.

ಅಖಂಡ ಕರ್ನಾಟಕ ರೈತ ಸಂಘದ ಅಧ್ಯಕ್ಷರಾದ ಶ್ರೀ ಸೋಮಗುಡ್ಡ ರಂಗಸ್ವಾಮಿರವರು ಮಾತನಾಡಿ ಸಂತ್ರಸ್ತ ಕುಟುಂಬಗಳಿಗೆ ಸರ್ವ ರೀತಿಯಲ್ಲೂ ಸೌಲಭ್ಯಗಳನ್ನು ಒದಗಿಸಲು ಸರ್ಕಾರವು ಪ್ರಯತ್ನಿಸಬೇಕು ಎಂದರು. ಸಾಧ್ಯವಾದರೆ ಆ ಕುಟುಂಬದ ಒಬ್ಬ ಸದಸ್ಯರಿಗೆ ಸರ್ಕಾರಿ ನೌಕರಿಯನ್ನೂ ಸಹ ನೀಡಬೇಕೆಂದು ಅವರು ಸೂಚಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ಕಛೇರಿ ಕಾರ್ಯದರ್ಶಿಗಳಾದ ಶ್ರೀ ಪಿ ಗೋಪಾಲ್ ರವರು ಮಾತನಾಡಿ ಆತ್ಮಹತ್ಯೆ ಮಾಡಿಕೊಳ್ಳದೆ ಇರುವ ರೈತರ ಬಗ್ಗೆಯೂ ಸಹ ಸರ್ಕಾರವು ಯೋಚಿಸಬೇಕು ಎಂದು ಹೇಳಿದರು. ನಿರ್ದಿಷ್ಟ ಬೆಳೆ ಯೋಜನೆಯ ಬಗ್ಗೆ ರೈತರನ್ನು ಒತ್ತಾಯಿಸಬಾರದು ಹಾಗೂ ಆ ಬಗ್ಗೆ ತಿಳುವಳಿಕೆಯನ್ನು ಮಾತ್ರ ನೀಡಬೇಕು ಎಂದು ಅವರು ತಿಳಿಸಿದರು.

ಸಿಐಇಡಿಎಸ್ ಸಂಸ್ಥೆಯ ಮಹಿಳಾ ಹೋರಾಟಗಾರ್ತಿಯಾದ ಶ್ರೀಮತಿ ಮಮತಾ ಯಜಮಾನ್ ರವರು ಮಾತನಾಡಿ ಸಂತ್ರಸ್ತೆಯರಿಗೆ ಬರಗಾಲ ಹಾಗೂ ಪ್ರವಾಹದ ಸಮಯಗಳಲ್ಲಿ ಆತ್ಮಸ್ಥೈರ್ಯ ನೀಡಬೇಕು. ಅವರುಗಳಿಗೆ ಮನೆ ಇಲ್ಲದೇ ಇದ್ದರೆ ವಸತಿ ಸೌಲಭ್ಯ ಕಲ್ಪಿಸಬೇಕು ಎಂದು ಹೇಳಿದರು. ಅವರುಗಳಿಗೆ ಸಹಾಯವಾಣಿ ಸೌಲಭ್ಯ ಮತ್ತು ಗುರುತಿನ ಚೀಟಿ ಸೌಲಭ್ಯ ಒದಗಿಸಬೇಕೆಂದರು.

ಕರ್ನಾಟಕ ರಾಜ್ಯ ರೈತ ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಟಿ ಅನಸೂಯಮ್ಮ ರವರು ನಂತರದಲ್ಲಿ ಮಾತನಾಡಿದರು. ಆತ್ಮಹತ್ಯೆಗೆ ಸಂಬಂಧಿಸಿದಂತೆ, ಗ್ರಾಮ ಸಭೆಗಳಿಗೆ ಮಹತ್ವವನ್ನು ನೀಡಬೇಕೆಂದರು. ಜೊತೆಗೆ ಮಕಾಮ್ ಸಂಸ್ಥೆಯು ಕೈಗೊಂಡಿದ್ದ ಈ ಸಮೀಕ್ಷಾ ಅಧ್ಯಯನವು ಸಂತ್ರಸ್ತೆಯರಿಗೆ ಅನುಕೂಲವಾಗಲಿ ಎಂದು ಅವರು ಆಶಿಸಿದರು.

ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯ ಉಪಾಧ್ಯಕ್ಷರಾದ ಶ್ರೀ ಸುರೇಶ್ ಎಂ ಪಾಟೀಲ್ ರವರು ಮಾತನಾಡಿದರು ಮತ್ತು ರೈತರು ಅಪಘಾತಗಳಿಗೆ ತುತ್ತಾದಾಗಲೂ ಸಹ ಅವರುಗಳಿಗೆ ಇದೇ ರೀತಿಯಲ್ಲಿ ಪರಿಹಾರ ಒದಗಿಸಬೇಕೆಂದರು. ಜೊತೆಗೆ ಸಾಲ ನೀತಿಯಲ್ಲಿ ಸುಧಾರಣೆಗಳನ್ನು ತರಬೇಕೆಂದರು. ಉದಾಹರಣೆಯೊಂದನ್ನು ಹೇಳಿದ ಅವರು ಅವರಿಗೆ ಗೊತ್ತಿರುವ ಸಂತ್ರಸ್ತೆಯೊಬ್ಬರಿಗೆ ಒಂದು ವರ್ಷದಿಂದ ಪರಿಹಾರ ಸಿಕ್ಕಿಲ್ಲ. ಪರಿಹಾರವು ಅಂದುಕೊಂಡಷ್ಟು ಸುಲಭವಾಗಿ ಸಿಗುವುದಿಲ್ಲ ಎಂದು ಹೇಳಿದರು.

ಕೋಲಾರದ ತಿಪ್ಪಸಂದ್ರ ಗ್ರಾಮದ ಶ್ರೀಮತಿ ಚೌಡಮ್ಮ ಎಂಬ ಸಂತ್ರಸ್ತ ಮಹಿಳೆಯನ್ನು ಅವರ ಮಗಳು ಕರೆದುಕೊಂಡು ಬಂದಿದ್ದರು. ಈ ಸಂತ್ರಸ್ತೆಗೆ ದಾಖಲೆಗಳನ್ನು ಒದಗಿಸಿದ್ದರೂ ಸಹ ಪರಿಹಾರ ಸಿಕ್ಕಿಲ್ಲ ಎಂದು ಸಭೆಗೆ ಗೊತ್ತಾಯಿತು. ಈ ಬಗ್ಗೆ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ನಿರ್ಧರಿಸಲಾಯಿತು.

ಕೃಷಿ ಬೆಲೆ ಆಯೋಗದ ತಾಂತ್ರಿಕ ಸಹಾಯಕರಲ್ಲಿ ಒಬ್ಬರಾದ ಶ್ರೀ ಎ.ಕೆ ಅಭಿಷೇಕ್ ರವರು ನಂತರದಲ್ಲಿ ಮಾತನಾಡಿದರು. ಅವರ ಅಭಿಪ್ರಾಯದ ಪ್ರಕಾರ ಪರಿಹಾರದ ಆಮಿಷಕ್ಕೆ ಬಲಿಯಾಗಿ ದುರ್ಬಲ ಮನಸ್ಸಿನ ರೈತರನ್ನು ಇತರರು ಆತ್ಮಹತ್ಯೆಗೆ ಪ್ರಚೋದಿಸಬಹುದಾಗಿದೆ. ಸಭೆಯಲ್ಲಿ ಈ ಬಗ್ಗೆ ವಾಗ್ವಾದಗಳು ನಡೆದವು ಮತ್ತು ಇವರ ಅಭಿಪ್ರಾಯವು ತಿರಸ್ಕೃತಗೊಂಡಿತು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಶ್ರೀ ಜಿ ಸಿ ಬೈಯಾರೆಡ್ಡಿರವರು ಮಾತನಾಡಿದರು. ಶ್ರೀಯುತರ ಪ್ರಕಾರ ರೈತರ ಆತ್ಮಹತ್ಯೆಯು ಒಂದು ಕ್ಲಿಷ್ಟ ಸಮಸ್ಯೆಯಾಗಿದೆ. ಪರಿಹಾರ ದೊರಕಿದ ನಂತರವೂ ಸಹ ಮನೆಯವರೇ ಕಿತ್ತಾಡಿಕೊಂಡು ಮನೆಯ ನೆಮ್ಮದಿಯನ್ನು ಹಾಳುಮಾಡಿಕೊಂಡ ಜೀವಂತ ನಿದರ್ಶನಗಳೂ ಸಹ ಇವೆ. ಆದ್ದರಿಂದ ಈ ಪರಿಸ್ಥಿತಿಯನ್ನು ನಾಜೂಕಾಗಿ ಬಗೆಹರಿಸಬೇಕು. ಮನೋವೈದ್ಯರು ಹೇಳಿದ ರೀತಿಯಲ್ಲಿ ಕುಟುಂಬಗಳಲ್ಲಿ ಈ ಬಗ್ಗೆ ತಿಳುವಳಿಕೆಯನ್ನು ಹೆಚ್ಚಿಸಬೇಕು ಎಂದು ಹೇಳಿದರು. ಹವಾಮಾನಕ್ಕೆ ಅನುಗುಣವಾಗಿ ತಕ್ಕ ಬೆಳೆಯನ್ನು ಬೆಳೆದು ಲಕ್ಷಾಧೀಶ್ವರರು ಹಾಗೂ ಕೋಟ್ಯಾಧೀಶ್ವರರು ಆಗಿರುವ ಸ್ಥಳೀಯ ಉದಾಹರಣೆಗಳೇ ನಮ್ಮ ಮುಂದೆ ಇರುವಾಗ ಆತ್ಮಹತ್ಯೆಯಂತಹ ದುರ್ಬಲ ಕೃತ್ಯಕ್ಕೆ ರೈತರು ಮನಗೊಡಬಾರದೆಂದು ಅವರು ಸಲಹೆ ಮಾಡಿದರು.

ಕೊನೆಯಲ್ಲಿ ಕೃಷಿ ಬೆಲೆ ಆಯೋಗದ ಅಧ್ಯಕ್ಷರು ಅಧ್ಯಕ್ಷೀಯ ಭಾಷಣವನ್ನು ಮಾಡಿದರು. ಕೃಷಿ - ಜೀವಿ ಪರಿಸರ ಪದ್ಧತಿಗಳನ್ನು ಅನುಸರಿಸಿ ರೈತರು ಕೃಷಿಯನ್ನು ಮಾಡಬೇಕು. ಇದರಿಂದ ಕೃಷಿಯಲ್ಲಿನ ವೆಚ್ಚ ಕಡಿಮೆಯಾಗುವುದಲ್ಲದೆ ಜೀವಿಪರಿಸರವೂ ಸಹ ಉತ್ತಮಗೊಳ್ಳುತ್ತದೆ ಎಂದು ಅವರು ತಿಳಿಸಿದರು. ರೈತರು ಮತ್ತೆ ಮತ್ತೆ ಬೆಳೆ ವೈಫಲ್ಯಗಳು ಹಾಗೂ ಸ್ವಾಭಾವಿಕ ವಿಪತ್ತುಗಳಿಗೆ ಈಡಾಗುವುದನ್ನು ತಪ್ಪಿಸಲು ನೀರಿನ ಮೂಲಗಳನ್ನು ಸಂರಕ್ಷಿಸುವುದು ಅತಿ ಮುಖ್ಯವೆಂದು ಅವರು ತಿಳಿಸಿದರು. ಬೆಳೆಗಳಿಗೆ ರಕ್ಷಣಾತ್ಮಕ ನೀರಾವರಿಯನ್ನು ನೀಡುವುದು, ಬೆಳೆ ವಿಮೆ ಮಾಡಿಸುವುದು ಇತ್ಯಾದಿಗಳು ಕೆಲವು ಉಪಾಯಗಳಾಗಿವೆ. ವಿಪತ್ತುಗಳಿಗೆ ಪರಿಹಾರ ನೀಡುವಿಕೆಯೂ ಸಹ ಉತ್ತಮ ಮಾರ್ಗವಾಗಿದೆ. ರಾಜ್ಯವು ಬೇರೆಲ್ಲಾ ವಿಷಯಗಳಲ್ಲಿ ಮಾದರಿ ರಾಜ್ಯವಾಗಿದ್ದು, ಈ ವಿಷಯದಲ್ಲೂ ಸಹ ಅಂದರೆ ಆತ್ಮಹತ್ಯೆ ತಡೆಗಟ್ಟುವುದು ಹಾಗೂ ಸಂತ್ರಸ್ತೆಯರಿಗೆ ಪರಿಹಾರ ಹಾಗೂ ಪುನರ್ವಸತಿ ಕಲ್ಪಿಸುವುದು ಇತ್ಯಾದಿಗಳಲ್ಲೂ ಸಹ ಮಾದರಿ ರಾಜ್ಯವಾಗಬೇಕೆಂದು ಅವರು ಆಶಿಸಿದರು ಮತ್ತು ಸಭೆಯು ಇದನ್ನು ಸರ್ವಾನುಮತದಿಂದ ಅಂಗೀಕರಿಸಿತು.

ಕೃಷಿ ಬೆಲೆ ಆಯೋಗದ ಹೆಚ್ಚುವರಿ ತಾಂತ್ರಿಕ ಸಲಹೆಗಾರರಾದ ಶ್ರೀ ನಿರಂಜನ್ ಐತಾಳ್ ರವರ ವಂದನಾರ್ಪಣೆಯೊಂದಿಗೆ ಒಂದು ದಿವಸದ ಈ ಕಾರ್ಯಾಗಾರವು ಮುಕ್ತಾಯಗೊಂಡಿತು.

# ಅನುಬಂಧ

**ಸಭೆಯಲ್ಲಿ ಹಾಜರಿದ್ದ ಸಭಿಕರ ಪಟ್ಟಿ**

1. ಶ್ರೀ ಹನುಮನಗೌಡ ಬೆಳಗುರ್ಕಿ, ಅಧ್ಯಕ್ಷರು, ಕರ್ನಾಟಕ ಕೃಷಿ ಬೆಲೆ ಆಯೋಗ, ಬೆಂಗಳೂರು
2. ಶ್ರೀ ಬಿ.ವೈ.ಶ್ರೀನಿವಾಸ, ಕೃಷಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಕೃಷಿ ಬೆಲೆ ಆಯೋಗ, ಬೆಂಗಳೂರು
3. ಡಾ.ಕೆ.ವಿ.ಜಗದೀಶ್, ಐ.ಪಿ.ಎಸ್, ಅಪರ ಮಹಾ ನಿರೀಕ್ಷಕರು, (ಸಾಮಾನ್ಯ), ಕರ್ನಾಟಕ ಪೋಲಿಸ್ ಇಲಾಖೆ, ಬೆಂಗಳೂರು.
4. ಡಾ.ಬಿ.ಎನ್.ಶಿವರಾಂ, ಅಪರ ನಿರ್ದೇಶಕರು (ಆರ್‌ಕೆವಿವೈ) ಪಶುಸಂಗೋಪನಾ ಇಲಾಖೆ, ಬೆಂಗಳೂರು.
5. ಶ್ರೀ ಪರಂಧಾಮಯ್ಯ, ಅಪರ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು.
6. ಶ್ರೀಮತಿ ವಿ.ಡಿ.ರೂಪಾದೇವಿ, ಜಂಟಿ ಕೃಷಿ ನಿರ್ದೇಶಕರು (ಯೋಜನೆ), ಕೃಷಿ ಇಲಾಖೆ, ಬೆಂಗಳೂರು.
7. ಡಾ.ಪಿ.ರಜನಿ, ಉಪ ನಿರ್ದೇಶಕರು (ಮಾನಸಿಕ ಆರೋಗ್ಯ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.
8. ಡಾ.ಎನ್.ವಿ.ಕಮಲ, ಉಪ ಕೃಷಿ ನಿರ್ದೇಶಕರು, ಕೃಷಿ ಬೆಲೆ ಆಯೋಗ, ಬೆಂಗಳೂರು.
9. ಡಾ.ಎ.ವಿ.ಶ್ರೀನಿವಾಸ, ಉಪ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.
10. ಡಾ.ರೆಜಿನಾ ಜೋಸೆಫ್, ಉಪ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.
11. ಶ್ರೀ ಜಿ.ಎಸ್.ಕಾಂತಾಮಣಿ, ಜಿಲ್ಲಾ ಶಿಕ್ಷಣ ಅಧಿಕಾರಿ, ರೈತರ ಆತ್ಮಹತ್ಯೆ, ಬೆಳೆ ವಿಮೆ ವಿಭಾಗ, ಬೆಂಗಳೂರು.
12. ಶ್ರೀ ವೈ.ಸಿ.ರವಿ ಕುಮಾರ್, ಹಿರಿಯ ಸಹಾಯಕ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
13. ಶ್ರೀಮತಿ ಜಿ.ಸುಕುಮಾರಿ, ಜಂಟಿ ನಿರ್ದೇಶಕರು, ರೇಷ್ಮೆ ಇಲಾಖೆ, ಬೆಂಗಳೂರು.
14. ಶ್ರೀಮತಿ ಜಿ.ಇಂದ್ರಾಣಿ, ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಬೆಂಗಳೂರು.
15. ಶ್ರೀ ಜಿ.ಸಿ.ಬೈಯಾರೆಡ್ಡಿ, ರಾಜ್ಯಾಧ್ಯಕ್ಷರು, ಕರ್ನಾಟಕ ಪ್ರಾಂತ ರೈತ ಸಂಘ, ಬೆಂಗಳೂರು.
16. ಶ್ರೀ ಸೋಮಗುಡ್ಡ ರಂಗಸ್ವಾಮಿ, ಅಧ್ಯಕ್ಷರು, ಅಖಂಡ ಕರ್ನಾಟಕ ರೈತ ಸಂಘ, ಚಿತ್ರದುರ್ಗ.
17. ಶ್ರೀ ಸುರೇಶ್ ಎಂ ಪಾಟೀಲ್, ರಾಜ್ಯ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘ, ಬೆಂಗಳೂರು.
18. ಶ್ರೀಮತಿ ಬಿ.ಅನಸೂಯಮ್ಮ, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ, ಬೆಂಗಳೂರು.
19. ಶ್ರೀಮತಿ ಕವಿತ ಕುರುಗಂಟಿ, ಮುಖ್ಯಸ್ಥರು, ಮಹಿಳಾ ರೈತರ ಹಕ್ಕುಗಳ ವೇದಿಕೆ (ಮಕಾಮ್ ಸಂಸ್ಥೆ), ಬೆಂಗಳೂರು
20. ಶ್ರೀಮತಿ ಕವಿತ ಶ್ರೀನಿವಾಸನ್, ಕಾರ್ಯದರ್ಶಿಗಳು, ಮಹಿಳಾ ರೈತರ ಹಕ್ಕುಗಳ ವೇದಿಕೆ (ಮಕಾಮ್ ಸಂಸ್ಥೆ), ಬೆಂಗಳೂರು
21. ಶ್ರೀಮತಿ ಅನಿತಾ ಎಂ, ಮಕಾಮ್ ಸಂಸ್ಥೆ, ಬೆಂಗಳೂರು.
22. ಶ್ರೀಮತಿ ಶಾರದ ಗೋಪಾಲ್, ಜಾಗೃತಿ ಸಂಸ್ಥೆ ಮತ್ತು ಮಕಾಮ್ ಸಂಸ್ಥೆ, ಧಾರವಾಡ
23. ಶ್ರೀಮತಿ ಜಿ.ಶ್ರೀಮತಿ, ರೈತ ಸಂಘ, ಹಗರಿ ಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ, ಬಳ್ಳಾರಿ.
24. ಶ್ರೀಮತಿ ಮಮತಾ ಯಜಮಾನ್, ಮಹಿಳಾ ಹೋರಾಟಗಾರ್ತಿ, ಸಿಐಇಡಿಎಸ್ ಸಂಸ್ಥೆ.
25. ಶ್ರೀಮತಿ ನಿಂಗಮ್ಮ ಸವಣೂರ, ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ ಮತು ಮಕಾಮ್, ಧಾರವಾಡ
26. ಶ್ರೀ ಜೆ.ಎಂ.ವೀರ ಸಂಗಯ್ಯ, ಕರ್ನಾಟಕ ರಾಜ್ಯ ರೈತ ಸಂಘ, ಬಳ್ಳಾರಿ.
27. ಶ್ರೀ ಅಜಯ್ ಕುಮಾರ್, ಕರ್ನಾಟಕ ರಾಜ್ಯ ರೈತ ಸಂಘ, ಕಡೂರು.
28. ಶ್ರೀ ಕೆ.ಆರ್.ಭಾಸ್ಕರ್, ರೈತರು.
29. ಶ್ರೀ ಪಿ.ಗೋಪಾಲ, ಕಛೇರಿ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ರೈತ ಸಂಘ, ಬೆಂಗಳೂರು.
30. ಶ್ರೀಮತಿ ಚೌಡಮ್ಮ, ಸಂತ್ರಸ್ತ ರೈತ ಮಹಿಳೆ, ತಿಪ್ಪಸಂದ್ರ, ಕೋಲಾರ.
31. ಶ್ರೀಮತಿ ಬಿ.ವಿ.ಸುಮಾ, ಕೃಷಿ ಅಧಿಕಾರಿ, ಕೃಷಿ ಬೆಲೆ ಆಯೋಗ, ಬೆಂಗಳೂರು.
32. ಶ್ರೀ ನಿರಂಜನ್ ಐತಾಳ್, ಹೆಚ್ಚುವರಿ ತಾಂತ್ರಿಕ ಸಲಹೆಗಾರರು, ಕೃಷಿ ಬೆಲೆ ಆಯೋಗ, ಬೆಂಗಳೂರು.
33. ಡಾ.ಶ್ರೀಧರ್ ಅಡಿಗ, ಆಪ್ತ ಕಾರ್ಯದರ್ಶಿಗಳು, ಕೃಷಿ ಬೆಲೆ ಆಯೋಗ, ಬೆಂಗಳೂರು.
34. ಡಾ.ಕೆ.ಎಸ್.ಜನಾರ್ದನ್, ತಾಂತ್ರಿಕ ಸಹಾಯಕರು, ಕೃಷಿ ಬೆಲೆ ಆಯೋಗ, ಬೆಂಗಳೂರು
35. ಶ್ರೀಮತಿ ಜಯಶ್ರೀ ಬಿ ನಾರಾಯಣಪುರ, ತಾಂತ್ರಿಕ ಸಹಾಯಕರು, ಕೃಷಿ ಬೆಲೆ ಆಯೋಗ, ಬೆಂಗಳೂರು.
36. ಕುಮಾರಿ ನಿಶಿತಾ ಕೆ, ತಾಂತ್ರಿಕ ಸಹಾಯಕರು, ಕೃಷಿ ಬೆಲೆ ಆಯೋಗ, ಬೆಂಗಳೂರು.
37. ಶ್ರೀ ಎ.ಕೆ.ಅಭಿಷೇಕ್, ತಾಂತ್ರಿಕ ಸಹಾಯಕರು, ಕೃಷಿ ಬೆಲೆ ಆಯೋಗ, ಬೆಂಗಳೂರು.